ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 24 ಸೋಮವಾರ 2025

ಸಂಪುಟ: 46 | ಸಂಚಿಕೆ: 216 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಬೆಳವಾಡಿ ಕಿರಿಯ ಪ್ರಾಥಮಿಕ ಶಾಲೆಗೆ 20 ಲಕ್ಷ ಅನುದಾನ ಸಂಸದ ಯದುವೀರ್‌ರಿಂದ ಗುದ್ದಲಿಪೂಜೆ



ಬೆಳವಾಡಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹೊಸ ಅಡುಗೆಮನೆ ನಿರ್ಮಾಣ ಕಾಮಗಾರಿಗೆ ಸಂಸದ ಯದುವೀರ್ ಒಡೆಯರ್ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರು,ನ.23–ಮೈಸೂರು ತಾಲೂಕಿನ ಬೆಳವಾಡಿ ಗ್ರಾಮದ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಿರ್ಮಿಸಲುದ್ದೇಶಿಸಿರುವ ಹೊಸ ಅಡುಗೆಮನೆ ಕಾಮಗಾರಿಗೆ 20 ಲಕ್ಷ ರೂ. ಅನುದಾನವನ್ನು ಮಂಜೂರು ಮಾಡಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಗುದ್ದಲಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಬೆಳವಾಡಿ ಗ್ರಾಮದ ಶಾಲೆಯ ಮಕ್ಕಳು ಆರೋಗ್ಯಕರ ಮತ್ತು ಸುರಕ್ಷಿತ ವಾತಾವರಣದಲ್ಲಿ ಶಿಕ್ಷಣ ಪಡೆಯಬೇಕು ಎಂಬುದು ನಮ್ಮ ಆದ್ಯತೆ. ಅಡುಗೆ ಮನೆಯ ನಿರ್ಮಾಣ ಪೂರ್ಣಗೊಂಡಾಗ ಮಧ್ಯಾಹ್ನ ಊಟದ ಗುಣಮಟ್ಟ ಮತ್ತು ಸ್ವಚ್ಛತೆಯಲ್ಲಿ ದೊಡ್ಡ ಬದಲಾವಣೆ ಕಾಣುತ್ತದೆ. ನಮ್ಮ ಕ್ಷೇತ್ರದ ಶಿಕ್ಷಣ ಹಾಗೂ ಗ್ರಾಮೀಣ ಅಭಿವೃದ್ಧಿಗೆ ನಿರಂತರ ಹೂಡಿಕೆ ಮುಂದುವರಿಯುತ್ತದೆ ಎಂದು ಹೇಳಿದರು.

ಮಂಡಲದ ಅಧ್ಯಕ್ಷ ವೈ.ಟಿ.ರವಿ ಲಕ್ಷೀಪುರ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಶಾಲಾ ಮೂಲಸೌಕರ್ಯ ಸುಧಾರಣೆಗೆ ಸಂಸದರು ನೀಡುತ್ತಿರುವ ಸಹಕಾರ ಅತ್ಯಂತ ಪ್ರೋತ್ಸಾಹಕಾರಿ. ಬೆಳವಾಡಿ ಗ್ರಾಮದ ಈ ಯೋಜನೆಯು ಗ್ರಾಮೀಣ ಶಿಕ್ಷಣ ವಲಯದ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಮುಖ ಹೆಜ್ಜೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಮುಖಂಡ ಎಸ್.ಆರ್.ಗೋಪಾಲ್‌ರಾವ್, ಮೋನಿಕಾ, ಕೂರ್ಗಳ್ಳಿ ರೇವಣ್ಣ, ಸುನೀಲ್, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಕುಮಾರ್, ಶರತ್, ಮೊಗಣ್ಣಗೌಡ, ನಂಜುಂಡೇಗೌಡ, ಬೆಳವಾಡಿ ಮಂಜುನಾಥ್, ಬಸವಣ್ಣ, ಯೋಗೇಶ್ ಇನ್ನಿತರರಿದ್ದರು.

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ವಧುವಿನ ಆಭರಣ ಪ್ರದರ್ಶನ



ಮೈಸೂರಿನ ಮಲಬಾರ್ ಗೋಲ್ಡ್ & ಡೈಮಂಡ್ಸ್ ಶೋ ರೂಂನಲ್ಲಿ ವಧುವಿನ ಆಭರಣ ಪ್ರದರ್ಶನವನ್ನು ವಿಶೇಷ ಗ್ರಾಹಕರು ಹಾಗೂ ರೂಪದರ್ಶಿಗಳಾದ ಮಿಸ್ ಕೀರ್ತನಾ, ಮಿಸ್ ವರ್ಷಾ, ಮಿಸ್ ನಿಧಿ, ಮಿಸ್ ಹುಮೈರಾ ಫಲಕ್ ಉಪಸ್ಥಿತಿಯಲ್ಲಿ ಅನಾವರಣಗೊಳಿಸಲಾಯಿತು. ಈ ವೇಳೆ ದಕ್ಷಿಣ ವಲಯ ಮುಖ್ಯಸ್ಥರು, ಮೈಸೂರು ಸ್ಟೋರ್ ಹೆಡ್ ಪಿ.ಶರಫುದ್ದೀನ್, ಅಸಿಸ್ಟೆಂಟ್ ಸ್ಟೋರ್ ಹೆಡ್ ಮೊಹಮ್ಮದ್ ಅನ್ವಾಜ್, ಉಪ ಮುಖ್ಯಸ್ಥರು ದಯಾನಂದ, ಮಲಬಾರ್ ಸಿಬ್ಬಂದಿ ಉಪಸ್ಥಿತರಿದ್ದರು.

ಕನ್ನಡ ರಾಜ್ಯೋತ್ಸವ...



ಮೈಸೂರಿನ ಕೆ.ಆರ್.ಆಸ್ಪತ್ರೆ ರಸ್ತೆಯ ದೊಡ್ಡ ಒಕ್ಕಲಗೇರಿ ರಾಷ್ಟ್ರಕವಿ ಕುವೆಂಪು ಹಾಗೂ ಡಾ.ರಾಜ್‌ಕುಮಾರ್ ಕನ್ನಡ ಗೆಳೆಯರ ಬಳಗದಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಮಾಜಿ ಶಾಸಕ ಎಲ್.ನಾಗೇಂದ್ರ ಧ್ವಜಾರೋಹಣ ನೆರವೇರಿಸಿದರು. ಡಾ.ಸುಶ್ರುತ್‌ಗೌಡ, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕ ಸೋಮಣ್ಣ, ಯೋಗಾನಂದ್, ಪಡುವಾರಹಳ್ಳಿ ರಾಮಕೃಷ್ಣ, ಅಧ್ಯಕ್ಷ ಕಿರಣ್, ರಘು, ಮಂಜುಗೌಡ, ವಿನೋದ್, ರಾಘವೇಂದ್ರ, ಜ್ಞಾನಪ್ರಕಾಶ್, ಯಶವಂತ, ನಾಗೇಶ್, ಸೂರಿ, ಮಂಜುನಾಥಗೌಡ, ನಿಖಿಲ್ ಇದ್ದರು.

ಮೈಸೂರು ವಿವಿಯಲ್ಲಿ ಭೂ–ಮಾಹಿತಿಶಾಸ್ತ್ರ, ಭೂ ಸಮೀಕ್ಷೆ ಕುರಿತು ಕಾರ್ಯಾಗಾರ



ಮೈಸೂರು ವಿವಿಯ ಭೌಗೋಳಿಕ ಮಾಹಿತಿ ತಂತ್ರಜ್ಞಾನ ಹಾಗೂ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ಭೂ–ಮಾಹಿತಿಶಾಸ್ತ್ರ ಮತ್ತು ಭೂ ಸಮೀಕ್ಷೆ ಕುರಿತು ಕಾರ್ಯಾಗಾರ ಆಯೋಜಿಸಲಾಗಿತ್ತು.

ಮೈಸೂರು, ನ.23– ಮೈಸೂರು ವಿಶ್ವವಿದ್ಯಾನಿಲಯದ ಭೌಗೋಳಿಕ ಮಾಹಿತಿ ತಂತ್ರಜ್ಞಾನ ಹಾಗೂ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ಆರ್‌ಯುಎಸ್‌ಎ ಪ್ರಾಯೋಜಿತ ಭೂ–ಮಾಹಿತಿಶಾಸ್ತ್ರ ಮತ್ತು ಭೂ ಸಮೀಕ್ಷೆ ವಿಷಯದಲ್ಲಿ ಎರಡು ದಿನಗಳ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳಿಗೆ ನವೀನ ತಂತ್ರಜ್ಞಾನ ಆಧಾರಿತ ಜ್ಞಾನ ವಿಸ್ತರಣೆಯ ಉದ್ದೇಶದಿಂದ ಈ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಮೈಸೂರು ವಿವಿ ಕುಲ ಸಚಿವೆ ಎಂ.ಕೆ. ಸವಿತಾ ಉದ್ಘಾಟಿಸಿ ಮಾತನಾಡಿ, ಭೂ ಸಮೀಕ್ಷೆಯಲ್ಲಿನ Total Station, GPS ಮತ್ತು Drone Surveying ಮೊದಲಾದ ಆಧುನಿಕ ತಂತ್ರಜ್ಞಾನಗಳ ಮಹತ್ವವನ್ನು ವಿವರಿಸಿ, ಇವು ಸಂಶೋಧನಾ ಕ್ಷೇತ್ರ ಹಾಗೂ ಆಡಳಿತಾತ್ಮಕ ಕಾರ್ಯಗಳಲ್ಲಿ ವಹಿಸುತ್ತಿರುವ ಪಾತ್ರವನ್ನು ಶ್ಲಾಘಿಸಿದರು.

ಅಟ್ಲಾಸ್ಟೈನ್ ಪ್ರೈವೇಟ್ ಲಿಮಿಟೆಡ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಡಾ. ಸುರೇಶ್ ಚಿತ್ರಾಪು, ಅತಿಥಿ ಭಾಷಣ ಮಾಡುತ್ತ, ನೈಜ ಭೂ ಸಮೀಕ್ಷಾ ಅನುಭವಗಳನ್ನು ಹಂಚಿಕೊಂಡು ವಿದ್ಯಾರ್ಥಿಗಳಲ್ಲಿ ಹೊಸ ಕುತೂಹಲ ಮೂಡಿಸಿದರು. ಸಂದರ್ಶಕ ಪ್ರಾಧ್ಯಾಪಕ ಪ್ರೊ.ರಾಮು ವಿಶ್ವ GIS ದಿನದ ಕುರಿತು ಮಾತನಾಡಿ, ಜಾಗತಿಕ ಮಟ್ಟದಲ್ಲಿ GISನ ವಿಸ್ತಾರ ಮತ್ತು ಅನ್ವಯಿಕತೆಯನ್ನು ವಿವರಿಸಿದರು. ವಿಭಾಗದ ಸಂಯೋಜಕಿ ಪ್ರೊ.ಜಯಶ್ರೀ ಸ್ವಾಗತಿಸಿದರು. ವಿಭಾಗದ ಅಧ್ಯಕ್ಷ ಪ್ರೊ.ಚಂದ್ರಶೇಖರ ಅಧ್ಯಕ್ಷತೆ ವಹಿಸಿದರು.

ಮೂತ್ರಪಿಂಡದ ಕಲ್ಲುಗಳಿಗೆ ಸಂಬಂಧಿಸಿದ ಉಚಿತ ಚಿಕಿತ್ಸೆ

ಮೈಸೂರು, ನ.23–ನ.24ರಿಂದ 3 ತಿಂಗಳವರೆಗೆ ಮೂತ್ರ ಪಿಂಡದಲ್ಲಿ ಕಲ್ಲುಗಳನ್ನು ಹೊಂದಿರುವ ರೋಗಿಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತಿದ್ದು, ಮೂತ್ರಪಿಂಡದಲ್ಲಿ ಕಲ್ಲುಗಳು 7 ಮಿಲಿಮೀಟರ್ ಗಳಿಗಿಂತ ಕಡಿಮೆ ಇರುವ ರೋಗಿಗಳಿಗೆ ಉಚಿತವಾಗಿ ಪ್ರಕೃತಿ ಚಿಕಿತ್ಸಾ ಪದ್ಧತಿಯ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಡಾ.ಎಂ.ಸೌಮ್ಯ, ಮೊ.ಸಂ: 9686218963, ದೂ.ಸಂ: 0821–2512121 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕನ್ನಡ ಮಾತನಾಡಿ, ಅನ್ಯರಿಗೂ ಕಲಿಸಿದರೆ ಮಾತ್ರ ಭಾಷೆ ಉಳಿಯುತ್ತೆ

ವಾಲ್ಮೀಕಿ ಜಯಂತಿ, ಕನ್ನಡ ರಾಜ್ಯೋತ್ಸವ, ವಾಲ್ಮೀಕಿ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶಾಸಕ ಜಿಟಿಡಿ ಅಭಿಪ್ರಾಯ



ಮೈಸೂರಿನ ರೋಟರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ ವತಿಯಿಂದ ವಿವಿಧ ಕ್ಷೇತ್ರಗಳ ಸಾಧಕರಿಗೆ ವಾಲ್ಮೀಕಿ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಲ್ಲದೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವವರನ್ನು ಸನ್ಮಾನಿಸಲಾಯಿತು.

ಮೈಸೂರು,ನ.23(ಜಿಎ)–ಅನ್ಯರಿಗೂ ಕನ್ನಡ ಕಲಿಸುವ ಕೆಲಸ ಮಾಡಿದರೆ ಮಾತ್ರ ಭಾಷೆ ಉಳಿಯಲಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ರೋಟರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ ವತಿಯಿಂದ ಆಯೋಜಿಸಿದ್ದ ಶ್ರೀಮಹರ್ಷಿ ವಾಲ್ಮೀಕಿ ಜಯಂತಿ, ಕನ್ನಡ ರಾಜ್ಯೋತ್ಸವ ಹಾಗೂ ವಾಲ್ಮೀಕಿ ಸೇವಾ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ನವೆಂಬರ್ ತಿಂಗಳಿನಲ್ಲಿ ಕನ್ನಡ ರಾಜ್ಯೋತ್ಸವ ಎಲ್ಲೆಡೆ ಆಚರಿಸಲಾಗುತ್ತಿದೆ. ಕುವೆಂಪು, ಬೇಂದ್ರೆ, ರನ್ನ, ಪಂಪ ಸೇರಿದಂತೆ ಎಲ್ಲರೂ ಕನ್ನಡಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಭಾಷೆ ಉಳಿಯಬೇಕು. ಕನ್ನಡ ನಾಡು, ನುಡಿ, ಜಲ, ಭಾಷೆ ಉಳಿಸಬೇಕು. ಮತ್ತೊಂದೆಡೆ ಬೆಂಗಳೂರಿನಲ್ಲಿ ಕನ್ನಡ ಭಾಷೆ ಉಳಿಸಲು ಕನ್ನಡ ಫಲಕ ಅಳವಡಿಸಲು ನಾವೇ ಹೋರಾಟ ಮಾಡಬೇಕಾಗಿದೆ. ನಾವು ಕನ್ನಡ ಮಾತನಾಡುವ ಜೊತೆಗೆ, ಅನ್ಯರಿಗೂ ಕನ್ನಡ ಕಲಿಸಿದರೆ, ಮಾತ್ರ ಭಾಷೆ ಉಳಿಯಲಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್, ಬಸವಣ್ಣ, ಕೆಂಪೇಗೌಡ, ವಾಲ್ಮೀಕಿ,ಕನಕದಾಸರ ಜಯಂತಿಗಳನ್ನು ಆಯಾಯ ಸಮುದಾಯವರೇ ಮಾಡಬಾರದು. ಸಮಾಜ ಪರಿವರ್ತನೆಗೆ ಕೊಡುಗೆಗಳನ್ನು ನೀಡಿದ ಮಹನೀಯರ ಜಯಂತಿಗಳನ್ನು ಎಲ್ಲರೂ ಸೇರಿ ಮಾಡಬೇಕು. ಪ್ರತಿಯೊಬ್ಬರು ನೀಡಿದ ಮಾನವೀಯ ಸಂದೇಶಗಳನ್ನು ಅನುಸರಿಸಬೇಕು. ಮಹರ್ಷಿ ವಾಲ್ಮೀಕಿ ಶ್ರೇಷ್ಠ ರಾಮಾಯಣ ಗ್ರಂಥವನ್ನು ಬರೆದರು. ಇದೊಂದು ಐತಿಹಾಸಿಕವಾಗಿದೆ. ಕಾಡಿನಲ್ಲಿ ಬೆಳೆದು ಮೋಕ್ಷ ಪಡೆದ ವಾಲ್ಮೀಕಿ ರಚಿಸಿದ ರಾಮಾಯಣ ಎಲ್ಲ ಸಮಸ್ಯೆಗಳಿಗೂ ಮೂಲ ಪರಿಹಾರವಾಗಿದೆ ಎಂದು ತಿಳಿಸಿದರು.

ನಾಯಕ ಸಮಾಜ ಮೊದಲಿನಿಂದಲೂ ಹಿಂದುಳಿದಿದೆ. ಹುಣಸೂರು ಕ್ಷೇತ್ರದಲ್ಲಾಗಲೀ ಅಥವಾ ಚಾಮುಂಡೇಶ್ವರಿ ಕ್ಷೇತ್ರದಲ್ಲಾಗಲೀ ಹೆಚ್ಚಿನ ಬೆಂಬಲ ನೀಡುತ್ತಾ ಬಂದಿದ್ದೇನೆ. ಅನಿಲ್ ಚಿಕ್ಕಮಾದು ಅವರಿಗೆ ಹನಗೋಡು ಕ್ಷೇತ್ರದಿಂದ ಜಿಪಂ ಸದಸ್ಯನ್ನಾಗಿ ಮಾಡಿದ್ದೆ. ಚಿಕ್ಕಮಾದು ಅವರನ್ನು ಜಾ.ದಳಕ್ಕೆ ಕರೆತಂದು ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ ನಿಲ್ಲುವಂತೆ ಮಾಡಿಸಿದ್ದೆ. ಅದೇ ರೀತಿ ಎಸ್‌ಟಿ ಸಮಾಜಕ್ಕೆ ಸೇರಿದ ಸತೀಶ್ ಜಾರಕಿಹೊಳಿ ಸಿಎಂ ಆಗಬೇಕೆಂಬ ಕನಸು ನನಸಾಗಲಿ. ರಾಜಕಾರಣದಲ್ಲಿ ಎಂದಿಗೂ ಜಾತಿ, ಮತ ನೋಡದೆ ಎಲ್ಲರನ್ನು ಒಂದೇ ರೀತಿ ಕಂಡಿದ್ದೇನೆ ಎಂದರು.

ಈ ವೇಳೆ ಕೇಂದ್ರೀಯ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರು ಮಾತನಾಡಿ, ಪರಿಶಿಷ್ಟ ಪಂಗಡದವರು ಹೆಚ್ಚು ವಿದ್ಯಾವಂತರಾಗಬೇಕು. ಸರ್ಕಾರಿ ಉದ್ಯೋಗಗಳನ್ನು ಪಡೆದು ಸಮಾಜದ ಏಳಿಗೆಗೆ ಶ್ರಮಿಸಬೇಕು. ಮುಂದಿನ ದಿನಗಳಲ್ಲಿ ಮೈಸೂರು ನಗರದಲ್ಲಿ ವಾಲ್ಮೀಕಿ ಶೈಕ್ಷಣಿಕ ಕೇಂದ್ರವನ್ನು ತೆರೆಯಲು ಶ್ರಮಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಎಂ.ರಾಮಚಂದ್ರು, ಪು.ಶ್ರೀನಿವಾಸನಾಯಕ, ಕುಂಬ್ರಳ್ಳಿ ಎನ್.ಸುಬ್ಬಣ್ಣ, ಕೆಂಪನಾಯಕ, ಆರ್. ಸರ್ವೇಶ್, ಪಿದೇಮಾಜು ಅವರಿಗೆ ವಾಲ್ಮೀಕಿ ಸೇವಾರತ್ನ ಪ್ರಶಸ್ತಿಯನ್ನು ಹಾಗೂ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಚಿಕ್ಕಣ್ಣ, ಕೆ.ಬಿ.ರಮೇಶನಾಯಕ, ರತ್ನ ಚಂದ್ರಶೇಖರ್, ಕಾಳಸಿದ್ದನಾಯಕ, ಡಾ.ಬಿ.ವಿ.ಸ್ವಾಮಿನಾಯಕ, ಡಾ.ಕಳಲೆ ಮಹೇಶ್, ಶಶಿಕುಮಾರ್,ರಂಗಸ್ವಾಮಿ, ಭವ್ಯ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ವೇದಿಕೆ ರಾಜ್ಯಾಧ್ಯಕ್ಷ ಎಸ್.ಶ್ರೀಧರ್ ಚಾಮುಂಡಿಬೆಟ್ಟ, ಕಾರ್ಯಾಧ್ಯಕ್ಷ ಪ್ರಭಾಕರ ಹುಣಸೂರು, ಗೌರವಾಧ್ಯಕ್ಷ ದ್ಯಾವಪ್ಪನಾಯಕ, ಮೈಸೂರು ನಗರಾಧ್ಯಕ್ಷ ರಾಜುನಾಯಕ, ರಾಜ್ಯ ಉಪಾಧ್ಯಕ್ಷ ಜಿ.ಡಿ.ಸ್ವಾಮಿ, ಡಿ.ವೆಂಕಟೇಶನಾಯಕ, ಮೂರ್ತಿ ಕುಪ್ಪರವಳ್ಳಿ, ರವಿಕುಮಾರ್, ಎಂ.ಮಣಿಕಂಠನಾಯಕ ಮತ್ತಿತರರಿದ್ದರು.

ಮೈಸೂರಲ್ಲಿ ದೇಶದ ಮೊದಲ ಎನ್‌ಸಿಸಿ ಸೈಬರ್ ಕೆಡೆಟ್ ಕಾರ್ಪ್ಸ್ ರಚನೆ

ಎನ್‌ಸಿಸಿ 77ನೇ ದಿನಾಚರಣೆಯಲ್ಲಿ ಸಂಸದ ಯದುವೀರ್ ಮಾಹಿತಿ





ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ನಡೆದ ಎನ್‌ಸಿಸಿ ದಿನಾಚರಣೆಯನ್ನು ಸಂಸದ ಯದುವೀರ್ ಅವರು ಉದ್ಘಾಟಿಸಿದರು (ಎಡಚಿತ್ರ). ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಎನ್ ಸಿಸಿ ಕೆಡೆಟ್ಸ್ ಗಳನ್ನು ಕಾಣಬಹುದು (ಬಲಚಿತ್ರ).

ಮೈಸೂರು, ನ.23(ಬಿಎಲ್‌ಯು)–ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಭಾನುವಾರ ಎನ್‌ಸಿಸಿ 77ನೇ ದಿನಾಚರಣೆ ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ನಡೆಯಿತು.

ಮೈಸೂರಿನ ಕಲಾಮಂದಿರದಲ್ಲಿ ನಡೆದ ಎನ್‌ಸಿಸಿ ದಿನಾಚರಣೆಯನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಎನ್‌ಸಿಸಿಗೆ ಸೇರ್ಪಡೆಗೊಳ್ಳುವುದರಿಂದ ದೇಶಾಭಿಮಾನ ಹೆಚ್ಚಾಗುತ್ತದೆ. ಈ ಹಿನ್ನೆಲೆ ಪೋಷಕರು ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳನ್ನು ಎನ್‌ಸಿಸಿಗೆ ಸೇರ್ಪಡೆ ಮಾಡಬೇಕು ಎಂದು ಸಲಹೆ ನೀಡಿದರು.

ಎನ್‌ಸಿಸಿಗೆ ಸೇರ್ಪಡೆಯಾದರೆ ರಕ್ಷಣಾ ಕ್ಷೇತ್ರದ ಬಗ್ಗೆ ತರಬೇತಿ ಹೊಂದಬಹುದು. ಇದರಿಂದ ರಕ್ಷಣಾ ಇಲಾಖೆಗೆ ಎನ್‌ಸಿಸಿ ಬೆನ್ನೆಲುಬು ಎನ್ನಬಹುದು. ಈ ಹಿನ್ನೆಲೆ ಎನ್‌ಸಿಸಿಗೆ ಸೇರ್ಪಡೆ ಮಾಡುವ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸಬೇಕು ಎಂದು ಅವರು ಹೇಳಿದರು.

ಮೈಸೂರಿನ ಆಲನಹಳ್ಳಿಯಲ್ಲಿ ಎನ್‌ಸಿಸಿ ಅಕಾಡೆಮಿಗೆ ಜಾಗ ಮೀಸಲಿಟ್ಟಿದ್ದು, ಶೀಘ್ರವೇ ಅಕಾಡೆಮಿ ಸ್ಥಾಪನೆಯಾಗಬೇಕು. ಅಲ್ಲದೆ ದೇಶದಲ್ಲಿ ಮೊದಲ ಬಾರಿಗೆ ಮೈಸೂರಿನಲ್ಲಿ ಎನ್‌ಸಿಸಿ ಸೈಬರ್ ಕೆಡೆಟ್ ಕಾರ್ಪ್ಸ್ ರಚನೆ ಮಾಡುವ ಉದ್ದೇಶವಿದ್ದು, ಇದು ಭಾರತದ ಸೈಬರ್ ರಕ್ಷಣೆಗೆ ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ ಪೂರಕವಾಗಿ ಕೆಲಸ ಮಾಡುತ್ತದೆ ಎಂದು ಯದುವೀರ್ ಅಭಿಪ್ರಾಯಪಟ್ಟರು.

ಈ ಕಾರ್ಯಕ್ರಮಕ್ಕೂ ಮೊದಲು ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಪ್ರತಿಮೆಗೆ ಪುಷ್ಪಗುಚ್ಛ ಅರ್ಪಿಸಿ, ಅವರ ದೇಶಾಭಿಮಾನವನ್ನು ಸ್ಮರಿಸಲಾಯಿತು. ತರುವಾಯ 1,200ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದ ಎನ್‌ಸಿಸಿ ವಿದ್ಯಾರ್ಥಿಗಳ ಪಥ ಸಂಚಲನದ ಮೂಲಕ ಕಾರ್ಯಕ್ರಮ ನಡೆದ ಕಲಾಮಂದಿರಕ್ಕೆ ಆಗಮಿಸಿತು.

ಕರ್ನಾಟಕ ನೌಕೆಯ ಕಮಾಂಡಿಂಗ್ ಆಫೀಸರ್ ಲೆಫ್ಟಿನೆಂಟ್ ಕಮಾಂಡರ್ ವಿನಯ್ ರಾಮಚಂದ್ರನ್, ಆಲುಮ್ನಿ–4ನ ಕಾರ್ ಏರ್ ಸ್ಕ್ವಾಡ್ರನ್ ಎನ್‌ಸಿಸಿಯ ಅಧ್ಯಕ್ಷ ಡಾ.ಅನಿಲ್ ಥಾಮಸ್, ಕಾರ್ಯದರ್ಶಿ ಉಮಾ ವೆಂಕಟೇಶ್, ಸಂಘಟನಾ ಸಮಿತಿ ಮುಖ್ಯಸ್ಥರಾದ ಪಾಂಡುರಂಗ ರಾವ್, ಕ್ಯಾಪ್ಟನ್ ಸಿ.ಟಿ.ಸುಪ್ರೀತಾ, ಆಫರ್ ಮೊಹಿತ್, ಎಂ.ಪಿ.ಶ್ಯಾಮಲಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿದ್ಯುತ್ ವ್ಯತ್ಯಯ

ಮೈಸೂರು: ಚೆಸ್ಕಾಂ ವತಿಯಿಂದ ತುರ್ತು ಕಾರ್ಯ ನಿರ್ವಹಣಾ ಕೆಲಸದ ನಿಮಿತ್ತ ನ.24ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿಜಯನಗರ 4ನೇ ಹಂತ, ಕೆ.ಹೆಚ್.ಬಿ ಕಾಲೋನಿ, ಹೂಟಗಳ್ಳಿ, ಬೆಳವಾಡಿ, ಬಸವನಪುರ, ಪಂಚಚಾರ್ಯ ಲೇಔಟ್, ಕೆ.ಹೆಮ್ಮನಹಳ್ಳಿ, ಲಿಂಗದೇವರ ಕೊಪ್ಪಲು, ಆದಿತ್ಯಾ ಬಡಾವಣೆ, ಎಸ್‌ಆರ್‌ಎಸ್ ಕಾಲೋನಿ, ಎನ್‌ಹೆಚ್‌ಬಿ ಕಾಲೋನಿ, ಬೆಳವಾಡಿ ಕೈಗಾರಿಕಾ ಪ್ರದೇಶ, ಶಾಹಿ ಗಾರ್ಮೆಂಟ್ಸ್, ಕೂರ್ಗಳ್ಳಿ ಕೈಗಾರಿಕಾ ಪ್ರದೇಶ, ಗ್ರ್ಯಾಂಡ್ ಮೌರ್ಯ ಹೋಟೆಲ್, ರಿಲಾಯನ್ಸ್, ಮಾಸ್ ಫರ್ನಿಚರ್ಸ್ ಯಶಸ್ವಿನಿ ಕಲ್ಯಾಣ ಮಂಟಪ, ಸೌಪರ್ಣಿಕ ಅಪಾರ್ಟ್ಮೆಂಟ್ ಹಿನಕಲ್, ಜಟ್ಟಿಹುಂಡಿ, ಗೊಹಳ್ಳಿ, ಸಾಹುಕಾರ ಹುಂಡಿ, ಮಾದಗಳ್ಳಿ, ಕಮರಹಳ್ಳಿ, ಮಾಣಿಕ್ಯಪುರ, ದೊಡ್ಡಹಟ್ಟಿಹುಂಡಿ, ಮರಿಯ್ಯನಹುಂಡಿ, ಕಟ್ಟೆಹುಂಡಿ, ಶೆಟ್ಟಿನಾಯಕನಹಳ್ಳಿ, ಕುಮಾರಬೀಡು, ಬೀರಿಹುಂಡಿ, ಮಾದಳ್ಳಿ, ನುಗ್ಗೆಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.11.2025 ಸೋಮವಾರ, ಮಳೆ ನಕ್ಷತ್ರ: ಅನೂರಾಧ, 20.11.2025ರಿಂದ 02.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ರಾಮಕೃಷ್ಣ ಆಶ್ರಮ:** ಶತಮಾನೋತ್ಸವ 1925–2025. ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವ, ಸಮರ್ಪಣಾ ಸಮಾವೇಶ. ಬೆಳಗ್ಗೆ 6.15 ರಿಂದ ಅಧಿವೇಶನ–1. ದಿವ್ಯ ಸಾನ್ನಿಧ್ಯ: ಬೇಲೂರು ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಪರಮಾಧ್ಯಕ್ಷ ಸ್ವಾಮಿ ಗೌತಮಾನಂದಜಿ ಮಹಾರಾಜ್, ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ (ಸುತ್ತೂರು) ಪೀಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧೀಶರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮಿ, ಮುಖ್ಯ ಅತಿಥಿಗಳು: ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್, ಗೌರವಾನ್ವಿತ ಅತಿಥಿಗಳು: ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ. ಗೌರವಾರ್ಪಣೆ: ಬ್ರಹ್ಮಯ್ಯ ಮತ್ತು ಕಂಪನಿ ಪಾಲುದಾರ ಶ್ರೀನಿವಾಸ ಜಿ., ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ. ಚಂದ್ರಶೇಖರ್, ಸಲಹೆಗಾರ ವೈದ್ಯರಾದ ಡಾ. ಟಿ.ವಿಜಯಕುಮಾರ್. ಬೆಳಗ್ಗೆ 9ರಿಂದ ಅಧಿವೇಶನ–2. ಭಾಷಣಕಾರರು: ಗುರುಗ್ರಾಮ್, ರಾಮಕೃಷ್ಣ ಮಿಷನ್ ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ವ್ಯಾಲ್ಯೂಸ್‌ನ ಕಾರ್ಯದರ್ಶಿ ಸ್ವಾಮಿ ಶಾಂತಾತ್ಮಾನಂದಜಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಕಾನೂನು ಸಲಹೆಗಾರ ಶ್ರೀನಿವಾಸಮೂರ್ತಿ. ವಿಶೇಷ ಆಹ್ವಾನಿತರು: ಬ್ರಹ್ಮಯ ಕಂಪನಿಯ ಲೆಕ್ಕ ಪರಿಶೋಧಕ ರಂಗನಾಯಕಲು, ಮೈಸೂರಿನ ನೈಪುಣ್ಯ ವಿದ್ಯಾ ಸಂಸ್ಥೆಯ ಸಂಸ್ಥಾಪಕ ರಘುಕೌಟಿಲ್ಯ, ಶಿಶು ತಜ್ಞ ಡಾ. ವಾಮನ್ ರಾವ್ ಬಾಪಟ್, ಎಸ್.ಆರ್.ರಾಮಚಂದ್ರ ರಾವ್, ಮೈಸೂರಿನ ವಕೀಲ ಎಸ್.ಅರುಣ್ ಕುಮಾರ್, ಮಧ್ಯಾಹ್ನ 2.30 ರಿಂದ ಅಧಿವೇಶನ–3. ಭಗವನ್ನಾಮ ಸಂಕೀರ್ತನೆ, ವಿವೇಕ ಗಾಥಾ: ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶವನ್ನಾಧರಿಸಿದ ಬಹುಮಾಧ್ಯಮ ಸಾಂಸ್ಕೃತಿಕ ಕಾರ್ಯಕ್ರಮ. ದಿವ್ಯ ಸಾನ್ನಿಧ್ಯ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧೀಶರಾದ ಡಾ. ನಿರ್ಮಲಾನಂದನಾಥ ಸ್ವಾಮೀಜಿ. ಮುಖ್ಯ ಅತಿಥಿಗಳು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್. ಗೌರವಾನ್ವಿತ ಅತಿಥಿ: ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ. ವಿಶೇಷ ಆಹ್ವಾನಿತರು: ವಿಶ್ರಾಂತ ಕುಲಪತಿ ಡಾ. ಕೆ.ಚಿದಾನಂದಗೌಡ, ಶ್ರೀಮತಿ ತಾರಿಣಿ ಚಿದಾನಂದಗೌಡ, ಡಾ. ನಿತ್ಯಾನಂದರಾವ್, ಡಾ. ಸಿ.ನಾಗಣ್ಣ, ಡಾ. ಜೆ.ಶಶಿಧರ ಪ್ರಸಾದ್, ಪ್ರೊ.ಕೆ.ಎಸ್. ರಂಗಪ್ಪ, ಪ್ರೊ.ಜಿ.ಹೇಮಂತಕುಮಾರ್, ಪ್ರೊ.ಎನ್.ಕೆ.ಲೋಕನಾಥ್, ಎಂ.ವೆಂಕಟರಾಮು, ವಾಸುದೇವ ಭಟ್, ಡಾ.ಸುಜಯ್‌ಕುಮಾರ್, ಕೆ.ನರೇಂದ್ರ, ರಾಘವನ್, ಎನ್.ಆರ್.ಅಶೋಕ್, ಡಾ. ನಿರಂಜನ ವಾನಳ್ಳಿ, ಸಂಜೆ 5.30ರಿಂದ ಅಧಿವೇಶನ–4. ಸ್ಥಳ: ವಿವೇಕಾನಂದ ಸಭಾಂಗಣ, ಶ್ರೀರಾಮಕೃಷ್ಣ ಆಶ್ರಮ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಬ್ರೈಡಲ್ ಜುವೆಲರಿ ಶೋ. ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್.ರಸ್ತೆ. ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಬಂಗು ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಅಸೋಸಿಯೇಷನ್ ಆಫ್ ಅಲೈಯನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್, ಕೃಷ್ಣದೇವರಾಯ ಅಲೈಯನ್ಸ್ ಕ್ಲಬ್ (ಕುವೆಂಪುನಗರ ಮೈಸೂರು):** ಕನ್ನಡ ರಾಜ್ಯೋತ್ಸವ ಮತ್ತು ಸಾಧಕರಿಗೆ ಸನ್ಮಾನ. ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ. ಮುಖ್ಯ ಅತಿಥಿಗಳು: ಅಲೈ ಡಾ. ನಾಗರಾಜ, ವಿ.ಭೈರಿ, ಅಲೈ ಡಾ. ವೆಂಕಟೇಶ್, ಹೆಚ್.ವಿ.ರಾಜೀವ್, ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಶ್ರೀಮತಿ ಕೃಪಾಲಿನಿ ಎಸ್.ರಾಜ್, ಡಾ. ಸಹನಾ ಕೃಷ್ಣ, ಮಲ್ಲಿಕಾರ್ಜುನಪ್ಪ, ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್, ಗೀತಾ ನಾಯ್ಡು. ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ. ಬೆಳಗ್ಗೆ 10.30ಕ್ಕೆ.

■ **ಪರಂಪರೆ:** ಸಂವಿಧಾನ ದಿನಾಚರಣೆ ಅಂಗವಾಗಿ ಸಂವಿಧಾನ ಕುರಿತು ವಿಶೇಷ ಉಪನ್ಯಾಸ. 'ಅಭಿವ್ಯಕ್ತಿ ಸ್ವಾತಂತ್ರ್ಯ' ಕುರಿತು ತುಮಕೂರಿನ ರಾಮಕೃಷ್ಣ–ವಿವೇಕಾನಂದ ಆಶ್ರಮದ ಮುಖ್ಯಸ್ಥ ವೀರೇಶಾನಂದ ಸರಸ್ವತಿ ಸ್ವಾಮಿಗಳಿಂದ ಉಪನ್ಯಾಸ. ಸ್ಥಳ: ಕೆ.ವಾಸುದೇವಚಾರ್ಯ ಭವನ (ನಾದಬ್ರಹ್ಮ). ಸಂಜೆ 6ರಿಂದ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ, ಮೈಸೂರು:** ವಸುಂಧರೋತ್ಸವ–2025. 41ನೇ ರಾಷ್ಟ್ರೀಯ ಮಟ್ಟದ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಹಬ್ಬ–2025. ಸಂಜೆ 6ಕ್ಕೆ ಗುರು ಡಾ. ಸತ್ಯನಾರಾಯಣ ರಾಜು ಅವರ ಶಿಷ್ಯೆ ವಿದುಷಿ ವೈಷ್ಣವಿ (ಬೆಂಗಳೂರು) ಅವರಿಂದ ಭರತನಾಟ್ಯ. 6.45ಕ್ಕೆ ವಿದುಷಿ ಚಿತ್ರಾ ಸುಕುಮಾರನ್ ಮೋಹಿನಿಯಟ್ಟಮ್ (ಕೇರಳ), ಕರ್ನಾಟಕ ಕಲಾಶ್ರೀ–ವಿದುಷಿ ಶ್ರೀಮತಿ ರಾಜಶ್ರೀ ಶೆಣೈ, ಕರ್ನಾಟಕ ಕಲಾಶ್ರೀ ವಿದುಷಿ ಶ್ರೀಮತಿ ಶಾರದಾಮಣಿ ಶೇಖರ್ (ಮಂಗಳೂರು) ಅವರಿಂದ ಭರತನಾಟ್ಯ. ಗೌರವ ಸಮರ್ಪಣೆ: ರೋಟೇರಿಯನ್ ಸಿ.ಹೆಚ್.ಎಲ್. ಚಂದ್ರಶೇಖರ್, ರೋಟೇರಿಯನ್ ಪಿಹೆಚ್‌ಎಲ್ ವಿರೂಪಾಕ್ಷ. ಸ್ಥಳ: ವಸುಂಧರ ಭವನ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಚಿಂತಾಮಣಿ ಕೊಡ್ಲೆಕೆರೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಡಾ.ಎಂ.ಎ.ಜ್ಯೋತಿ, ವ್ಯಾಖ್ಯಾನ–ಡಾ.ಬಿ.ವಿ.ವಸಂತಕುಮಾರ್, 6.50–ರೈತರಿಗೆ ಸಲಹೆ, 7.15 ಭಾವಗೀತೆಗಳು–ಅಮೂಲ್ಯ .ಎಂ., 7.45 ಚಿತ್ರಗೀತೆಗಳು, 8.30–ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸಂಶೋಧಕರು ಹಾಗೂ ಭಾಷಾ ಅಧ್ಯಯನದ ವಿಶ್ಲೇಷಕರಾದ ಡಾ. ಶಂ. ಬಾ. ಜೋಷಿ ಅವರೊಂದಿಗೆ ಪ್ರೊ.ವಿ.ಎಂ.ಇನಾಂದಾರ್ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ಎಂ.ಎಸ್.ಗೋಪಾಲಕೃಷ್ಣನ್ ಹಾಗೂ ಡಾ.ಎಂ.ನರ್ಮದಾ ಯುಗಳ ವಯೋಲಿನ್ ವಾದನ, 10.30–ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, **ಮಧ್ಯಾಹ್ನ** 12.05 ವನಿತಾ ವಿಹಾರ, 12.35–ದೇವರನಾಮ, 12.45 ನಮ್ಮ ಆರೋಗ್ಯ–ಮಕ್ಕಳಲ್ಲಿ ಮಲಬದ್ಧತೆಯ ಸಮಸ್ಯೆ ಮತ್ತು ಪರಿಹಾರ ಕುರಿತು ಮಕ್ಕಳ ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ಪ್ರಶಾಂತ್‌ಕುಮಾರ್.ಎಂ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ ಕುರಿತು ಮಾಹಿತಿ ನೀಡುತ್ತಾರೆ ಉಲ್ಲಾಸ್ ಗುಣಗ. 1.20–ಕ್ವಾಮಿ ಏಕತಾ ಸಪ್ತಾಹ –ಮಹಿಳಾ ದಿನಾಚರಣೆ ಕುರಿತು ಕಾರ್ಯಕ್ರಮ. 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಜಿ.ಉಷಾ–ಹಾಡುಗಾರಿಕೆ, 4.00 ಮಹಿಳಾರಂಗ–ಮಹಿಳಾರಂಗ ಭಾವಸಂಗಮ ಭಾವಗೀತೆಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ –ಪ್ರಿಯಾ.ಬಿ, 4.30–ಹಿಂದಿ ಚಿತ್ರಗೀತೆಗಳು,4.45 ಹಿಂದಿ ಪಾಠ ಪ್ರಸ್ತುತಿ: ಡಾ.ಜಯಂತಿ ಪ್ರಸಾದ್ ನೌಟಿಯಾಲ್, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ವಿ.ಸಿ.ಫಾರಂ, ಕೃಷಿ ಮೇಳ ಕುರಿತ ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ–ಮಂಡ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕರಾದ ಡಾ.ಜಿ.ಎಂ.ದೇವಗಿರಿ ಹಾಗೂ ವಿಸ್ತರಣಾ ನಿರ್ದೇಶಕರಾದ ಡಾ.ಸಿ. ರಾಮಚಂದ್ರ. ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 7.45 ಮಣಿಪಾಲದ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (MAHE)ನ 33ನೇ ಘಟಿಕೋತ್ಸವದ ಬಾನುಲಿ ವರದಿ. ಪ್ರಾಯೋಜಕರು–ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಮಣಿಪಾಲ. 8.00 ಯುವವಾಣಿ : ರಂಗಭೂಮಿ, ಧಾರವಾಹಿ, ಚಲನ ಚಿತ್ರ ನಟಿ ಹಾಗೂ ವಸ್ತ್ರ ವಿನ್ಯಾಸಕಿ ಮೈಸೂರಿನ ದೇವಲಾಪುರದ ಪ್ರಿಯ ಶತಮರ್ಷಣ ಅವ ರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ದಿಗ್ವಿಜಯ್.ಬಿ 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಜಿ.ಶ್ರೀಕಾಂತ್ ಹಾಡುಗಾರಿಕೆ, 10.00 ನಿನಾದ : ವೈಣಿಕ ವಾಗ್ಗೇಯ ವಾಹಿನಿ.

ದೂರ ಗ್ರಾಮದಲ್ಲಿ ಇಂದು(ಮೈಸೂರು ತಾಲೂಕು)

■ **ಶ್ರೀ ಶಂಭುಲಿಂಗೇಶ್ವರ ಶ್ರೀ ಕ್ಷೇತ್ರ ಅಭಿವೃದ್ಧಿ ಸಮಿತಿ, ಶ್ರೀ ಬಸವೇಶ್ವರ ಯುವಕರ ಸಂಘ:** ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದ ಮಹಾದ್ವಾರ, ವಿಘ್ನೇಶ್ವರ ದೇವಸ್ಥಾನ, ನವಗ್ರಹ ದೇವಸ್ಥಾನ, ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನ, ಶ್ರೀ ಮೂಗಪ್ಪ ಸ್ವಾಮಿಗಳ ಗದ್ದಿಗೆ, ಶಿವ ಭವನ ಉದ್ಘಾಟನೆ. ಜಗದ್ಗುರು ಶ್ರೀ ಶ್ರೀ ಶ್ರೀ ಶಿವಕುಮಾರಸ್ವಾಮಿಗಳ ಕೃಪಾಶೀರ್ವಾದಗಳೊಂದಿಗೆ ಮಹಾದ್ವಾರದ ಉದ್ಘಾಟನೆ ಮತ್ತು ಶ್ರೀ ಶಿವರಾತ್ರೀಶ್ವರರ ಭಾವಚಿತ್ರ ಅನಾವರಣ: ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳು. ದೇವಸ್ಥಾನಗಳ ಉದ್ಘಾಟನೆ ಮತ್ತು ಶ್ರೀ ಶಿವಕುಮಾರಸ್ವಾಮಿಗಳ ಭಾವಚಿತ್ರ ಅನಾವರಣ: ಶ್ರೀ ಶ್ರೀ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು. ಶಿವ ಭವನ, ಉದ್ಘಾಟನೆ ಮತ್ತು ಶ್ರೀ ಗುರು ಮಲ್ಲೇಶ್ವರ ಭಾವಚಿತ್ರ ಅನಾವರಣ: ಶ್ರೀ ಗುರುಮಲ್ಲೇಶ್ವರ ತ್ರಿವಿಧ ದಾಸೋಹ ಮಹಾಸಂಸ್ಥಾನ ಮಠದ ಶ್ರೀ ಶ್ರೀ ಶ್ರೀ ಮಹಾಂತಸ್ವಾಮಿಗಳು. ಸ್ಥಳ: ದೂರ ಗ್ರಾಮ, ಜಯಪುರ ಹೋಬಳಿ. ಬೆಳಗ್ಗೆ 10.30ರಿಂದ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 24 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 216 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ಅಧಿಕಾರ ಹಂಚಿಕೆ ವಿಚಾರ

ಕೈಚೆಲ್ಲಿದ ಖರ್ಗೆ

• ರಾಜ್ಯದ ಬೆಳವಣಿಗೆ ನನಗೆ ಬೇಜಾರಾಗಿದೆ • ನಾನು ಹೇಳುವುದಕ್ಕೆ ಏನೂ ಇಲ್ಲ; ಹೈಕಮಾಂಡ್ ತೀರ್ಮಾನಿಸುತ್ತೆ

ಬೆಂಗಳೂರು, ನ.23–ರಾಜ್ಯದ ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರ್ಣಗೊಳಿಸಿದ್ದು, ಅಧಿಕಾರ ಹಂಚಿಕೆ ವಿಚಾರ ತೀವ್ರಗೊಂಡಿದೆ. ರಾಜ್ಯ ಕಾಂಗ್ರೆಸ್‌ನ ಈ ಬೆಳವಣಿಗೆಯಿಂದ ಹತಾಶೆಗೊಂಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಅಧಿಕಾರ ಹಂಚಿಕೆ ವಿಚಾರದಲ್ಲಿ ಕೈಚೆಲ್ಲಿದ್ದು, ಏನಿದ್ದರೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ಹೇಳುವ ಮೂಲಕ ತಮ್ಮ ಬೇಸರವನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಿದ್ದಾರೆ.



ಕಳೆದ ಮೂರು ದಿನಗಳಿಂದ ಬೆಂಗಳೂರಿನ ಸದಾಶಿವನಗರದ ತಮ್ಮ ನಿವಾಸದಲ್ಲಿ ಬೀಡು ಬಿಟ್ಟಿರುವ ಖರ್ಗೆ ಅವರು ಇಂದು ಮಾಧ್ಯಮದವರೊಂದಿಗೆ ತಮ್ಮ ಬೇಸರವನ್ನು ವ್ಯಕ್ತಪಡಿಸಿದ್ದಾರೆ. ನಾನು ಕಳೆದ ಮೂರು ದಿನಗಳಿಂದ ಬೆಂಗಳೂರಿನಲ್ಲೇ ಇದ್ದೇನೆ. ರಾಜ್ಯ ಕಾಂಗ್ರೆಸ್‌ನ ಬೆಳವಣಿಗೆಗಳಿಂದ ನನಗೆ ಬೇಜಾರಾಗಿ ಹೋಗಿದೆ. ಈ ಸಂಬಂಧ ಹೇಳಲು ನನ್ನ ಬಳಿ ಏನೂ ಇಲ್ಲ. ಅದೇನಿದ್ದರೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ನೀವು (ಮಾಧ್ಯಮದವರು) ಯಾಕೆ ಸುಮ್ಮನೆ ಇಲ್ಲಿ ನಿಂತಿದ್ದೀರಿ? ಹೋಗಿ ಎಂದು ಹೇಳಿದರು.

ವಿಶೇಷವೆಂದರೆ ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾಗಿದ್ದು, ಅವರೇ ಕಾಂಗ್ರೆಸ್‌ನ ಹೈಕಮಾಂಡ್ ಆಗುತ್ತಾರೆ. ಆದರೆ ಅವರಿಂದ ರಾಜ್ಯ ಕಾಂಗ್ರೆಸ್ ರಾಜಕೀಯವನ್ನು ನಿಭಾಯಿಸಲು ಸಾಧ್ಯವಾಗದೇ ಎಐಸಿಸಿ ನಾಯಕರುಗಳಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರತ್ತ ಬೆಟ್ಟು ತೋರಿಸುತ್ತಿರುವುದು ವಿಪರ್ಯಾಸ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿಬರುತ್ತಿವೆ. 2023ರಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಡೆದು

■ 6ನೇ ಪುಟಕ್ಕೆ



‘ಮನೆಹಾಳು ಕೆಲಸ ಬೇಡ.. ನನ್ನ ಮತ್ತು ಕುಮಾರಸ್ವಾಮಿ ನಡುವೆ ತಂದಿಡಬೇಡಿ...’

ಮಾಧ್ಯಮಗಳ ವಿರುದ್ಧ ಡಿ.ಕೆ. ಶಿವಕುಮಾರ್ ಕಿಡಿ

ಬೆಂಗಳೂರು, ನ.23– ಬಹಳ ದಿನಗಳಿಂದ ಕೇಳಿಬರುತ್ತಿದ್ದ ನವೆಂಬರ್ ಕ್ರಾಂತಿ ವಿಚಾರ ರಾಜ್ಯದಲ್ಲಿ ಭಾರಿ ಸುದ್ದಿಗೆ ಗ್ರಾಸವಾಗುತ್ತಿದ್ದು, ಇದೇ ವಿಚಾರವಾಗಿ ಇದೀಗ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಧ್ಯಮಗಳ ವಿರುದ್ಧವೇ ಕಿಡಿಕಾರಿದ್ದಾರೆ.

ಹೆಚ್.ಡಿ ಕುಮಾರಸ್ವಾಮಿ ಹಾಗೂ ನನ್ನ ನಡುವೆ ತಂದಿಡುವ ಕೆಲಸ ಮಾಡಬೇಡಿ. ಈ ಮನೆಹಾಳು ಕೆಲಸ ಯಾಕೆ ಮಾಡುತ್ತೀರಿ? ಎಂದೇ ಖಾರವಾಗಿಯೇ ಡಿ.ಕೆ ಶಿವಕುಮಾರ್ ಅವರು ಪ್ರಶ್ನೆ ಮಾಡಿದ್ದಾರೆ.

ವೈರಲ್ ಆಗಿರುವ ವೀಡಿಯೊದಲ್ಲಿ ಡಿ.ಕೆ.ಶಿವಕುಮಾರ್ ಅವರು, ಪತ್ರಕರ್ತರೊಬ್ಬರಿಗೆ ಕುಮಾರಸ್ವಾಮಿ ಅವರು ಹೇಳದೆ ಇದ್ದರೂ ಯಾಕೆ ಅವರ ಹೆಸರನ್ನು ಹೇಳುತ್ತಿದ್ದೀರಿ, ಒಬ್ಬರಿಗೊಬ್ಬರಿಗೆ ತಂದಾಕಿ ಮನೆಹಾಳು ಕೆಲಸ ಮಾಡುತ್ತಿದ್ದೀರ ನೀವು ಎಂದು ಆಕ್ರೋಶ ಹೊರಹಾಕಿದ್ದಾರೆ. ಕುಮಾರಸ್ವಾಮಿ ಅವರು ಮಹತ್ವದ ಕ್ರಾಂತಿ ಎಂದು ಹೇಳಿರಬಹುದು. ರಾಜಕೀಯವಾಗಿ ಮಾತನಾಡಿರಬಹುದು. ಆದರೆ ಅದೆಲ್ಲಾ ಮುಖ್ಯವಲ್ಲ ಎಂದು ಡಿಕೆಶಿ ಹೇಳಿದ್ದಾರೆ.

■ 6ನೇ ಪುಟಕ್ಕೆ

ನಾನೂ ಸಿಎಂ ರೇಸ್‌ನಲ್ಲಿದ್ದೇನೆ

ಬೆಂಗಳೂರು, ನ.23– ರಾಜ್ಯ ಕಾಂಗ್ರೆಸ್‌ನಲ್ಲಿ ಸಿಎಂ ಅಧಿಕಾರ ಹಸ್ತಾಂತರ ಬಿಕ್ಕಟ್ಟು ಸದ್ಯಕ್ಕೆ ಬಗೆಹರಿಯುವ ಲಕ್ಷಣ ಕಾಣುತ್ತಿಲ್ಲ. ಸಿದ್ದರಾಮಯ್ಯ ಸಚಿವ ಸಂಪುಟ ಸದಸ್ಯರು ಕೂಡ ಮಾಧ್ಯಮಗಳಿಗೆ ಆಗಾಗ ಪ್ರತಿಕ್ರಿಯೆ ನೀಡುತ್ತಲೇ ಇದ್ದಾರೆ.



ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಕರ್ನಾಟಕ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ನಡೆಯುತ್ತಿರುವ ಚರ್ಚೆಗಳ ಕುರಿತು ಇಂದು ಮಾಧ್ಯಮ ಪ್ರತಿನಿಧಿಗಳು ಕೇಳಿದಾಗ ಪ್ರತಿಕ್ರಿಯೆ ನೀಡಿದ್ದಾರೆ.

ನಾನು ಯಾವಾಗಲೂ ಸಿಎಂ ರೇಸ್‌ನಲ್ಲಿರುವುದಾಗಿ ಹೇಳಿಕೆ ನೀಡಿ ಅಚ್ಚರಿ ಮೂಡಿಸಿದ್ದಾರೆ. 2013ರಲ್ಲಿ ನಾನು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷನಾಗಿದ್ದಾಗ ಸರ್ಕಾರವನ್ನು ಅಧಿಕಾರಕ್ಕೆ ತರಲು ಎಲ್ಲರೂ ಒಟ್ಟಾಗಿ ಕೆಲಸ ಮಾಡಿದ್ದೇವೆ.

ಆ ಸಂದರ್ಭದಲ್ಲಿ ನಾನು ಚುನಾವಣೆಯಲ್ಲಿ ಪರಾಭವಗೊಂಡಿದ್ದರಿಂದ ಸಿಎಂ ಆಗುವ ಅವಕಾಶ ತಪ್ಪಿತ್ತು. ಸಿಎಂ ಕುರ್ಚಿ ವಿಚಾರದ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅಂತಿಮ ನಿರ್ಧಾರ ತೆಗೆದು ಕೊಳ್ಳುತ್ತಾರೆ ಎಂದರು. ಕಾಂಗ್ರೆಸ್‌ನ ಆಂತರಿಕ ಬಿಕ್ಕಟ್ಟನ್ನು ಹೈಕಮಾಂಡ್ ಏಕೆ ಬಗೆಹರಿಸುತ್ತಿಲ್ಲ ಎಂಬ ಪ್ರಶ್ನೆ ಉದ್ಭವಿಸುತ್ತಲೇ ಇದೆ. ಈ ಬಗ್ಗೆ ಕೇಳಿದಾಗ ಪರಮೇಶ್ವರ್, ಮಲ್ಲಿಕಾರ್ಜುನ ಖರ್ಗೆಯವರು ಕರ್ನಾಟಕದ ರಾಜಕಾರಣವನ್ನು 50 ವರ್ಷಗಳ ಸುದೀರ್ಘ ಅನುಭವದೊಂದಿಗೆ ಚೆನ್ನಾಗಿ ಬಲ್ಲವರಾಗಿರುವುದರಿಂದ, ರಾಹುಲ್ ಗಾಂಧಿ ವಿದೇಶ ಪ್ರವಾಸದಿಂದ ಹಿಂದಿರುಗಿದ ನಂತರ ಸೂಕ್ತ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು.

ಪರಮೇಶ್ವರ್‌ಗೂ ಅವಕಾಶ ಸಿಗಬೇಕು

ದಲಿತ ಸಿಎಂ ಪ್ರಸ್ತಾಪ ಮುಂದಿಟ್ಟ ಜಾರಕಿಹೊಳಿ

■ ಯಾರೋ ಒಬ್ಬರಿಂದ ಮಾತ್ರ ಕಾಂಗ್ರೆಸ್ ಅಧಿಕಾರಕ್ಕೆ ಬಂದಿಲ್ಲ, ಅದಕ್ಕೆ ಎಲ್ಲರ ಶ್ರಮವೂ ಇದೆ ■ ಪರಮೇಶ್ವರ್ 8 ವರ್ಷ ಅಧ್ಯಕ್ಷರಾಗಿ ಪಕ್ಷ ಬಲಪಡಿಸಿದ್ದಾರೆ ■ ಪರಿಶಿಷ್ಟರು, ಅಲ್ಪಸಂಖ್ಯಾತರೇ ಕಾಂಗ್ರೆಸ್‌ನ ಮುಖ್ಯ ಮತದಾರರು

ಬೆಳಗಾವಿ, ನ.23– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಯಾರೊಬ್ಬರ ಶ್ರಮದಿಂದ ಬಂದಿಲ್ಲ. ಸಾಮಾನ್ಯ ಕಾರ್ಯಕರ್ತರಿಂದ ಹಿಡಿದು ಹಿರಿಯ ನಾಯಕರವರೆಗೆ ಎಲ್ಲರ ಶ್ರಮವೂ ಇದೆ. ನಮಗಿರುವ 1.25 ಕೋಟಿ ಮತದಾರರಿಂದ ನಾವು ಶಾಸಕರು, ಮಂತ್ರಿ ಆಗಿದ್ದೇವೆ. ತನ್ನಿಂದಲೇ ಸರ್ಕಾರ ರಚನೆಯಾಗಿದೆ ಎಂದು ಯಾರಾದರೂ ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ಅದು ನ್ಯಾಯವೂ ಅಲ್ಲ. ಎಲ್ಲರದ್ದೂ ಸಮಾನ ಶ್ರಮವಿದೆ, ಸಮಾನ ಪ್ರಾಧಾನ್ಯತೆ ಸಿಗಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ನಗರದಲ್ಲಿ ಭಾನುವಾರ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಶಾಸಕರಾಗಿ ಚುನಾಯಿತರಾದ ಎಲ್ಲರದ್ದೂ ಸಮಾನ ಶ್ರಮವಿದೆ. ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಎಲ್ಲರೂ ಕಷ್ಟ, ನಷ್ಟ ಅನುಭವಿಸಿದ್ದಾರೆ. ಯಾರೋ ಇಬ್ಬರು ಇದರ ಕ್ರೆಡಿಟ್ ತೆಗೆದುಕೊಳ್ಳಲು ಬರುವುದಿಲ್ಲ ಎಂದು ಪರೋಕ್ಷವಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಟೀಕಿಸಿದರು.



ಡಾ.ಜಿ.ಪರಮೇಶ್ವರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಎಂಟು ವರ್ಷ ದುಡಿದಿದ್ದಾರೆ. ಅವರ ಕಾಲದಲ್ಲಿ ಮಾಡಿದ ಕಾರ್ಯಕ್ರಮಗಳ ಕಾರಣದಿಂದ ಕಾಂಗ್ರೆಸ್‌ಗೆ ಬಲ ಬಂದಿದೆ.

■ 6ನೇ ಪುಟಕ್ಕೆ

ವೈದ್ಯಕೀಯ ಸ್ಪಾಗಳು ಆರೋಗ್ಯ ಇಲಾಖೆ ನಿಯಂತ್ರಣಕ್ಕೆ

ಬೆಂಗಳೂರು, ನ.23– ಅನಧಿಕೃತ ಸ್ಪಾಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ವೈದ್ಯಕೀಯ ಸ್ಪಾಗಳನ್ನು ವೈದ್ಯಕೀಯ ಸಂಸ್ಥೆಗಳೆಂದು ಘೋಷಿಸಿ, ಆರೋಗ್ಯ ಇಲಾಖೆಯ ನಿಯಂತ್ರಣಕ್ಕೆ ತರಲಾಗಿದೆ.



ಜನರ ಆರೋಗ್ಯ ಕಾಳಜಿಯನ್ನು ಕಡೆಗಣಿಸಿ, ಕೇವಲ ವ್ಯಾಪಾರ ದೃಷ್ಟಿಯಿಂದ ಅನಧಿಕೃತವಾಗಿ ತಲೆಯೆತ್ತಿರುವ ವೈದ್ಯಕೀಯ ಸ್ಪಾಗಳ ಬಗ್ಗೆ ಆರೋಗ್ಯ ಇಲಾಖೆಗೆ ಹಲವಾರು ದೂರುಗಳು ಬಂದಿದ್ದವು. ಈ ಕ್ಷೇತ್ರದಲ್ಲಿ ಪರಿಣತರಲ್ಲದಿದ್ದರೂ ರಾಸಾಯನಿಕಗಳನ್ನು ಬಳಸಿ ಸೌಂದರ್ಯವರ್ಧಕ ಚಿಕಿತ್ಸೆ ನೀಡುತ್ತಿದ್ದ, ವೃದ್ಧರ ಮೂಳೆ–ಕೀಲು ಸಮಸ್ಯೆಗಳನ್ನೇ ಬಂಡವಾಳ ಮಾಡಿಕೊಂಡು ರೇಡಿಯೇಷನ್ ಥೆರಪಿ ಒದಗಿಸುತ್ತಿದ್ದ ಜಾಲವನ್ನು ಆರೋಗ್ಯ ಇಲಾಖೆ ಪತ್ತೆ ಮಾಡಿ ಕ್ರಮಕೈಗೊಂಡಿದೆ. ಆದರೂ ಹೆಚ್ಚಿನ ಕಣ್ಗಾವಲಿರಿಸುವುದು ಅತ್ಯಗತ್ಯ ಎಂಬುದನ್ನು ಮನಗಂಡು ಈ ಕೇಂದ್ರಗಳನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ 2007ರ ಅಡಿಯಲ್ಲಿ ವೈದ್ಯಕೀಯ ಸಂಸ್ಥೆಗಳ ವ್ಯಾಪ್ತಿಗೆ ತರಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಈ ಬಗ್ಗೆ ಹೊರಡಿಸಲಾದ ಆದೇಶಕ್ಕೆ ಸಂಬಂಧಿಸಿದಂತೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು,

■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ ಚಪಾತಿ ಮಾಡಿ ಗಂಡನಿಗೆ ಬಡಿಸುತ್ತಾಳೆ

ಗಂಡ : ಚಪಾತಿ ಯಾಕೆ ಇಷ್ಟು ದಪ್ಪ ಇದೆ?

ಹೆಂಡತಿ : ಹೌದಾ... ಹೊರಗಡೆ ಸಮೋಸ, ಕಚೋರಿ ತಿನ್ನೋಕೆ ಇಷ್ಟು ದೊಡ್ಡದಾಗಿ ಬಾಯಿ ತೆಗಿತೀರಿ. ಮನೇಲಿ ಮಾತ್ರ ಹೆಂಡತಿ ಮತ್ತು ಚಪಾತಿ ಸಣ್ಣಗೆ ಇರಬೇಕಾ... ತೆಪ್ಪಗೆ ತಿನ್ನಿ.

ಮೈಸೂರು ಮಿತ್ರ

ಸೋಮವಾರ, 24 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಬದುಕನ್ನು ಪ್ರೀತಿಸುತ್ತಾ ಸಾಗಿ, ಬದುಕು ನಮ್ಮನ್ನು ಪ್ರೀತಿಸುತ್ತೆ.
ಸೋಲನ್ನು ನಗುತ್ತಾ ಸ್ವಾಗತಿಸಿ, ಗೆಲುವು ನಮ್ಮನ್ನು ಸ್ವಾಗತಿಸುತ್ತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಜಲ ಶೋಧಿಸಿ ನೀರು ತರ್ಬೇಕು, ಕುಲ ಶೋಧಿಸಿ ಹೆಣ್ಣು ತರ್ಬೇಕು.

ನಿಮ್ಮ ಪತ್ರಗಳು

ರಸ್ತೆ ಕಾಮಗಾರಿ ತ್ವರಿತಗತಿಯಲ್ಲಿ ನಡೆಯಲಿ...!

ಮಾನ್ಯರೆ,

ಮೈಸೂರಿನ ದಾಸಪ್ಪ ವೃತ್ತದಿಂದ ವಾಟರ್ ವರ್ಕ್ಸ್‌ವರೆಗೆ ರಸ್ತೆ ಕಾಮಗಾರಿ ನಡೆಯುತ್ತಿದ್ದು, ನಗರ ಸಾರಿಗೆ ಬಸ್ಸುಗಳು ಸೇರಿದಂತೆ ವಾಹನಗಳು ಏಕಮುಖ ಸಂಚಾರದಲ್ಲಿ ತೊಡಗಿವೆ. ಆಕಾಶವಾಣಿಯಿಂದ ನಗರ ಬಸ್ ನಿಲ್ದಾಣಕ್ಕೆ ಬರುವ ಬಸ್ಸುಗಳು ಮಾಮೂಲಿಯಂತೆ ಬರುತ್ತಿದ್ದು, ನಗರ ಬಸ್ ನಿಲ್ದಾಣದಿಂದ ಒಂಟಿಕೊಪ್ಪಲ್ ಮಾರ್ಗವಾಗಿ ಚಲಿಸುವ ಬಸ್ಸುಗಳು ಕೆ.ಆರ್.ಆಸ್ಪತ್ರೆಯಿಂದ ಬಂಬೂ ಬಜಾರ್ ಮುಖಾಂತರ ಬಂದು ಆಕಾಶವಾಣಿಗೆ ಸಂಚರಿಸುತ್ತಿವೆ. ಇದರಿಂದ ರೈಲ್ವೆ ನಿಲ್ದಾಣಕ್ಕೆ ಪ್ರಯಾಣಿಸುವ ಪ್ರಯಾಣಿಕರಿಗೆ ಹಾಗೂ ರೈಲ್ವೆ ನಿಲ್ದಾಣದಿಂದ ಹೆಬ್ಬಾಳು, ಇಲವಾಲ, ಕೆ.ಆರ್.ಎಸ್.ಗೆ ತೆರಳುವ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ.

ಇದಲ್ಲದೆ ವಾರಾಂತ್ಯದಲ್ಲಿ ದ್ವಿಚಕ್ರ, ನಾಲ್ಕು ಚಕ್ರಗಳ ವಾಹನಗಳ ದಟ್ಟಣೆ ಜಾಸ್ತಿ ಇರುತ್ತದೆ. ಹಾಗಾಗಿ ವಾಹನ ಚಾಲಕರಿಗೆ ತುಂಬಾ ತೊಂದರೆಯಾಗಿದೆ. ಯಾವುದೇ ಸಮಯದಲ್ಲಿ ಅಪಘಾತ ಸಂಭವಿಸುವ ಸಾಧ್ಯತೆ ಇರುತ್ತದೆ. ಇನ್ನು ಕೆಲವರು ಆಟೋ ಅವಲಂಬಿಸಿ ಒಂದಕ್ಕೆ ಎರಡರಷ್ಟು ಹಣ ಕೊಟ್ಟು ವಿಧಿಯಿಲ್ಲದೆ ಪ್ರಯಾಣ ಮಾಡುತ್ತಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕರಾದ ಕೆ.ಹರೀಶ್‌ಗೌಡರು ಇದರ ಬಗ್ಗೆ ಮುತುವರ್ಜಿ ವಹಿಸಿ, ಆದಷ್ಟು ಶೀಘ್ರವಾಗಿ ರಸ್ತೆ ಕಾಮಗಾರಿ ನಡೆಸಿ, ಸಾರ್ವಜನಿಕರಿಗೆ ಯಥಾಪ್ರಕಾರ ದಾಸಪ್ಪ ವೃತ್ತದಿಂದ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣಿಸಲು ಅನುವು ಮಾಡಿಕೊಡಬೇಕಾಗಿ ವಿನಂತಿ.

–ಜಿ.ಪಿ.ಹರೀಶ್ ವಿ.ವಿ.ಮೊಹಲ್ಲಾ, ಮೈಸೂರು

ಬೆಂಗಳೂರೊಂದೇ ಇಡೀ ರಾಜ್ಯವಲ್ಲ!

ಮಾನ್ಯರೆ,

ರಾಜ್ಯದಲ್ಲಿ 25,000 ನವೋದ್ಯಮಗಳನ್ನು ಸ್ಥಾಪಿಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇಡೀ ದೇಶದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಗಮನ ಸೆಳೆಯುತ್ತಿದೆ. ಉದ್ಯೋಗ ಅರಸಿ ಈ ಮಾಯಾನಗರಿಯನ್ನು ಅರಸಿಕೊಂಡು ಬರುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಿದೆ. ಐಟಿ ಬಿಟಿ ಕ್ಷೇತ್ರಗಳಲ್ಲಂತೂ ಬೆಂಗಳೂರಿಗೆ ಬೆಂಗಳೂರೇ ಸರಿಸಾಟಿಯೆನ್ನಬಹುದು. ಬೆಂಗಳೂರು ಮಹಾನಗರವನ್ನು ಈಗ ಗ್ರೇಟರ್ ಬೆಂಗಳೂರು ಎಂಬ ದರ್ಜೆಗೆ ಏರಿಸಲಾಗಿದೆ. ಇದಕ್ಕೆ ಅನುಗುಣವಾಗಿ ಅಗತ್ಯವಿರುವ ಮೂಲ ಸೌಕರ್ಯ ಹಾಗೂ ಇನ್ನಿತರ ಆಧುನಿಕ ಸಾರಿಗೆ ಸಂಪರ್ಕ ಹಾಗೂ ಸೌಲಭ್ಯಗಳನ್ನು ಕಲ್ಪಿಸಲು ನಿರ್ಧರಿಸಲಾಗಿದೆ. ಆದರೆ, ಬೆಂಗಳೂರೊಂದೇ ಇಡೀ ರಾಜ್ಯವಲ್ಲ. ರಾಜ್ಯದ ಇತರ ಮಹಾನಗರಗಳಾದ ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ ಮುಂತಾದ ನಗರಗಳ ಅಭಿವೃದ್ಧಿಯತ್ತಲೂ ರಾಜ್ಯ ಸರ್ಕಾರ ಗಮನ ಹರಿಸಬೇಕಾಗಿದೆ. ಈಗ ಮೈಸೂರು ಮಹಾನಗರವನ್ನು ಗ್ರೇಟರ್ ಮೈಸೂರ್ ಆಗಿ ಪರಿವರ್ತಿಸುವ ಯತ್ನ ನಡೆದಿದೆ. ಅದೇ ರೀತಿ ಈಗ ಸ್ಥಾಪಿಸಲು ಹೊರಟಿರುವ 25,000 ನವ ಉದ್ಯಮಗಳನ್ನು ಕೇವಲ ಬೆಂಗಳೂರಿನಲ್ಲಿ ಮಾತ್ರವಲ್ಲದೆ ಇಡೀ ರಾಜ್ಯದ ಉದ್ದಗಲಕ್ಕೂ ವಿಸ್ತರಿಸುವ ಅಗತ್ಯವಿದೆ. ಈ ಬಗ್ಗೆ ರಾಜ್ಯ ಸರ್ಕಾರ ತುರ್ತು ಗಮನ ಹರಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು–ನೋಟರಿ, ವಿವೇಕಾನಂದನಗರ, ಮೈಸೂರು.

ಉಡುಗೊರೆ ಪರಂಪರೆ, ಅಭಿವೃದ್ಧಿಗೆ ಬರೆ?

ಮಾನ್ಯರೆ,

ಬಿಹಾರದಲ್ಲಿ ಮಹಿಳೆಯರ ಖಾತೆಗೆ 10 ಸಾವಿರ ಜಮೆ ಮಾಡಿದ್ದರಿಂದ ಎನ್‌ಡಿಎ ಗೆಲುವು ಸುಲಭವಾಯಿತೆಂದು ಹೇಳಲಾಗುತ್ತಿದೆ. ಈ ಹಿಂದೆ ಕರ್ನಾಟಕ, ತೆಲಂಗಾಣದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಇಂತಹದ್ದೇ ಉಚಿತ ಕೊಡುಗೆಗಳ ಭರವಸೆ ನೀಡಿ ಅಧಿಕಾರದ ಗದ್ದುಗೆ ಏರಿದ್ದು ಸುಳ್ಳೇನಲ್ಲ. ಅರವಿಂದ್ ಕೇಜ್ರಿವಾಲ್ ಉಚಿತ ಕೊಡುಗೆ ಘೋಷಣೆ ಮಾಡಿಯೇ ಅಧಿಕಾರ ಹಿಡಿದಿದ್ದು, ಇವರೆಲ್ಲರಿಗೂ ಮಾದರಿ ಆಗಿರುವಂತಿದೆ. ಇತ್ತೀಚಿನ ಎಲ್ಲಾ ಚುನಾವಣೆಗಳಲ್ಲೂ ಉಚಿತ ಕೊಡುಗೆಗಳ ಮಹಾಪೂರವೇ ಹರಿದು ಬರುತ್ತಿದೆ. ಬಡವರಿಗೆ ಸಹಾಯ ಮಾಡುತ್ತೇವೆ ಎಂಬ ನೆಪದಲ್ಲಿ ಚುನಾವಣೆ ಗೆಲ್ಲಲು ರಾಜಕೀಯ ಪಕ್ಷಗಳಿಂದ ಹೊಸ ಅವತಾರ ಸೃಷ್ಟಿಯಾಗಿದೆ. ಜನಸಾಮಾನ್ಯರ ತೆರಿಗೆ ಹಣವನ್ನು ಹೀಗೆ ಹಂಚುತ್ತಾ ಹೋದರೆ ಅಭಿವೃದ್ಧಿ ಮರೀಚಿಕೆ ಆಗುವುದರಲ್ಲಿ ಅನುಮಾನವೇ ಇಲ್ಲ. –ಸಿದ್ದಲಿಂಗೇಗೌಡ, ಹೈರಿಗೆ ಗ್ರಾಮ, ಹೆಚ್.ಡಿ.ಕೋಟೆ ತಾಲೂಕು.

ಮಕ್ಕಳನ್ನು ಮಾದಕ ದ್ರವ್ಯಗಳಿಂದ ರಕ್ಷಿಸಿ

ಮಾನ್ಯರೆ,

ಇತ್ತೀಚೆಗೆ ರಾಜ್ಯದಲ್ಲಿ ಮಾದಕ ದ್ರವ್ಯ ಬಳಕೆಯು ಮತ್ತು ಮಾರಾಟದಲ್ಲಿ ಮಕ್ಕಳು ಪಾಲ್ಗೊಳ್ಳುವಿಕೆಯ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕಾರಿ. 2021ರಲ್ಲಿ 52 ಮಕ್ಕಳನ್ನು ಮಾದಕ ದ್ರವ್ಯ ಪ್ರಕರಣಗಳಲ್ಲಿ ಬಂಧಿಸಲಾಗಿದ್ದರೆ, 2023ರ ವೇಳೆಗೆ ಈ ಸಂಖ್ಯೆ 92ಕ್ಕೆ ಏರಿದೆ. 2024ರಲ್ಲಿ ಇದು 120ಕ್ಕಿಂತ ಹೆಚ್ಚು. ಅದರಲ್ಲೂ ಸಿಂಥೆಟಿಕ್ ಮಾದಕ ದ್ರವ್ಯಗಳು ಮುಖ್ಯವಾಗಿ ಕೆ2 ಮತ್ತು ಸ್ಪೈಸ್ ಮಾದಕ ದ್ರವ್ಯಗಳು ಹೊಸ ರೀತಿ ಸಮಸ್ಯೆ ತಂದೊಡ್ಡಿವೆ. ಇವುಗಳನ್ನು ಗುರುತಿಸುವುದು ವೈದ್ಯರಿಗೂ ಕಷ್ಟವಾಗಿದೆ, ಏಕೆಂದರೆ ಇವುಗಳಲ್ಲಿ 50ಕ್ಕೂ ಹೆಚ್ಚು ರಾಸಾಯನಿಕ ಸಂಯೋಜನೆಗಳನ್ನು ಹೊಂದಿರುತ್ತವೆ. ಇಂತಹ ಮಾದಕ ವಸ್ತುಗಳ ಮಾರಾಟದಲ್ಲಿ ಮಕ್ಕಳನ್ನು ಬಳಸಿಕೊಳ್ಳಲಾಗುತ್ತಿದೆ ಮತ್ತು ಈ ಮಾದಕ ದ್ರವ್ಯವನ್ನು ಹೆಚ್ಚಾಗಿ ಮಕ್ಕಳಿಗೆ ಮಾರಾಟ ಮಾಡಲಾಗುತ್ತಿದೆ ಎಂಬುದು ದುಃಖದ ಸಂಗತಿ. ರಾಜ್ಯ ಸರ್ಕಾರ ಹೆಚ್ಚಿನ ಕಠಿಣ ಕ್ರಮಗಳನ್ನು ಜಾರಿಗೆ ತರಬೇಕಾಗಿದೆ. ಮಕ್ಕಳಿಗೆ ಮಾದಕ ದ್ರವ್ಯಗಳ ಅಪಾಯವನ್ನು ತಪ್ಪಿಸುವುದರ ಮೂಲಕ, ಮಕ್ಕಳ ಭವಿಷ್ಯವನ್ನು ರಕ್ಷಿಸಬೇಕಾಗಿದೆ. –ಡಾ.ವಿಜಯಕುಮಾರ್ ಎಚ್.ಕೆ.

ವಿದ್ಯುತ್ ಗರಂ!

ಮಾನ್ಯರೆ,

ಒಸಿ ಇಲ್ಲದ್ದಕ್ಕೆ ಸಿಎಂ ಹೊಸ ಮನೆಗೂ
ಇಲ್ಲವಂತೆ ವಿದ್ಯುತ್ ಮಂಜೂರಾತಿ....
ಅಧಿಕಾರಿಗಳ ಮೇಲೆ ಸಿಎಂ ಇನ್ನೂ
ಯಾಕೆ ಗರಂ ಆಗಿಲ್ಲ ಎನ್ನುವುದೇ
ಜನರಿಗೆ ಆಶ್ಚರ್ಯ !...

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಸಜ್ಜನರೆಲ್ಲಾ ದಡ್ಡರಲ್ಲ; ದುರ್ಜನರೆಲ್ಲಾ ಜಾಣರಲ್ಲ...!

ಒಳ್ಳೆಯವರೆಲ್ಲರೂ ದಡ್ಡರು ಎಂದು ಭಾವಿಸುವುದು ಜನರ ದಡ್ಡತನ. ಒಳ್ಳೆಯವರಿಗೆ ಒಂದಷ್ಟು ಒಳ್ಳೆಯ ಗುಣಗಳಿರುತ್ತವೆ. ನಂಬಿಕೆ, ವಿಶ್ವಾಸ, ಹೊಂದಾಣಿಕೆ, ಸಹಿಷ್ಣುತೆ, ಪರೋಪಕಾರ, ನಿಸ್ವಾರ್ಥ.. ಅಷ್ಟೇ ಅಲ್ಲದೆ ಸ್ವಲ್ಪ ಭಯವೂ ಇರುತ್ತದೆ. ಇವುಗಳು ಅವರ ದೊಡ್ಡತನವೇ ಹೊರತು ದಡ್ಡತನವಲ್ಲ, ಹಾಗೆಯೇ ಇವುಗಳು ಅವರ ದೌರ್ಬಲ್ಯವಲ್ಲ, ಬದಲಿಗೆ ಅವರ ಗುಣಸ್ವಭಾವ. ಇದನ್ನೇ ಟ್ರಂಪ್‌ಕಾರ್ಡ್ ಮಾಡಿಕೊಂಡು, ಅವರಿಗೆ ಮೋಸ ಮಾಡುವ, ವಿನಾಕಾರಣ ತೊಂದರೆ ಕೊಡುವ, ಅವರ ಮೇಲೆ ದರ್ಪ ತೋರುವ ಅನೇಕ ದುಷ್ಟ ಜನರು ಇರುತ್ತಾರೆ. ನಾವು ಒಳ್ಳೆಯವರಿಗೆ ಧಮ್ಕಿ ಹಾಕಿದರೆ, ಸಾರ್ವಜನಿಕವಾಗಿ ದೊಡ್ಡದಾಗಿ ಬಾಯಿ ತೆರೆದರೆ ಅವರು ಮಾತನಾಡದೆ ಸುಮ್ಮನಾಗುತ್ತಾರೆ ಎಂಬುದು ದುಷ್ಟರ ಅಂಬೋಣ. ಒಳ್ಳೆಯವರು ಬೀದಿ ಜಗಳಕ್ಕೆ ಏಕೆ ಇಳಿಯುವುದಿಲ್ಲ ಎಂದರೆ, ಕೊಚ್ಚೆಗೆ ಯಾಕೆ ಕಲ್ಲು ಹಾಕಬೇಕು? ನಾಯಿ ನಮಗೆ ಕಚ್ಚಿತು ಎಂದರೆ ನಾವು ನಾಯಿಗೆ ಏಕೆ ಕಚ್ಚಬೇಕು? ಅನ್ನುವ ಮನೋಭಾವ ಇರುತ್ತದೆ ಅಷ್ಟೆ. ಅವರು ತಿರುಗಿ ಬಿದ್ದರೆ, ತಮ್ಮ ಜಾಣತನದಿಂದ ದುಷ್ಟರಿಗೆ ಪಾಠ ಕಲಿಸುವುದು ಕಷ್ಟವೇನಲ್ಲ.

ನಮ್ಮ ಸ್ನೇಹಿತರೊಬ್ಬರು ಮೈಸೂರಿಗೆ ಸಮೀಪದ ಗ್ರಾಮವೊಂದರಲ್ಲಿ ಕೃಷಿ ಮೇಲಿನ ಪ್ರೀತಿಗಾಗಿ ಜಮೀನನ್ನು ಖರೀದಿಸಿ ತಮ್ಮ ಖುಷಿಗಾಗಿ ಕೃಷಿ ಮಾಡುತ್ತಿದ್ದಾರೆ. ಅವರು ಸರಳ, ಸಜ್ಜನಿಕೆಯ ಜನ. ಹಳ್ಳಿ ಜನರು ಮುಗ್ಧರು, ಶ್ರಮ ಜೀವಿಗಳು ಎಂದು ನಂಬಿಕೆ ಉಳ್ಳವರು. ಆ ಕಾರಣಕ್ಕೆ ನೆರೆಯ ಜಮೀನಿನ ಮಾಲೀಕರೊಂದಿಗೆ ನಗುಮುಖದಿಂದಲೇ ಮಾತನಾಡುತ್ತಿದ್ದರು. ಒಳ್ಳೆಯತನವನ್ನೇ ಅವರ ದೌರ್ಬಲ್ಯ ಎಂದು ತಿಳಿದ ನೆರೆಯವರು ಅವರು ಇಲ್ಲದ ಸಮಯದಲ್ಲಿ ಗ್ರಾಮದ ಕೃಷಿಕ ಅವರ ಕೃಷಿ ಜಮೀನಿನಿಂದ ನೀರಿನ ಪೈಪ್ ಸಂಪರ್ಕವನ್ನು ಅವರ ಅನುಮತಿಯಿಲ್ಲದೆ ಪಡೆದಿರುತ್ತಾರೆ. ಅದನ್ನು ಗಮನಿಸಿದ ನನ್ನ ಸ್ನೇಹಿತರು ಪ್ರಶ್ನಿಸಲಾಗಿ, ಅವರಿಗೆ ಹಾರಿಕೆ ಉತ್ತರ ನೀಡಿದ್ದಾರೆ. ಇದರಿಂದ ಕುಪಿತಗೊಂಡ ಅವರು, ನಾವು ಒಳ್ಳೆಯವರಿರಬಹುದು, ದಡ್ಡರಲ್ಲ. ಕಾನೂನಿನ ಪ್ರಕಾರ ಮುಂದುವರಿದರೆ ತೊಂದರೆಯಾಗುತ್ತದೆ ಎಂದು ಎಚ್ಚರಿಸಿದಾಗ ತಪ್ಪನ್ನು ಒಪ್ಪಿಕೊಂಡು, ಅದನ್ನು ಸರಿಪಡಿಸಿಕೊಂಡಿದ್ದಾನೆ. ಇದು ಒಂದು ಉದಾಹರಣೆ ಅಷ್ಟೆ.

ಎಷ್ಟೋ ಜನರು ಜಾತಿ ಬಲ, ತೋಳ್ಬಲ ಹಾಗೂ ಹಣ ಬಲದಿಂದ ಒಳ್ಳೆಯವರಿಗೆ ವಿನಾಕಾರಣ ತೊಂದರೆ ನೀಡುವುದನ್ನು ಕಾಣಬಹುದು. ಸೈಟು, ಜಮೀನಿನ ಒತ್ತುವರಿ, ಅವರ ಅನುಮತಿಯಿಲ್ಲದೆ ಅವರ ಜಾಗ ಬಳಸುವುದು ಇತ್ಯಾದಿ ತೊಂದರೆ ನೀಡುತ್ತಲೇ ಇರುತ್ತಾರೆ ದುಷ್ಟರು. ಒಳ್ಳೆಯವರಾದವರು ಎಲ್ಲರಿಗೂ ಒಳ್ಳೆಯವರಾಗುವುದು ಒಳ್ಳೆಯದಲ್ಲ. ದುಷ್ಟರಿಗೆ ತಾವು ಕನಿಷ್ಠವಲ್ಲ, ತಮಗೂ ಕಾನೂನು ಗೊತ್ತಿದೆ ಎಂಬುದನ್ನು ತಿಳಿಸುವಂತೆ ವರ್ತಿಸಬೇಕು. ಒಳ್ಳೆಯ ಮಾತಿನಲ್ಲಿ ಕೇಳದೇ ಹೋದರೆ ಅವರದೇ ಭಾಷೆಯಲ್ಲಿ ಉತ್ತರಿಸಬೇಕು. ಮೈಚಳಿ ಬಿಟ್ಟು ಮಾತನಾಡಬೇಕು. ಅಂದ ಮಾತ್ರಕ್ಕೆ ದುಷ್ಟರಾಗಬೇಕಿಲ್ಲ, ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಅಷ್ಟೆ.

ಸಜ್ಜನರು ತಮ್ಮ ಬುದ್ಧಿಯನ್ನು ಸಹನೆ ಕೈಗೆ ಕೊಟ್ಟರೆ ದುರ್ಜನರು ತಮ್ಮ ಬುದ್ಧಿಯನ್ನು ಕೋಪದ ಕೈಗೆ ಕೊಡುತ್ತಾರೆ. ಪರಿಣಾಮ ಅಪರಾಧಗಳೇ ನಡೆದು ಹೋಗುತ್ತವೆ. ತೆರೆಯ ಮೇಲಿನ ಹೀರೋ ಅಂತೆ ಮೆರೆಯಲು ಹೋಗಿ, ತಾಳ್ಮೆಯಿಂದ ವರ್ತಿಸದೆ ಪಾಪಕೃತ್ಯದಲ್ಲಿ ಭಾಗಿಯಾಗುತ್ತಾರೆ. ಹಣ, ಅಧಿಕಾರ, ಜನಪ್ರಿಯತೆ ಏನೇ ಇದ್ದರೂ, ತಮ್ಮ ತಪ್ಪಿಗೆ ಕಾನೂನಿನ ಪ್ರಕಾರ ಕಠಿಣ ಜೈಲು ಶಿಕ್ಷೆ ಅನುಭವಿಸುತ್ತಾರೆ. ದುರ್ಜನರೆಲ್ಲಾ ಜಾಣರಲ್ಲ ಎಂಬುದಕ್ಕೆ ಜೈಲುಗಳಲ್ಲಿ ತುಂಬಿ ತುಳುಕುತ್ತಿರುವ ಖೈದಿಗಳಲ್ಲಿ ಸಜ್ಜನರಿಗಿಂತ ದುರ್ಜನರೇ ಹೆಚ್ಚಾಗಿದ್ದಾರೆ ಎಂಬುದನ್ನು ಗಮನಿಸಬೇಕು. ತಮ್ಮ ದರ್ಪ ಹಾಗೂ ದೌರ್ಜನ್ಯದ ಮನೋಭಾವದಿಂದ ಸಜ್ಜನರಿಗೆ ತೊಂದರೆ ನೀಡಿ, ಪ್ರಾಣ ತೆಗೆದು ಕ್ಷಣ ಮಾತ್ರದಲ್ಲಿ ಅಪರಾಧಿಗಳಾಗಿಬಿಡುತ್ತಾರೆ. ದುಷ್ಟರಿಗೆ ಅವರ ಬುದ್ಧಿಯೇ ಮೊದಲ ಶತ್ರುವಾಗಿರುತ್ತದೆ.

ದುಷ್ಟಬುದ್ಧಿಯಿಂದ ದೂರವಿದ್ದರೆ ಸಮಾಜದಲ್ಲಿ ಸಮಾಧಾನದಿಂದ ಬದುಕಬಹುದು. ಎಲ್ಲವನ್ನು ಸೇಡು, ದ್ವೇಷದಿಂದ ಗಳಿಸಿ ಬದುಕುತ್ತೇನೆ ಎಂದು ಭಾವಿಸುವ ದುಷ್ಟರು ದರ್ಪ, ಅಸೂಯೆ, ದ್ವೇಷಗಳಿಂದ ಆಸ್ತಿ, ಅಂತಸ್ತುಗಳಿಸಬಹುದು ಆದರೆ ಸಮಾಧಾನ, ನೆಮ್ಮದಿಗಳನ್ನಲ್ಲ. ಸಮಾಧಾನ ಆಗುವಂತಹ ಕೆಲಸ ಮಾಡುವ ಸಜ್ಜನರಿಗೆ ನಾನಾ ಕಾರಣಗಳಿಗೆ ಸರಿಯಾಗಿ ನಿದ್ರೆ ಬರುತ್ತಿಲ್ಲ. ಅಂತಹುದರಲ್ಲಿ ದ್ವೇಷ, ಅಸೂಯೆಗಳಿಂದ ತುಂಬಿರುವ ದುಷ್ಟರು ನಿದ್ರಿಸಲು ಸಾಧ್ಯವೇ?

ಸಜ್ಜನರು ಸಮಾಜದಲ್ಲಿ ಒಂದಷ್ಟು ತತ್ವ, ಸಿದ್ಧಾಂತ, ಆದರ್ಶಗಳನ್ನು ಇಟ್ಟುಕೊಂಡು ಬದುಕುತ್ತಿರುತ್ತಾರೆ. ರಸವೇ ಜನನ, ವಿರಸ ಮರಣ, ಸಮರಸವೇ ಜೀವನ ಎಂಬ ಕವಿ ದ.ರಾ.ಬೇಂದ್ರೆಯವರ ಮಾತಿನಂತೆ ಬದುಕಲು ಅನೇಕ ಸಜ್ಜನರು ಬಯಸುತ್ತಾರೆ. ನಾಗರೀಕ ಪ್ರಪಂಚದಲ್ಲಿ ವಿದ್ಯಾವಂತರೇ ಆಗಲಿ, ಅವಿದ್ಯಾವಂತರೇ ಆಗಲಿ ಸೌಜನ್ಯದಿಂದ ಬದುಕಬೇಕು. ಅದು ಮನುಷ್ಯನ ಲಕ್ಷಣ ಅಲ್ಲ, ಮನುಷ್ಯತ್ವದ ಲಕ್ಷಣ. ಸಮಾಜದಲ್ಲಿ ಘನತೆಯಿಂದ ಬದುಕಲು ಅಧಿಕಾರ, ಅಂತಸ್ತು, ಸಂಪತ್ತೇ ಬೇಕಾಗಿಲ್ಲ, ಒಬ್ಬರಿಗೆ ತೊಂದರೆ ಕೊಡದಂತೆ ಬದುಕುವುದು ಸಹ ಮನುಷ್ಯತ್ವದ ಲಕ್ಷಣ ಎಂಬುದು ಅನೇಕರಿಗೆ ತಿಳಿದಿರುವುದಿಲ್ಲ. ಸಜ್ಜನರಿಗೆ ಅನಾವಶ್ಯಕವಾಗಿ ತೊಂದರೆ ಕೊಟ್ಟು ಒಂದು ವಿಕೃತಾನಂದ ಅನುಭವಿಸುತ್ತಾರೆ.

ಪುರಂದರ ದಾಸರ ಮಾರ್ಮಿಕವಾದ ಈ ಪದ ಇಲ್ಲಿ ಉಲ್ಲೇಖನೀಯ. ಸತ್ಯವಂತರಿಗಿದು ಕಾಲವಲ್ಲ, ದುಷ್ಟಜನರಿಗೆ ಸುಭಿಕ್ಷ ಕಾಲ, ಉಪಕಾರ ಮಾಡಿದರೆ ಅಪಕರಿಸುವ ಕಾಲ, ಸಕಲವು ತಿಳಿದವಗೆ ದುರ್ಭಿಕ್ಷ ಕಾಲ...... ಧರ್ಮ ಮಾಡುವಗೆ ನಿರ್ಮೂಲವಾಗುವ ಕಾಲ, ಕರ್ಮಿ ಪಾತಕರಿಗೆ ಬಹು ಸೌಖ್ಯಕಾಲ. ಒಟ್ಟಾರೆ ಸತ್ಯವಂತರಿಗೆ ಇದು ಕಾಲವಲ್ಲ... ಎಂದು ಪುರಂದರ ದಾಸರು ಕಲಿಕಾಲದ ಪರಿಸ್ಥಿತಿಯನ್ನು ತಮ್ಮ ಪದದಲ್ಲಿ ಹೀಗೆ ವರ್ಣಿಸಿರುವುದು ಸತ್ಯಕ್ಕೆ ಹತ್ತಿರವಾಗಿದೆ. ಜೈಲಿನಿಂದ ಬಿಡುಗಡೆಗೊಂಡ ಭ್ರಷ್ಟಚಾರಿ ರಾಜಕಾರಣಿಯನ್ನು ಜನರು ಸ್ವಾಗತಿಸಿ ಮೆರವಣಿಗೆಯಲ್ಲಿ ಮೆರೆಸುವುದು ಸಮಾಜದ ಮನೋಭಾವ ಎಷ್ಟು ಹಾಳಾಗಿದೆ ಎಂಬುದಕ್ಕೆ ಸಂಕೇತವಾಗಿದೆ. ಇಂದಿನ ದೃಶ್ಯ ಮಾಧ್ಯಮಗಳು ದುರುಳರ ದುಷ್ಟತನವನ್ನು ವೈಭವೀಕರಿಸಿ, ಅವರ ದುಷ್ಕೃತ್ಯಗಳನ್ನೇ ಸಾಹಸಗಳೆಂಬತೆ ಬಿಂಬಿಸುತ್ತಿವೆ. ಸಮಾಜಕ್ಕೆ ನೈತಿಕತೆ ಬಿಂಬಿಸುವಂತಹ ಸದಭಿರುಚಿಯ ಚಲನಚಿತ್ರಗಳು ಇಂದು ಯಶಸ್ವಿಯಾಗುತ್ತಿಲ್ಲ. ಕ್ರೈಂ, ಸೆಕ್ಸ್, ಮೋಸದಾಟವಿರುವ ಚಿತ್ರಗಳಿಗೆ ಕೋಟಿ ಸುರಿದು ನಿರ್ಮಾಣ ಮಾಡುತ್ತಾರೆ. ವಿವಿಧ ರೀತಿಯಲ್ಲಿ ಪ್ರಚಾರ ಮಾಡಿ ಚಿತ್ರಗಳು ಯಶಸ್ವಿಯಾಗುವಂತೆ ಮಾಡುತ್ತಾರೆ. ಇಂದಿನ ಯುವ ಸಮೂಹವನ್ನು ಪರೋಕ್ಷವಾಗಿ ಅಪರಾಧಗಳಿಗೆ ಇವುಗಳು ಪ್ರಚೋದಿಸುತ್ತಿವೆ. ತೆರೆಯ ಮೇಲೆ ಸಜ್ಜನರನ್ನು ಗೇಲಿ ಮಾಡುತ್ತಾ, ಅವರ ಅಶಕ್ತೆಯನ್ನು ಆಡಿಕೊಳ್ಳುತ್ತಾ ಸಜ್ಜನರಿಗೆ ಬದುಕಲು ಇದು ಕಾಲವಲ್ಲ ಎಂಬಂತೆ ಬಿಂಬಿಸಲಾಗುತ್ತಿದೆ. ಇದರಿಂದ ಸಜ್ಜನರ ಕುಟುಂಬದ ಮಕ್ಕಳು ಸಹ ಲೋಕದ ನಿಯಮದಂತೆ ನಡೆಯೋಣ ಎಂಬ ಮನೋಭಾವ ಹೆಚ್ಚಿಸಿಕೊಳ್ಳುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಗೋವಿನಂತೆ ಬದುಕಲು ಆಗದು, ಹುಲಿಯಂತೆ ಬದುಕಿದರೆ ಮಾತ್ರ ಯಾರು ತಂಟೆಗೆ ಬರುವುದಿಲ್ಲ ಎಂದು ಅನೇಕ ಸಜ್ಜನ ಕುಟುಂಬಗಳ ಇಂದಿನ ಪೀಳಿಗೆಯ ಮಕ್ಕಳ ಅಂಬೋಣ.

ಇತ್ತೀಚಿಗೆ ಪತ್ರಿಕೆಯಲ್ಲಿ ಒಂದು ಸುದ್ದಿ ಓದಿ ಆಘಾತವಾಯಿತು. ಲಂಚ ತೆಗೆದುಕೊಳ್ಳದ ಸರ್ಕಾರಿ ಅಧಿಕಾರಿಯೊಬ್ಬರಿಗೆ (ಸಬ್‌ರಿಜಿಸ್ಟ್ರಾರ್) ಮೂರು ತಿಂಗಳಿನಿಂದ ಯಾವ ಹುದ್ದೆಯನ್ನು ತೋರದೆ, ವೇತನವನ್ನು ಕೊಡದೇ ಆಡಳಿತ ವ್ಯವಸ್ಥೆ ಅಸಡ್ಡೆ ತೋರುತ್ತಿದೆ ಎಂದು. ಇದು ನಿಜಕ್ಕೂ ಸಮಾಜವೇ ತಲೆ ತಗ್ಗಿಸುವ ಸಂಗತಿ. ಮತ್ತೊಂದು ಪ್ರಕರಣವಂತೂ ತಲೆತಿರುಗಿಸುವಂತೆ ಇದೆ. ಎಟಿಎಂಗೆ ಹಣ ಹಾಕಲು ಹೊರಟಿದ್ದ ವಾಹನದಿಂದ 7.00 ಕೋಟಿ ರೂ. ದರೋಡೆ ಮಾಡಿದ ಕೇಸ್‌ನಲ್ಲಿ ಪ್ರಮುಖ ಆರೋಪಿಯಾಗಿರುವುದು ಒಬ್ಬರು ಪೊಲೀಸ್ ಮಹಾನುಭಾವ. ದರೋಡೆ ಮಾಡುವ ಕಳ್ಳರನ್ನು ಹಿಡಿಯಬೇಕಾದ ಪೊಲೀಸ್ ದರೋಡೆಯಲ್ಲಿ ಪಾಲ್ಗೊಂಡು ದೊಡ್ಡ ಕಳ್ಳ ಎನಿಸಿಕೊಳ್ಳುತ್ತಾನೆ ಎಂದರೆ ಎಂತಹ ಕಾಲಘಟ್ಟದಲ್ಲಿ ಬದುಕುತ್ತಿದ್ದೇವೆ ಅಲ್ಲವೇ? ಅಪರಾಧಿಗಳನ್ನು ಹಿಡಿದು ಜೈಲಿಗೆ ಅಟ್ಟಬೇಕಿದ್ದ ಪೊಲೀಸಪ್ಪ ತಾನೇ ಅಪರಾಧಿಯಾಗಿ ಜೈಲಿಗೆ ಸೇರುತ್ತಾನೆ ಎಂದರೆ ಇದು ಇಲಾಖೆಗೆ ಎಂತಹ ನಾಚಿಕೆಗೇಡಿನ ಸಂಗತಿ ಅಲ್ಲವೇ? ಅಪರಾಧ ಕೃತ್ಯ ಎಸಗುವ ದುಷ್ಟರಿಗೆ ಇದರಿಂದ ಯಾವ ರೀತಿಯ ಭಯ ಇರುತ್ತದೆ? ಶಿಕ್ಷಣದ ಮಹತ್ವ ಏನು? ಅದರಿಂದ ಪ್ರಯೋಜನವೇನು? ಇಂತಹ ಸುದ್ದಿಗಳು ನಿಜಕ್ಕೂ ಸಜ್ಜನರನ್ನು ಮಾನಸಿಕವಾಗಿ ಘಾಸಿಗೊಳಿಸುತ್ತವೆ.

ಶಾಲೆಯಲ್ಲಿ ಕಲಿಯಲಾಗದ ಅನೇಕ ಜೀವನ ಪಾಠಗಳನ್ನು ಸಮಾಜ ಕಲಿಸುತ್ತದೆ. ನಂಬಿಕೆ, ವಿಶ್ವಾಸ, ನೈತಿಕ ಭಯ ಎಷ್ಟೇ ಇದ್ದರೂ ಸ್ವಲ್ಪ ಜಾಣತನದಿಂದ, ಪ್ರಾಕ್ಟಿಕಲ್ ಆಗಿ ಸಜ್ಜನರು ವರ್ತಿಸಬೇಕಿದೆ. ದುಷ್ಟರು ಚಾಪೆ ಕೆಳಗೆ ನುಸುಳಲು ಪ್ರಯತ್ನಿಸಿದರೆ, ಸಜ್ಜನರು ರಂಗೋಲಿ ಕೆಳಗೆ ನುಸುಳುವ ಬುದ್ಧಿವಂತಿಕೆ ಬೆಳೆಸಿಕೊಳ್ಳಬೇಕು. ಇಂದು ಸೈಬರ್ ಕ್ರೈಂ, ಡಿಜಿಟಲ್ ಅರೆಸ್ಟಿಂಗ್ ಇಂತಹ ಮೋಸದಾಟವನ್ನು ಸಜ್ಜನರ ಮೇಲೆಯೇ ಪ್ರಯೋಗ ಮಾಡಲಾಗುತ್ತದೆ. ಅನೇಕ ಜನ ಲಕ್ಷಾಂತರ ರೂಪಾಯಿಗಳನ್ನು ತಮ್ಮ ತಪ್ಪಿಲ್ಲದೆ ಕಳೆದುಕೊಂಡಿದ್ದಾರೆ. ದುರ್ಜನರು ಬೆಳೆಯಲು ಸಜ್ಜನರು ಸಹಕರಿಸಬಾರದು. ಎಷ್ಟೇ ನಂಬಿಕೆ ಇದ್ದರೂ ಅನೇಕ ಪರೀಕ್ಷೆಗಳ ನಂತರವೇ ವ್ಯವಹರಿಸಬೇಕು. ಅನೇಕ ದುರ್ಜನರು ಸಜ್ಜರಂತೆ ಮುಖವಾಡ ಧರಿಸಿ, ನಟಿಸಿ ಸಜ್ಜನರನ್ನು ಯಾಮಾರಿಸುತ್ತಾರೆ. ಸಾಲ, ಇನ್ನಿತರೆ ನೆರವು ನೀಡಬೇಕಾದ ಸಂದರ್ಭದಲ್ಲಿ ಸೂಕ್ತ ಭದ್ರತೆ ಮಾಡಿಕೊಂಡು ವ್ಯವಹರಿಸುವುದು ಸೂಕ್ತ. ಇಲ್ಲವಾದಲ್ಲಿ ಹಗಲು ದರೋಡೆ ಮಾಡಿಬಿಡುತ್ತಾರೆ. ಹಳ್ಳಿಯ ಕಡೆ ಒಂದು ಗಾದೆ ಇದೆ, ಕೊಟ್ಟು ನಿಷ್ಟುರವಾಗುವುದಕ್ಕಿಂತ ಕೊಡದೇ ನಿಷ್ಠುರವಾಗುವುದು ಒಳ್ಳೆಯದು? ಎಂದು. ಅದರಂತೆ ಸ್ವಲ್ಪ ನಿಷ್ಟುರವಾದರೂ ಮುಖವಾಡದ ಜನರನ್ನು ದೂರ ಇರಿಸಿದರೆ ಒಳ್ಳೆಯದು. ಎಲ್ಲದಕ್ಕೂ ಒಂದು ಮಿತಿ ಇರಬೇಕು, ಅದು ಒಳ್ಳೆಯತನಕ್ಕೂ ಅನ್ವಯಿಸಿಕೊಳ್ಳಬೇಕು. ಈ ಜಗತ್ತಿನಲ್ಲಿ ತಮ್ಮ ಪಾಡಿಗೆ ತಾವು ನೆಮ್ಮದಿಯಾಗಿ ಬದುಕುವವರನ್ನು ಸಹಿಸದ ದುಷ್ಟರು ಇದ್ದಾರೆ. ಹೊಟ್ಟೆಕಿಚ್ಚಿನಿಂದಲೋ ಏನೋ ಅವರಿಗೆ ತೊಂದರೆ ಕೊಡಲು ಮುಂದಾಗುತ್ತಾರೆ. ಅಂತಹ ದುರುಳರನ್ನು ಯೋಜನೆಗಳನ್ನು ವಿಫಲಗೊಳಿಸುವ ತಂತ್ರಗಳನ್ನು ಮುನ್ನೆಚ್ಚರಿಕೆಯಿಂದ ಅಳವಡಿಸಿಕೊಳ್ಳುವುದು ಒಳ್ಳೆಯದು.

ಹೂರಣ: ಮೋಸ ಹೋಗುವಷ್ಟು ಒಳ್ಳೆಯವರಾಗಬಾರದು; ಮೋಸ ಮಾಡುವಷ್ಟು ಕೆಟ್ಟವರಾಗಬಾರದು!



> “ ಪುರಂದರ ದಾಸರ ಮಾರ್ಮಿಕವಾದ ಈ ಪದ ಇಲ್ಲಿ ಉಲ್ಲೇಖನೀಯ. ಸತ್ಯವಂತರಿಗಿದು ಕಾಲವಲ್ಲ, ದುಷ್ಟಜನರಿಗೆ ಸುಭಿಕ್ಷ ಕಾಲ, ಉಪಕಾರ ಮಾಡಿದರೆ ಅಪಕರಿಸುವ ಕಾಲ, ಸಕಲವು ತಿಳಿದವಗೆ ದುರ್ಭಿಕ್ಷ ಕಾಲ..... ಧರ್ಮ ಮಾಡುವಗೆ ನಿರ್ಮೂಲವಾಗುವ ಕಾಲ, ಕರ್ಮಿ ಪಾತಕರಿಗೆ ಬಹು ಸೌಖ್ಯಕಾಲ?. ಒಟ್ಟಿನಲ್ಲಿ ಸತ್ಯವಂತರಿಗೆ ಇದು ಕಾಲವಲ್ಲ... ಎಂದು ಪುರಂದರ ದಾಸರು ಕಲಿಕಾಲದ ಪರಿಸ್ಥಿತಿಯನ್ನು ತಮ್ಮ ಪದದಲ್ಲಿ ಹೀಗೆ ಹೇಳಿರುವುದು ಸತ್ಯಕ್ಕೆ ಹತ್ತಿರವಾಗಿದೆ. ಶಾಲೆಯಲ್ಲಿ ಕಲಿಯಲಾಗದ ಅನೇಕ ಜೀವನಪಾಠಗಳನ್ನು ಸಮಾಜ ಕಲಿಸುತ್ತದೆ. ನಂಬಿಕೆ, ವಿಶ್ವಾಸ, ನೈತಿಕ ಭಯ ಎಷ್ಟೇ ಇದ್ದರೂ ಸಜ್ಜನರು ಸ್ವಲ್ಪ ಜಾಣತನದಿಂದ, ಪ್ರಾಕ್ಟಿಕಲ್ ಆಗಿ ವರ್ತಿಸಬೇಕಿದೆ. ದುಷ್ಟರು ಚಾಪೆ ಕೆಳಗೆ ನುಸುಳಲು ಪ್ರಯತ್ನಿಸಿದರೆ, ಸಜ್ಜನರು ರಂಗೋಲಿ ಕೆಳಗೆ ನುಸುಳುವ ಬುದ್ಧಿವಂತಿಕೆ ಬೆಳೆಸಿಕೊಳ್ಳಬೇಕು. ಅನೇಕ ದುರ್ಜನರು ಸಜ್ಜರ ಮುಖವಾಡ ಧರಿಸಿ, ನಟಿಸಿ ಸಜ್ಜನರನ್ನು ಯಾಮಾರಿಸುತ್ತಾರೆ. ಸಾಲ, ಇನ್ನಿತರೆ ನೆರವು ನೀಡಬೇಕಾದ ಸಂದರ್ಭದಲ್ಲಿ ಸೂಕ್ತ ಭದ್ರತೆ ಮಾಡಿಕೊಂಡು ವ್ಯವಹರಿಸುವುದು ಸೂಕ್ತ. ಇಲ್ಲವಾದಲ್ಲಿ ದುಷ್ಟರು ಹಗಲು ದರೋಡೆ ಮಾಡಿಬಿಡುತ್ತಾರೆ.

‘ಅಮೃತ ರಾಮಾಯಣ’ ಎರಡು ಸಂಪುಟಗಳ ಮಹಾಕಾವ್ಯ ಬಿಡುಗಡೆ

ಮೈಸೂರು, ನ.23(ಎಂಕೆ)– ಖ್ಯಾತ ಕವಿ ಕೃಷ್ಣ ತಿಪ್ಪೂರು ರಚಿತ ‘ಅಮೃತ ರಾಮಾಯಣ’ ಎರಡು ಸಂಪುಟಗಳ ಮಹಾಕಾವ್ಯವನ್ನು ಭಾನುವಾರ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶ್ರೀ ವಾಸವಿ ಪ್ರಕಾಶನ ಮೈಸೂರು ಹಾಗೂ ಮಿತ್ರಕೂಟ ತಿಪ್ಪೂರು ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ.ವಸಂತ ಕುಮಾರ್ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ರಾಮಾಯಣ ಮಹಾಕಾವ್ಯವು ಸನಾತನ ಪೂರ್ಣ ಪ್ರಜ್ಞೆಯ ಸಂಕೇತ. ರಾಮಾಯಣ ಕುರಿತು ರಚಿತವಾಗಿರುವ ಅಮೃತ ರಾಮಾಯಣವು ಮುದ ನೀಡುವ ಕಾವ್ಯವಾಗಿದೆ. ಸನಾತನ ಮತ್ತು ಜೀವ ಸತ್ವವನ್ನು ತಮ್ಮ ಮಹಾಕಾವ್ಯದ ಮೂಲಕ ತಿಳಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ರಾಮಾಯಣ ಮಹಾಕಾವ್ಯದ ಬಗ್ಗೆ ಬರೆಯುವುದು ಅಷ್ಟು ಸುಲಭವಲ್ಲ. ಅಮೃತ ರಾಮಾಯಣ ಮಹಾಕಾವ್ಯ ರಚನೆ ದೊಡ್ಡ ಸಾಧನೆಯಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲಾದ ಮೈಲುಗಲ್ಲಾಗಿದೆ. ರಾಮಾಯಣದ ಕೊನೆಯಲ್ಲಿ ರಾಮರಾಜ್ಯ ಪರಿಕಲ್ಪನೆ ಬಗ್ಗೆ ಮಾತನಾಡುತ್ತೇವೆ. ಅಂತಹ ರಾಮರಾಜ್ಯ ಸ್ಥಾಪನೆಯಾಗಿದ್ದು ಮೈಸೂರು ಮಹಾರಾಜರ ಆಳ್ವಿಕೆ ಕಾಲದಲ್ಲಿ. ಸಾಹಿತ್ಯ ಕ್ಷೇತ್ರದಲ್ಲಿ ಮೈಸೂರು ಇಷ್ಟೊಂದು ಗಟ್ಟಿಯಾಗಿದೆ ಎಂದರೆ ಅದಕ್ಕೆ ಇಲ್ಲಿನ ಸಾಹಿತಿಗಳ ಕೊಡುಗೆಯೇ ಕಾರಣ. ಸಾಹಿತ್ಯದ ಜೊತೆಗೆ ನೃತ್ಯ, ಕಲೆ, ವಾಸ್ತುಶಿಲ್ಪ ಸೇರಿದಂತೆ ಎಲ್ಲಾ ಆಯಾಮಗಳಲ್ಲಿ ಮೈಸೂರು ವಿಶೇಷ ಸ್ಥಾನ ಪಡೆದಿದೆ. ಹಾಗೆಯೇ ಮಠ ಮಾನ್ಯಗಳು ತ್ರಿವಿಧ ದಾಸೋಹದಿಂದ ಮೈಸೂರನ್ನು ಮತ್ತೊಂದು ಹಂತಕ್ಕೆ ಬೆಳೆಸಿವೆ. ಅದಕ್ಕೆ ಮತ್ತೊಂದು ಗರಿಯಾಗಿ ಅಮೃತ ರಾಮಾಯಣ ಮಹಾಕಾವ್ಯ ಸೇರ್ಪಡೆಯಾಗಿದೆ ಎಂದರು.

ಪದ್ಯ ರಾಮಾಯಣ: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಮಾತನಾಡಿ, ಕವಿ ಕೃಷ್ಣ ತಿಪ್ಪೂರು ಅದ್ಭುತ ಸಾಹಿತ್ಯ ಕೃಷಿ ಮಾಡಿದ್ದಾರೆ. ಅವರ ಅಮೃತ ರಾಮಾಯಣವನ್ನು ಪದ್ಯ ರಾಮಾಯಣ, ಅಮೋಘ ರಾಮಾಯಣ ಎಂದು ಹೇಳಲು ಬಯಸುತ್ತೇನೆ. ಅಮೃತ ಮಹಾಕಾವ್ಯದಲ್ಲಿ ದೋಷಗಳಿಲ್ಲವೇ ಎಂದರೆ, ಚಂದ್ರನಲ್ಲಿ ಕಲೆಗಳಿದ್ದರೂ ಚಂದ್ರ ಪ್ರಕಾಶಮಾನವಾಗಿರುವಂತೆಯೇ ಈ ಮಹಾ ಕಾವ್ಯವೂ ಪ್ರಕಾಶಮಾನವಾಗಿದೆ. ಕೃಷ್ಣ ತಿಪ್ಪೂರು ಅವರ ಮೂಲಕ ಕನ್ನಡ ಸಾಹಿತ್ಯ ಇನ್ನಷ್ಟು ಬೆಳೆಯುವಂತಾಗಲಿ ಎಂದು ಆಶಿಸಿದರು. ನಂತರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಕ್ಕಮಹಾದೇವಿ ಸಂಶೋಧನಾ ಮತ್ತು ವಿಸ್ತರಣಾ ಪೀಠದ ನಿರ್ದೇಶಕಿ ಪ್ರೊ.ಕವಿತಾ ರೈ ಕೃತಿ ಕುರಿತು ಮಾತನಾಡಿದರು. ಶ್ರೀರಂಗಪಟ್ಟಣ ಚಂದ್ರವನ ಬೇಬಿ ಮಠದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತಶಿವಯೋಗಿ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರೆ, ಶಾಸಕ ಡಿ.ರವಿಶಂಕರ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ವೈ.ಡಿ. ರಾಜಣ್ಣ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಬಿ.ಸಿ.ಚಿಲ್ಕರಾಗಿ, ಶ್ರೀ ವಾಸವಿ ಯುವಜನ ಸಂಘದ ಅಧ್ಯಕ್ಷ ಬಿ.ನಾಗೇಶ್, ಶ್ರೀ ವಾಸವಿ ಪ್ರಕಾಶನದ ಎಂ.ಆರ್. ಮಂಜುನಾಥಗುಪ್ತಾ, ಮಿತ್ರಕೂಟದ ದೊರೆಸ್ವಾಮಿ ಮತ್ತಿತರರಿದ್ದರು.



ಖ್ಯಾತ ಕವಿ ಕೃಷ್ಣ ತಿಪ್ಪೂರು ರಚಿತ ‘ಅಮೃತ ರಾಮಾಯಣ’ ಎರಡು ಸಂಪುಟಗಳ ಮಹಾಕಾವ್ಯವನ್ನು ಮೈಸೂರು ವಿವಿ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ಬಿಡುಗಡೆ ಮಾಡಿದರು. ಶ್ರೀರಂಗಪಟ್ಟಣ ಚಂದ್ರವನ ಬೇಬಿ ಮಠದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಡಿ.ರವಿಶಂಕರ್ ಮತ್ತಿತರರಿದ್ದರು.

> “ ರಾಮಾಯಣ ಮತ್ತು ಮಹಾಭಾರತ ಭಾರತೀಯ ಸಂಸ್ಕೃತಿಯ ಎರಡು ಕಣ್ಣುಗಳು. ಅವುಗಳಲ್ಲಿ ಯಾವುದು ಮೊದಲು ನಡೆಯಿತು ಎಂಬ ಪ್ರಶ್ನೆಗಳಿದ್ದರೂ ಅವುಗಳೆರಡು ಶ್ವಾಸಕೋಶವೆಂದು ಹೇಳಲು ಬಯಸುತ್ತೇನೆ. ಹಾಗೆಯೇ ರಾಮಾಯಣ ಮತ್ತು ಮಹಾಭಾರತದ ಜೊತೆಗೆ ಭಾಗವತವನ್ನು ಸ್ಮರಿಸಬೇಕು. –ಸಿಪಿಕೆ, ಹಿರಿಯ ಸಾಹಿತಿ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಸೋಮವಾರ 24 ನವೆಂಬರ್ 2025

ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಶತಮಾನೋತ್ಸವ, ವಿವೇಕಪ್ರಭ ಮಾಸ ಪತ್ರಿಕೆಯ ಬೆಳ್ಳಿಹಬ್ಬ


ರಾಷ್ಟ್ರದ ಸದೃಢತೆಗೆ ರಾಮಕೃಷ್ಣ ಆಶ್ರಮ ತನ್ನದೇ ವಿಶಿಷ್ಟ ಪ್ರೇರಣೆ ನೀಡುತ್ತಿದೆ

ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅಭಿಮತ

ಮೈಸೂರು,ನ.23(ಪಿಎಂ)– ನಮ್ಮ ರಾಷ್ಟ್ರದ ಸದೃಢತೆಗಾಗಿ ತನ್ನದೇ ವಿಶಿಷ್ಟ ಪ್ರೇರಣೆಯನ್ನು ರಾಮಕೃಷ್ಣ ಆಶ್ರಮ ನೀಡುತ್ತಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅಭಿಪ್ರಾಯಪಟ್ಟರು.

ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲಾ ಆವರಣದ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಶತಮಾನೋತ್ಸವ ಪ್ರಯುಕ್ತ 'ಸಾಹಿತ್ಯ ಸೇವೆ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ 'ಶ್ರೀರಾಮಕೃಷ್ಣ ಆಶ್ರಮದ ಕನ್ನಡ ಪ್ರಕಟಣೆಗಳು ಮತ್ತು ವಿವೇಕಪ್ರಭ ಮಾಸ ಪತ್ರಿಕೆಯ ಬೆಳ್ಳಿಹಬ್ಬ' ಅಧಿವೇಶನದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಮಹಾನ್ ಸಂತ ಶ್ರೀರಾಮಕೃಷ್ಣ ಪರಮಹಂಸರ ಆಧ್ಯಾತ್ಮಿಕ ಮೌಲ್ಯಗಳು, ಶ್ರೀಶಾರದಾ ಮಾತೆಯವರ ಮಹೋನ್ನತ ಸಂದೇಶಗಳು ಹಾಗೂ ಸ್ವಾಮಿ ವಿವೇಕಾನಂದರ ಆದರ್ಶಗಳ ಮೂಲಕ ದೇಶದ ಯುವ ಜನರನ್ನು ಸತ್ಪ್ರಜೆಗಳಾಗಿ ರೂಪಿಸುವ ಮಹತ್ತರ ಕಾರ್ಯದಲ್ಲಿ ರಾಮಕೃಷ್ಣ ಆಶ್ರಮ ತೊಡಗಿದೆ. ಆಶ್ರಮದಿಂದ ನಡೆಯುವ ಶಿಕ್ಷಣ, ಪರಿಸರ ಸಂರಕ್ಷಣೆ, ಗ್ರಾಮೀಣ ಅಭಿವೃದ್ಧಿಯಂತಹ ಸಾಮಾಜಿಕ ಕೈಂಕರ್ಯಗಳು ನಮ್ಮ ರಾಜ್ಯದ ಅಭಿವೃದ್ಧಿಗೆ ಪೂರಕ ಸಂಗತಿಗಳಾಗಿವೆ. ಜಾತಿ, ಕುಲ ಹಾಗೂ ಪಂಗಡಗಳ ಎಲ್ಲೆ ಮೀರಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಶಕ್ತಿದಾಯಕ ವಿಚಾರಧಾರೆಗಳನ್ನು ರಾಮಕೃಷ್ಣ ಆಶ್ರಮ ಪಸರಿಸುತ್ತಿದೆ ಎಂದು ತಿಳಿಸಿದರು.



ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲಾ ಆವರಣದ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಭಾನುವಾರ ನಡೆದ 'ಸಾಹಿತ್ಯ ಸೇವೆ' ಕಾರ್ಯಕ್ರಮದಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮಾತನಾಡಿದರು.

ಸ್ವಾಮಿ ಸಿದ್ಧೇಶ್ವರಾನಂದಜೀ ಅವರ ಪ್ರಯತ್ನದ ಫಲವಾಗಿ 1925ರಲ್ಲಿ ಮೈಸೂರು ರಾಮಕೃಷ್ಣ ಆಶ್ರಮ ಸ್ಥಾಪನೆಯಾಯಿತು. ಮೈಸೂರಿನ ಅರಸರು ಸಹ ಆಶ್ರಮದ ಬೆಳವಣಿಗೆಗೆ ಸಹಕಾರ ನೀಡಿದರು. ಆಶ್ರಮದ ಶಾಲೆಯಲ್ಲಿ ಓದಿದ ಮಕ್ಕಳು ಶಿಸ್ತಿನ ಸಿಪಾಯಿಗಳಂತೆ ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡಿದ್ದಾರೆ. ಜೊತೆಗೆ ಪ್ರಜ್ಞಾವಂತ ನಾಗರಿಕರಾಗಿ ಹತ್ತು ಹಲವು ಸಂಸ್ಥೆಗಳಲ್ಲಿ ಉನ್ನತ ಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ರಾಷ್ಟ್ರಕವಿ ಕುವೆಂಪು ಅವರು 14 ವರ್ಷಗಳ ಕಾಲ ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಇದ್ದು ಶಿಕ್ಷಣ ಪಡೆದರು. ರಾಜ್ಯದ ಮುಖ್ಯಮಂತ್ರಿಗಳಾಗಿ, ಕೇಂದ್ರ ಸರ್ಕಾರದ ಮಂತ್ರಿಗಳಾಗಿ ಉತ್ತಮ ಕೆಲಸ ಮಾಡಿರುವ ದಿ.ಎಸ್.ಎಂ.ಕೃಷ್ಣ ಕೂಡ ಇಲ್ಲಿನ ವಿದ್ಯಾರ್ಥಿಯಾಗಿದ್ದರು. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ, ಸುಪ್ರಸಿದ್ಧ ಆರ್ಥಿಕ ತಜ್ಞ ಡಾ.ಡಿ.ಎಂ.ನಂಜುಂಡಪ್ಪ, ಸಾಹಿತ್ಯ ದಿಗ್ಗಜರೆನಿಸಿದ ಪ್ರೊ.ಪ್ರಭುಶಂಕರ, ಪ್ರೊ.ಪ್ರಭುಪ್ರಸಾದ ಮೊದಲಾದವರು ಈ ಆಶ್ರಮದ ಸಾಹಿತ್ಯ ರತ್ನಗಳು ಎಂದು ಬಣ್ಣಿಸಿದರು.

ಪ್ರಧಾನಿಗಳಿಂದ ವಿವೇಕಾ ಸ್ಮಾರಕ ಉದ್ಘಾಟನೆ: ಭಾರತದ ಭವಿಷ್ಯಕ್ಕಾಗಿ ಶ್ರಮಿಸುತ್ತಿರುವ ನಮ್ಮೆಲ್ಲರ ನೆಚ್ಚಿನ ಪ್ರಧಾನಿಗಳು ಕೂಡ ರಾಮಕೃಷ್ಣ ಆಶ್ರಮದೊಂದಿಗೆ ಉತ್ತಮ ಒಡನಾಟ ಹೊಂದಿದ್ದಾರೆ. ಆಶ್ರಮದ ಆದರ್ಶಗಳನ್ನು ಪ್ರಧಾನಿಯವರು ಮೈಗೂಡಿಸಿಕೊಂಡಿದ್ದಾರೆ. ಮೈಸೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ವಿವೇಕಾ ಸ್ಮಾರಕದ ಉದ್ಘಾಟನೆಯನ್ನು ಪ್ರಧಾನಿಗಳ ಅಮೃತ ಹಸ್ತದಿಂದ ನೆರವೇರಿಸಬೇಕೆಂದು ಪೂಜ್ಯ ಸ್ವಾಮಿ ಮುಕ್ತಿದಾನಂದಜೀ ಅವರು ಇಂಗಿತ ವ್ಯಕ್ತಪಡಿಸಿದ್ದಾರೆ. ದೇಶದ ಅಭಿವೃದ್ಧಿಗೆ ರಾಮಕೃಷ್ಣ ಆಶ್ರಮದ ವಿಶೇಷ ಕೊಡುಗೆ ಇರುವುದರಿಂದ ಪ್ರಧಾನಿಗಳೇ ಮೈಸೂರಿನ ವಿವೇಕಾ ಸ್ಮಾರಕ ಉದ್ಘಾಟಿಸಲಿದ್ದಾರೆ. ಅವರು ಬಂದೇ ಬರುತ್ತಾರೆ ಎಂದು ವಿ.ಸೋಮಣ್ಣ ವಿಶ್ವಾಸ ವ್ಯಕ್ತಪಡಿಸಿದರು.

> ನಾವು ಅಲ್ಪ ಕಾಲ ಬದುಕಿದ್ದರೂ ಪ್ರಜ್ವಲಿಸಬೇಕು. ಆ ಮೂಲಕ ನಾಲ್ಕು ಜನಕ್ಕೆ ಬೆಳಕು ಆಗಬೇಕು. ನಾವು ಎಷ್ಟು ಕಾಲ ಬದುಕುತ್ತೇವೆ ಎಂಬುದು ಮುಖ್ಯವಲ್ಲ. ಬದಲಿಗೆ ಹೇಗೆ ಬದುಕುತ್ತೇವೆ ಎಂಬುದೇ ಮುಖ್ಯ. ಬದುಕಿದ್ದು ಕೇವಲ 32 ವರ್ಷಗಳು ಅಷ್ಟೆಯಾದರೂ ಶಂಕರಾಚಾರ್ಯರು ಇಡೀ ದೇಶದಲ್ಲಿ ಪ್ರವಾಸ ಮಾಡಿ ಹಿಂದೂ ಧರ್ಮದ ಪುನರುಜ್ಜೀವನಕ್ಕೆ ಕಾರಣರಾದರು.
>
> -ಪ್ರತಾಪ್ ಸಿಂಹ, ಮಾಜಿ ಸಂಸದ

ಹಿಂದೂ ಧರ್ಮದ ಹಿರಿಮೆ ಸಾರಿದ ವಿವೇಕಾನಂದರು: ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ರಾಮಕೃಷ್ಣ ಆಶ್ರಮದ ವಾತಾವರಣದಲ್ಲೇ ವಿವೇಕಾನಂದರ ಚಿಂತನೆ ಇದ್ದು, ಇಲ್ಲಿನ ವಿದ್ಯಾರ್ಥಿಗಳು ಪ್ರತಿದಿನ ವಿವೇಕಾನಂದರ ಹಾಗೂ ರಾಮಕೃಷ್ಣ ಪರಮಹಂಸರ ಆದರ್ಶಗಳನ್ನು ಮೈಗೂಡಿಸಿಕೊಂಡು ಪಾಠ ಕೇಳುತ್ತಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಶ್ರೀನಿವಾಸ ರಾಮಾನುಜ ಅವರನ್ನು ಗಣಿತಶಾಸ್ತ್ರ ಹೊರತುಪಡಿಸಿ ನೋಡಲು ಸಾಧ್ಯವಿಲ್ಲ. ಅವರು ಬದುಕಿದ್ದು ಕೇವಲ 32 ವರ್ಷ. ಸ್ವಾಮಿ ವಿವೇಕಾನಂದರು ಬದುಕಿದ್ದು ಕೇವಲ 39 ವರ್ಷ. ಹಿಂದೂ ಧರ್ಮದ ಪುನರುತ್ಥಾನ ಮಾಡಿದವರು ಶಂಕರಾಚಾರ್ಯರಾದರೆ, ಹಿಂದೂ ಧರ್ಮದ ಹಿರಿಮೆ ಹಾಗೂ ವಿಶಾಲ ಮನೋಭಾವವನ್ನು ಜಗತ್ತಿಗೆ ಸಾರಿದವರು ಸ್ವಾಮಿ ವಿವೇಕಾನಂದರು ಎಂದು ಸ್ಮರಿಸಿದರು.

ಇದೇ ವೇಳೆ ಹಲವು ಲೇಖಕರು, ಸಾಹಿತಿಗಳಿಗೆ ಗೌರವ ಸಮರ್ಪಿಸಲಾಯಿತು. ಬೆಂಗಳೂರಿನ ಬಸವನ ಗುಡಿಯ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ನಿತ್ಯಸ್ಥಾನಂದಜೀ ಸಾನ್ನಿಧ್ಯ ವಹಿಸಿದ್ದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ), ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ, ಡಾ.ಕೆ.ಕೃಷ್ಣಮೂರ್ತಿ ಸಂಶೋಧನ ಪ್ರತಿಷ್ಠಾನದ ಸಂಸ್ಥಾಪಕ ನಿರ್ದೇಶಕಿ ಡಾ.ಲೀಲಾ ಪ್ರಕಾಶ್, ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ, ಮಾಜಿ ಅಧ್ಯಕ್ಷ ಸ್ವಾಮಿ ಆತ್ಮಜ್ಞಾನಂದಜೀ ಮತ್ತಿತರರು ಹಾಜರಿದ್ದರು.

ವೇಶ್ಯಾವಾಟಿಕೆ ನಡೆಸುತ್ತಿದ್ದ ಸ್ಪಾ ಮೇಲೆ ಸಿಸಿಬಿ ದಾಳಿ

ಮೈಸೂರು, ನ.23– ವೇಶ್ಯಾವಾಟಿಕೆ ನಡೆಸುತ್ತಿದ್ದ ಸ್ಪಾ ಮೇಲೆ ಮೈಸೂರಿನ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದಾರೆ. ಗೋಕುಲಂ ಮೂರನೇ ಹಂತ ಕಾಂಟೂರ್ ರಸ್ತೆಯ ವಾಹನ ಶೋರೂಂ ಕಟ್ಟಡದ 3ನೇ ಮಹಡಿಯಲ್ಲಿರುವ ಸ್ಪಾನಲ್ಲಿ ಮಹಿಳೆಯರನ್ನು ಇಟ್ಟುಕೊಂಡು ವೇಶ್ಯಾವಾಟಿಕೆ ನಡೆಸುತ್ತಿರುವ ಬಗ್ಗೆ ಬಾತ್ಮೀದಾರರಿಂದ ಖಚಿತ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದಾರೆ. ಈ ಸಂಬಂಧ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಿಚಾರಣೆ ಮುಂದುವರೆಸಲಾಗಿದೆ.

ಶಬರಿಮಲೆ ಯಾತ್ರೆ ಬಾಕಿ ಹಣಕ್ಕಾಗಿ ಬಾಲಕನ ಮೇಲೆ ಹಲ್ಲೆ

ಮೈಸೂರು, ನ.23– ಶಬರಿಮಲೆ ಯಾತ್ರೆಯ ಬಾಕಿ ಹಣ ನೀಡುವುದು ತಡವಾದ ಕಾರಣಕ್ಕೆ 17 ವರ್ಷದ ಬಾಲಕನನ್ನು ಅಟ್ಟಾಡಿಸಿ ಹೊಡೆದಿರುವ ಬಗ್ಗೆ ಮೈಸೂರಿನ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಲ್ಲೆಗೊಳಗಾಗಿರುವ ಬಾಲಕನ ತಾಯಿ ನೀಡಿದ ದೂರಿನನ್ವಯ ಶ್ರೀರಾಂಪುರದ ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ನನ್ನ ಮಗ ನ.17ರಂದು ಪರಿಚಿತರೊಂದಿಗೆ ಶಬರಿಮಲೆ ಯಾತ್ರೆ ಹೋಗಿ ನ.21ರಂದು ವಾಪಸ್ಸಾಗಿದ್ದು, ವೆಚ್ಚದ ಬಾಕಿ ಹಣ ನೀಡುವಂತೆ ಅವರು ಪೀಡಿಸುತ್ತಿದ್ದರು. ತಾಯಿ ಮನೆಗೆ ಬಂದ ನಂತರ ಹಣ ನೀಡುವುದಾಗಿ ಹೇಳಿದರೂ ಅವಾಚ್ಯವಾಗಿ ಬೈದು, ಈಗ ಹಣ ನೀಡದಿದ್ದರೆ ಗಂಟೆಗೆ ಒಂದು ಸಾವಿರದಂತೆ ಹೆಚ್ಚು ಕೊಡಬೇಕಾಗುತ್ತದೆ ಎಂದು ಬೆದರಿಸಿದ್ದರು. ಇದರಿಂದ ಹಣ ಕೊಡುವವರೆಗೆ ಮೊಬೈಲ್ ಇಟ್ಟುಕೊಳ್ಳುವಂತೆ ಹೇಳಿದಾಗ ಬೋಗಾದಿ ರಿಂಗ್ ರಸ್ತೆಗೆ ಬರುವಂತೆ ತಿಳಿಸಿದರು. ಆಗ ಬಾರ್‌ನಿಂದ ಬಂದ ಮೂವರು, ಏಕಾಏಕಿ ಮಗನ ಮೇಲೆ ಹಲ್ಲೆ ನಡೆಸಿದ್ದಾರೆ. ಓಡಿಹೋಗಲು ಪ್ರಯತ್ನಿಸಿದಾಗ ಅಟ್ಟಾಡಿಸಿ, ಹೊಡೆದಿದ್ದಾರೆ. ಆ ವೇಳೆ ಗೇಟ್ ತೆರೆದಿದ್ದ ಮನೆಯೊಳಗೆ ಓಡಿದ್ದು, ಅಲ್ಲಿದ್ದ ಮಹಿಳೆ ಹಲ್ಲೆ ತಡೆಯಲು ಯತ್ನಿಸಿದ್ದಾರೆ. ಆದರೂ ಕೇಳದಿದ್ದಾಗ ಮೊಬೈಲ್‌ನಲ್ಲಿ ಸೆರೆ ಹಿಡಿಯಲು ಮುಂದಾಗಿದ್ದರಿಂದ ಆಕೆಯ ಮೊಬೈಲ್ ಅನ್ನು ಒಡೆದು ಹಾಕಿದ್ದಾರೆ. ಮಹಿಳೆ ಇಲ್ಲದಿದ್ದರೆ ಮಗನನ್ನು ಸಾಯಿಸುತ್ತಿದ್ದರು ಎಂದು ಹಲ್ಲೆಗೊಳಗಾದ ಹುಡುಗನ ತಾಯಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಬಾರ್‌ನಲ್ಲಿ ಚಾಕುವಿನಿಂದ ಇರಿತ

ಮೈಸೂರು, ನ.23– ಬಾರ್‌ನಲ್ಲಿ ವ್ಯಕ್ತಿಯೊಬ್ಬ ಚಾಕುವಿನಿಂದ ಪರಿಚಿತನ ಕುತ್ತಿಗೆ ಕುಯ್ದು ಹತ್ಯೆಗೆ ಯತ್ನಿಸಿರುವುದಾಗಿ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಜರ್‌ಬಾದ್ ನಿವಾಸಿ ಮೋಹನ್‌ಕುಮಾರ್ ನ.21ರಂದು ರಾತ್ರಿ 10.30ರ ಸಮಯದಲ್ಲಿ ಸಬರ್ಬನ್ ಬಸ್ ನಿಲ್ದಾಣದ ಬಳಿಯ ಬಾರ್‌ವೊಂದರಲ್ಲಿ ಮದ್ಯಪಾನ ಮಾಡುವಾಗ ಪರಿಚಿತ ಸಂಜಯ್ ಪ್ರಸಾದ್ ಯಾವುದೋ ಉದ್ದೇಶದಿಂದ ಚಾಕುವಿನಿಂದ ಕುತ್ತಿಗೆ ಕುಯ್ದು, ಹತ್ಯೆಗೆ ಯತ್ನಿಸಿದ್ದಾರೆ ಎಂದು ಮೋಹನ್‌ಕುಮಾರ್ ಪುತ್ರ, ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಜೈನ ಸಮುದಾಯ ಪರೋಪಕಾರದ ಪ್ರತೀಕ

ಚಾತುರ್ಮಾಸ್ಯ ವರ್ಷಾ ಯೋಗ ಮುಕ್ತಾಯ ಸಮಾರಂಭದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್



ಮೈಸೂರಿನ ಎಂ.ಎಲ್.ಜೈನ್ ಬೋರ್ಡಿಂಗ್ ಬಸದಿ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪುಸ್ತಕ ಬಿಡುಗಡೆಗೊಳಿಸಲಾಯಿತು.

ಮೈಸೂರು,ನ.23(ಪಿಎಂ)– ಜೈನ ಸಮುದಾಯವು ಧಾನ, ಧರ್ಮ ಹಾಗೂ ಪರೋಪಕಾರದ ಪ್ರತೀಕ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹೇಳಿದರು.


ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣ ಸಮೀಪದ ಎಂ.ಎಲ್.ಜೈನ್ ಬೋರ್ಡಿಂಗ್ ಸಭಾಭವನದಲ್ಲಿ ಚಾತುರ್ಮಾಸ ವರ್ಷಾಚರಣೆ ಸೇವಾ ವತಿಯಿಂದ ಹಮ್ಮಿಕೊಂಡಿದ್ದ ಪೂಜ್ಯ 108 ಆಚಾರ್ಯ ಶ್ರೀ ಪುಣ್ಯಸಾಗರ ಮುನಿ ಮಹಾರಾಜರ ಚಾತುರ್ಮಾಸ್ಯ ವರ್ಷಾ ಯೋಗ ಮುಕ್ತಾಯ ಸಮಾರಂಭದಲ್ಲಿ ಜಿನ ಭಕ್ತಿ ಗೀತೆಗಳ ಮಧುರ ಪುಷ್ಪ ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಜೈನ ದಿಗಂಬರ ಸಮಾಜ ಸದಾಕಾಲ ಸಮಾಜದ ಹಿತವನ್ನು ಬಯಸುವ ಶಾಂತಿಪ್ರಿಯ ಸಮುದಾಯ. ಧಾನ–ಧರ್ಮ ಮಾಡುವಲ್ಲಿ ಮುಂಚೂಣಿಯಲ್ಲಿರುವ ಸಮಾಜ. ಈ ಸಮುದಾಯದಲ್ಲಿ ಧಾರ್ಮಿಕತೆ ಮತ್ತು ಶಿಕ್ಷಣದ ಮೂಲಕ ಸಂಸ್ಕಾರವನ್ನು ಕಾಣಬಹುದು. ಇದಕ್ಕೆ ಜೈನ ವಿದ್ಯಾಲಯಗಳು, ಜೈನ ಮಂದಿರಗಳೇ ಸಾಕ್ಷಿ ಎಂದು ಹೇಳಿದರು.

ಎಲ್ಲಾ ಧರ್ಮ, ಜಾತಿಯ ಸ್ವಾಮೀಜಿಗಳು, ಮಠಾಧೀಶರು, ಪ್ರಮುಖರು ಬಯಸುವುದು ಸಮಾಜದ ಹಿತವನ್ನೇ ಹೊರತು ಬೇರೇನೂ ಅಲ್ಲ. ಯಾವುದೇ ಧರ್ಮವಾಗಲೀ, ಜಾತಿಯಾಗಲೀ, ಯಾವುದೇ ಭಾಷಿಗರಾಗಲೀ ಮಾನವೀಯತೆಗೆ ಆದ್ಯತೆ ನೀಡುವುದು ಮುಖ್ಯ. ಸಹಬಾಳ್ವೆ ಮತ್ತು ಸಾಮರಸ್ಯದಿಂದ ಬದುಕಿದಾಗ ಮಾತ್ರ ಮಾನವ ಜನ್ಮಕ್ಕೆ ಸಾರ್ಥಕತೆ ಬರಲು ಸಾಧ್ಯ. ಅಂತಹ ಸಮಾಜಮುಖಿ ಚಿಂತನೆಗಳು ಮತ್ತು ಆಶೋತ್ತರಗಳನ್ನು ಹೊಂದಿರುವ ದಿಗಂಬರ ಜೈನ ಸಮಾಜದ ಸಾಮಾಜಿಕ ಕಾರ್ಯ ಶ್ಲಾಘನೀಯ ಎಂದರು.


ದಿಗಂಬರ ಜೈನ ಸಮಾಜದ ಅಧ್ಯಕ್ಷ ಸುನೀಲ್ ಕುಮಾರ್, ಸಮಾಜದ ಮುಖಂಡರಾದ ಸುಧೀರ್ ಕುಮಾರ್, ಜಗದೀಶ್, ಉದಯ್ ಕುಮಾರ್, ಬಾಬು ಮತ್ತಿತರರು ಹಾಜರಿದ್ದರು.

ಕೇಂದ್ರ ಸಚಿವ ವಿ.ಸೋಮಣ್ಣ ಅವರಿಗೆ ಸ್ವಾಗತ



ಮೈಸೂರಿಗೆ ಭಾನುವಾರ ಆಗಮಿಸಿದ ಕೇಂದ್ರ ಸಚಿವರಾದ ವಿ.ಸೋಮಣ್ಣ ಅವರನ್ನು ಮಾಜಿ ಉಪ ಮೇಯರ್ ಹಾಗೂ ಮೈಸೂರಿನ ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿಶೈಲೇಂದ್ರ ಅವರು ಆತ್ಮೀಯವಾಗಿ ಸ್ವಾಗತಿಸಿದರು. ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಎಲ್.ನಾಗೇಂದ್ರ, ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್. ಮಾದೇವಯ್ಯ, ಪಾಲಿಕೆ ಮಾಜಿ ಸದಸ್ಯ ಜಗದೀಶ್, ಗ್ರಾಮಾಂತರ ಎಸ್‌ಸಿ ಮೋರ್ಚಾ ಅಧ್ಯಕ್ಷ ಅನಿಲ್‌ಕುಮಾರ್, ನಿಕಟಪೂರ್ವ ಯುವ ಮೋರ್ಚಾ ಅಧ್ಯಕ್ಷ ಕಿರಣ್‌ಗೌಡ, ಮುಖಂಡರಾದ ನವೀನ್ ಕುಮಾರ್ ಉಪಸಿತರಿದ್ದರು

ಮಾದರಿ ರೈತ ರಾಜಣ್ಣಗೆ ಅಭಿನಂದನೆ



ಮೈಸೂರು ಹೆಬ್ಬಾಳಿನ ಸಂಗಮ್ ಸರ್ಕಲ್ ಪಾರ್ಕ್ ಗೆಳೆಯರ ಬಳಗದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಸರ್ಕಾರಿ ಹುದ್ದೆ ತೊರೆದು ಕೃಷಿಯಲ್ಲಿ ತೊಡಗಿರುವ ಮಾದರಿ ರೈತ ರಾಜಣ್ಣ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಮಾಜಿ ಸೈನಿಕ ಬಾಬು, ಕಾಂಗ್ರೆಸ್ ಮುಖಂಡ ರವಿ ಡೆಲ್ಲಿ, ಉಪತಹಶೀಲ್ದಾರ್ ಭರತ್, ವಿದ್ಯುತ್ ಗುತ್ತಿಗೆದಾರ ಮೋಹನ್ ಸೇರಿದಂತೆ ಬಳಗದ ಸದಸ್ಯರು ಉಪಸ್ಥಿತರಿದ್ದರು.

ಅಕ್ರಮವಾಗಿ ಪಡಿತರ ಸಾಗಿಸುತ್ತಿದ್ದವನ ಹಿಡಿದು ಅಧಿಕಾರಿಗಳಿಗೆ ಒಪ್ಪಿಸಿದ ಗ್ರಾಮಸ್ಥರು



ಅಕ್ರಮ ಪಡಿತರ ಕೊಂಡೊಯ್ಯುತ್ತಿದ್ದ ಆಟೋ ವಶಪಡಿಸಿಕೊಂಡಿರುವ ಗ್ರಾಮಸ್ಥರು

ಶ್ರೀರಂಗಪಟ್ಟಣ, ನ.23– ಅಕ್ರಮವಾಗಿ ಪಡಿತರ ಪದಾರ್ಥ ಸಾಗಿಸುತ್ತಿದ್ದವನನ್ನು ಗ್ರಾಮಸ್ಥರೇ ಹಿಡಿದು ಅಧಿಕಾರಿಗಳಿಗೆ ಒಪ್ಪಿಸಿರುವ ಘಟನೆ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ ಹೋಬಳಿಯ ಗ್ರಾಮದಲ್ಲಿ ನಡೆದಿದೆ. ಭಾನುವಾರ (ನ.23) ಪಾಲಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಸಾರ್ವಜನಿಕ ಪಡಿತರವನ್ನು ಪ್ಯಾಸೆಂಜರ್ ಆಟೋದಲ್ಲಿ ಸಾಗಾಟ ಮಾಡುತ್ತಿದ್ದ ವ್ಯಕ್ತಿಯನ್ನು ಅದೇ ಗ್ರಾಮದ ಪ್ರಸನ್ನ ಅವರು ನೀಡಿದ ಮಾಹಿತಿಯಂತೆ ಕೆಎ–0–ಎಡಿ–4213ಯ ಆಟೋದಲ್ಲಿ 2 ಅಕ್ಕಿ ಮೂಟೆ, ಚೀಲಗಳು ಹಾಗೂ ರಾಗಿಯನ್ನು ಸಾಗಿಸುತ್ತಿರುವ ವೇಳೆ ಗ್ರಾಮಸ್ಥರೇ ದಾಳಿ ಮಾಡಿ ವಶಕ್ಕೆ ಪಡೆದಿದ್ದಾರೆ. ಬಳಿಕ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಅಧಿಕಾರಿಗಳು ಆಟೋ ಮತ್ತು ಸರಕನ್ನು ಜಪ್ತಿ ಮಾಡಿ, ಪಡಿತರವನ್ನು ಪಾಲಹಳ್ಳಿ ನಾಗರೀಕ ಪಡಿತರ ವಿತರಣಾ ಕೇಂದ್ರಕ್ಕೆ ರವಾನಿಸಿದ್ದಾರೆ.

ಈ ವೇಳೆ ಗ್ರಾಮ ಆಡಳಿತಾಧಿಕಾರಿ ವಿ.ಬಿ.ಸಂದೀಪ್ ಕುಮಾರ್, ಪ್ರಸನ್ನ, ಸಂದೇಶ್, ಶೇಖರ್, ಚೈತ್ರಾ, ಸಂದೇಶ ವಿ ಉಪಸ್ಥಿತರಿದ್ದರು.

ಮಕ್ಕಳು ಕನ್ನಡ ಭಾಷೆ ಬಳಕೆ ಕಡಿಮೆ ಮಾಡದಂತೆ ನಿಗಾ ವಹಿಸುವುದು ಪೋಷಕರ ಜವಾಬ್ದಾರಿ

ಶಾಸಕ ಜಿ.ಟಿ.ದೇವೇಗೌಡ ಕಿವಿಮಾತು



ಮೈಸೂರಿನ ವಿಜಯನಗರ ಮೂರನೇ ಹಂತದ ಇ ಮತ್ತು ಡಿ ಬ್ಲಾಕ್ ಉದ್ಯಾನವನದಲ್ಲಿ ವಾಯುವಿಹಾರಿಗಳ ವತಿಯಿಂದ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಮೈಸೂರು, ನ.23– ಮಕ್ಕಳು ಅನ್ಯಭಾಷೆಗಳ ಮೇಲೆ ಅತಿಯಾದ ವ್ಯಾಮೋಹ ಬೆಳೆಸಿಕೊಂಡು ಕನ್ನಡ ಬಳಕೆಯನ್ನು ಕಡಿಮೆ ಮಾಡದಂತೆ ಪೋಷಕರು ನಿಗಾ ವಹಿಸಬೇಕಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಕಿವಿಮಾತು ಹೇಳಿದರು.

ಮೈಸೂರಿನ ವಿಜಯನಗರ ಮೂರನೇ ಹಂತ ಇ ಮತ್ತು ಡಿ ಬ್ಲಾಕ್ ಉದ್ಯಾನವನದಲ್ಲಿ ಭಾನುವಾರ ವಾಯುವಿಹಾರಿಗಳ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡವು ಯಾವ ಭಾಷೆಗೂ ಕಡಿಮೆ ಅಲ್ಲ. ಬಳಸಿದಷ್ಟೂ ಭಾಷೆ ಸಮೃದ್ಧವಾಗುತ್ತದೆ. ಈ ನಿಟ್ಟಿನಲ್ಲಿ ಮಕ್ಕಳು ಅನ್ಯಭಾಷೆಗಳ ವ್ಯಾಮೋಹಕ್ಕೆ ಸಿಲುಕದಂತೆ ಅವರಿಗೆ ಕನ್ನಡದ ಬಗ್ಗೆ ಪ್ರೀತಿ, ಹೆಮ್ಮೆ ಮೂಡಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು.

ಸ್ವಾತಂತ್ರ್ಯದ ನಂತರ ಹರಿದು ಹಂಚಿ ಹೋಗಿದ್ದ ಕರ್ನಾಟಕ 1956ರ ನವೆಂಬರ್ 1ರಂದು ಏಕೀಕರಣವಾಯಿತು. ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕ ರಾಜ್ಯ ಎಂದು ನಾಮಕರಣ ಮಾಡಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ. ವಿಶ್ವೇಶ್ವರಯ್ಯ ಸೇರಿದಂತೆ ಎಲ್ಲಾ ಕ್ಷೇತ್ರದ ಮಹನೀಯರು ನಾಡಿನ ಹಿರಿಮೆ ಹೆಚ್ಚಿಸಿದ್ದಾರೆ. ಆದರೆ ರಾಜ್ಯ ರಾಜಧಾನಿಯಲ್ಲಿ ಅನ್ಯಭಾಷಿಗರ ಪ್ರಾಬಲ್ಯ ಹೆಚ್ಚುವುದರ ಜೊತೆಗೆ ಕನ್ನಡ ಬಳಕೆ ಕಡಿಮೆ ಆಗುತ್ತಿದೆ. ಕನ್ನಡ ಫಲಕಗಳು ಕಡಿಮೆಯಾಗುತ್ತಿವೆ. ಈ ಬಗ್ಗೆ ವಾಟಾಳ್ ನಾಗರಾಜ್, ನಾರಾಯಣಗೌಡ ಇನ್ನಿತರ ಹೋರಾಟಗಾರರು ಚಳವಳಿಯನ್ನೇ ನಡೆಸಬೇಕು. ನಾಡು–ನುಡಿಯ ಹೋರಾಟದಲ್ಲಿ ನಾವೂ ಭಾಗಿಯಾಗುತ್ತೇವೆ ಎಂದು ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲವಾಗಿ ಮೈಸೂರು ಸುಂದರವಾಗಿ ನಿರ್ಮಾಣಗೊಂಡಿದೆ ಹಾಗೆಯೇ ವಿಜಯನಗರ ಮೂರನೇ ಹಂತವೂ ಸುಂದರವಾಗಿದ್ದು, ಹಸಿರಿನಿಂದ ಕೂಡಿದೆ. ನಾವು ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರನ್ನು ಸದಾ ಸ್ಮರಿಸಿಕೊಳ್ಳಬೇಕು. ನಾನು ಸಹಕಾರ ಸಚಿವನಾಗಿದ್ದಾಗ ಅವರನ್ನು ಆಹ್ವಾನಿಸಿ, ಒಂದೇ ದಿನದಲ್ಲಿ ಲಕ್ಷ ಗಿಡಗಳನ್ನು ನೆಡುವ ಕಾರ್ಯಕ್ರಮ ಮಾಡಿದ್ದೆ. ಈ ಬಡಾವಣೆಯ ಹಿರಿಯರಾದ ಮರಿಯಪ್ಪ ಅವರು ಉದ್ಯಾನವನ ನಿರ್ವಹಣೆಗೆ ನಿರಂತರ ಶ್ರಮಿಸಿ, ಹಸಿರು ರಕ್ಷಿಸುವ ಮೂಲಕ ಮಾದರಿಯಾಗಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಮರಿಯಪ್ಪ ಅವರನ್ನು ಪ್ರಶಂಸನಾ ಪತ್ರದೊಂದಿಗೆ ಆತ್ಮೀಯವಾಗಿ ಅಭಿನಂದಿಸಲಾಯಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ವಕೀಲ ಹೆಚ್.ಈ.ಗುರುಸ್ವಾಮಿ, ಕೆ.ಕೃಷ್ಣಯ್ಯ ಮತ್ತಿತರರು ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ನಂತರ ಗುರುಕೃಪ ಸಂಗೀತ ಕಲಾಕ್ಷೇತ್ರ ಹಾಗೂ ಮಾರುತಿ ಕಲಾತಂಡ, ಸರಿಗಮಪ ಹಾಗೂ ಡ್ರಾಮಾ ಜ್ಯೂನಿಯರ್ ತಂಡದವರು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಪ್ರಸ್ತುತಪಡಿಸಿದರು.

ಭಾರತ–ದಕ್ಷಿಣ ಆಫ್ರಿಕಾ 2 ನೇ ಟೆಸ್ಟ್ ಕ್ರಿಕೆಟ್ ಪಂದ್ಯ

ಬೃಹತ್ ಮೊತ್ತ ಕಲೆ ಹಾಕಿದ ದಕ್ಷಿಣ ಆಫ್ರಿಕಾ



ಸೆನುರನ್ ಮುತ್ತುಸಾಮಿ, ಮಾರ್ಕೊ ಏನ್ಸನ್ ಜೊತೆಯಾಟ

ಗುವಾಹಟಿ, ನ.23(ವಿವಿಹೆಚ್)– ಸೆನುರನ್ ಮುತ್ತುಸ್ವಾಮಿ (109 ರನ್, 206 ಎಸೆತ) ಅವರ ಶತಕದಾಟ ಹಾಗೂ ಮಾರ್ಕೊ ಏನ್ಸನ್ (93 ರನ್, 91 ಎಸೆತ) ಅವರ ಶತಕ ವಂಚಿತ ಆಟದ ಬಲದಿಂದ ಅತಿಥೇಯ ಭಾರತ ತಂಡದ ವಿರುದ್ಧ ದಕ್ಷಿಣ ಆಫ್ರಿಕಾ ಬೃಹತ್ ಮೊತ್ತ ದಾಖಲಿಸಿದೆ.

ಇಲ್ಲಿನ ಬಾರ್ಸಪರ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ ವಿರುದ್ಧದ 2ನೇ ಟೆಸ್ಟ್ ಕ್ರಿಕೆಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ದಕ್ಷಿಣ ಆಫ್ರಿಕಾವು ಆಲ್‌ಔಟ್ ಆಗುವ ಮೂಲಕ 489 ರನ್‌ಗಳ ಬೃಹತ್ ಮೊತ್ತ ಕಲೆ ಹಾಕಿದೆ.


ಅಗ್ರಕ್ರಮಾಂಕದ ಎಲ್ಲಾ ಬ್ಯಾಟರ್‌ಗಳು ಸ್ಥಿರ ಪ್ರದರ್ಶನ ನೀಡಿದ್ದರಿಂದ ದಕ್ಷಿಣ ಆಫ್ರಿಕಾ ಬೃಹತ್ ಮೊತ್ತ ಕಲೆಹಾಕಲು ಸಾಧ್ಯವಾಯಿತು. ಮಧ್ಯಮ ಕ್ರಮಾಂಕದ ಸೆನುರನ್ ಮುತ್ತುಸಾಮಿ ಶತಕ ಸಿಡಿಸಿದರೆ, ಬಿರುಸಿನ ಬ್ಯಾಟಿಂಗ್ ಮಾಡಿದ ಮಾರ್ಕೊ ಜಾನ್‌ಸೆನ್ 93 ರನ್ ಸಿಡಿಸಿ ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಿದರು.

ಉಳಿದಂತೆ, ಮಾರ್ಕ್ರಂ(38), ಯಾನ್ ರಿಕಲ್ಟನ್ (35), ಟ್ರಿಸ್ಟನ್ ಸ್ಟಬ್ಸ್(49), ನಾಯಕ ತೆಂಬಾ ಬವುಮಾ(41) ತಂಡಕ್ಕೆ ನೆರವಾದರು.

ಭಾರತದ ಪರ ಕುಲ್ದೀಪ್ ಯಾದವ್ 115 ರನ್ ನೀಡಿ 4 ವಿಕೆಟ್ ಉರುಳಿಸಿದರೆ, ಜಸ್‌ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್, ರವೀಂದ್ರ ಜಡೇಜಾ ತಲಾ 2 ವಿಕೆಟ್ ಪಡೆದರು. ಇತ್ತ ಮೊದಲ ಇನಿಂಗ್ಸ್ ಬ್ಯಾಟಿಂಗ್ ಆರಂಭಿಸಿರುವ ಭಾರತ ತಂಡ ಎರಡನೇ ದಿನದಾಟದಂತ್ಯಕ್ಕೆ ಯಾವುದೇ ವಿಕೆಟ್ ನಷ್ಟವಿಲ್ಲದೆ 9 ರನ್ ಗಳಿಸಿದೆ. 7 ರನ್ ಗಳಿಸಿರುವ ಯಶಸ್ವಿ ಜೈಸ್ವಾಲ್ ಮತ್ತು 2 ರನ್ ಗಳಿಸಿರುವ ಕೆ.ಎಲ್. ರಾಹುಲ್ ಮೂರನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿಗೆ ಭಾರತೀಯ ತಂಡ ಪ್ರಕಟ: ಕನ್ನಡಿಗ ಕೆ.ಎಲ್.ರಾಹುಲ್ ನಾಯಕ

ಪ್ರವಾಸಿ ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಗೆ ಭಾರತ ತಂಡ ಪ್ರಕಟಿಸಲಾಗಿದೆ. ನಾಯಕ ಶುಭಮನ್ ಗಿಲ್ ಮತ್ತು ಉಪನಾಯಕ ಶ್ರೇಯಸ್ ಅಯ್ಯರ್ ಗಾಯಗೊಂಡಿರುವ ಕಾರಣ, ಅವರ ಅನುಪಸ್ಥಿತಿಯಲ್ಲಿ ಕನ್ನಡಿಗ ಕೆಎಲ್ ರಾಹುಲ್ ಅವರು ನಾಯಕರಾಗಿದ್ದಾರೆ. ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಸೌತ್ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನ ಬ್ಯಾಟಿಂಗ್ ವೇಳೆ ಶುಭ್‌ಮನ್ ಗಿಲ್ ಕುತ್ತಿಗೆ ನೋವಿನ ಸಮಸ್ಯೆಗೀಡಾಗಿದ್ದರು. ಹೀಗಾಗಿ ಅರ್ಧದಲ್ಲೇ ಬ್ಯಾಟಿಂಗ್ ನಿಲ್ಲಿಸಿ ಮೈದಾನ ತೊರೆದಿದ್ದರು. ಈ ಹಿನ್ನೆಲೆಯಲ್ಲಿ ಗಿಲ್ ಮತ್ತು ಅಯ್ಯರ್ ಅನುಪಸ್ಥಿತಿಯ ಕಾರಣದಿಂದ ಯಶಸ್ವಿ ಜೈಸ್ವಾಲ್ ಮತ್ತು ತಿಲಕ್ ವರ್ಮಾ ತಂಡದಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ.



ಸ್ಪಿನ್ನರ್ ಕೋಟಾದಲ್ಲಿ ವಾಷಿಂಗ್ಟನ್ ಸುಂದರ್, ರವೀಂದ್ರ ಜಡೇಜಾ, ಕುಲದೀಪ್ ಯಾದವ್ ತಂಡದಲ್ಲಿ ಸ್ಥಾನ ಪಡೆದುಕೊಂಡರೆ, ದಕ್ಷಿಣ ಆಫ್ರಿಕಾ 'ಎ' ವಿರುದ್ಧದ 3 ಪಂದ್ಯಗಳ ಅನಧಿಕೃತ ಏಕದಿನ ಸರಣಿಯಲ್ಲಿ ಭಾರತ 'ಎ' ಪರ ಅತಿ ಹೆಚ್ಚು ರನ್ ಗಳಿಸಿದ ಋತುರಾಜ್ ಗಾಯಕ್ವಾಡ್ ತಂಡಕ್ಕೆ ಮರು ಆಯ್ಕೆಯಾಗಿದ್ದಾರೆ. ಜೊತೆಗೆ ಧ್ರುವ್ ಜುರೇಲ್ ಅವರಿಗೂ ಸ್ಥಾನ ಲಭಿಸಿದೆ.

ದ.ಆಫ್ರಿಕಾ ವಿರುದ್ಧ ಏಕದಿನ ಸರಣಿಗೆ ಭಾರತ ತಂಡ: ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ತಿಲಕ್ ವರ್ಮಾ, ಕೆಎಲ್ ರಾಹುಲ್ (ನಾಯಕ) (ವಿ.ಕೀ), ರಿಷಭ್ ಪಂತ್ (ವಿ.ಕೀ), ವಾಷಿಂಗ್ಟನ್ ಸುಂದರ್, ರವೀಂದ್ರ ಜಡೇಜಾ, ಕುಲದೀಪ್ ಯಾದವ್, ನಿತೀಶ್ ಕುಮಾರ್ ರೆಡ್ಡಿ, ಹರ್ಷಿತ್ ರಾಣಾ, ರುತುರಾಜ್ ಗಾಯಕ್ವಾಡ್, ಪ್ರಸಿದ್ಧ್ ಕೃಷ್ಣ, ಅರ್ಶ್‌ದೀಪ್ ಸಿಂಗ್, ಧ್ರುವ್ ಜುರೆಲ್ (ವಿ.ಕೀ).

ಸಾಹಿತ್ಯ, ಸಂಸ್ಕೃತಿ ಬೆಳೆಸುತ್ತಿರುವ

ಕನ್ನಡ ಸಂಘಗಳ ಬಲವರ್ಧನೆ ಸರ್ಕಾರದ ಜವಾಬ್ದಾರಿ

● ಖ್ಯಾತ ಗಾಯಕ ಡಾ.ಅಪ್ಪಗೆರೆ ತಿಮ್ಮರಾಜು ● 42 ಮಂದಿ ಸಾಧಕರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ

ಮಂಡ್ಯ, ನ.23– ಧಾರವಾಡದ ವಿದ್ಯಾವರ್ಧಕ ಸಂಘ, ಶಿವಮೊಗ್ಗದ ಕರ್ನಾಟಕ ಸಂಘ ನಶಿಸಿ ಹೋಗುವ ಹಂತ ತಲುಪಿವೆ. ಕನ್ನಡ ಸಾಹಿತ್ಯ, ಸಂಸ್ಕೃತಿ ಬೆಳೆಸುತ್ತಿರುವ ಕನ್ನಡ ಸಂಘಗಳನ್ನು ಬಲವರ್ಧನೆಗೊಳಿಸುವುದು ಸಾರ್ವಜನಿಕರು ಹಾಗೂ ಸರ್ಕಾರದ ಜವಾಬ್ದಾರಿ ಎಂದು ಖ್ಯಾತ ಗಾಯಕ ಡಾ. ಅಪ್ಪಗೆರೆ ತಿಮ್ಮರಾಜು ತಿಳಿಸಿದರು.

ಭಾನುವಾರ ನಗರದ ಮಹಿಳಾ ಸರ್ಕಾರಿ ಕಾಲೇಜಿನ ವನರಂಗದಲ್ಲಿ ಕರ್ನಾಟಕ ಸಂಘ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಮಂಡ್ಯದ ಕರ್ನಾಟಕ ಸಂಘ ಪ್ರವರ್ಧಮಾನಕ್ಕೆ ಬೆಳೆದು ನಿಂತು ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಸೇವೆಯಲ್ಲಿ ಅವಿರತವಾಗಿ ತೊಡಗಿಸಿಕೊಂಡಿದೆ. ನಿರಂತರ ಚಟುವಟಿಕೆಗಳಿಂದ ಸದೃಢವಾಗಿ ಬೆಳವಣಿಗೆ ಕಾಣುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹಸಿರು ನಾಡು, ರೈತರ ನಾಡೆಂದು ಮಂಡ್ಯ ಹೆಸರುವಾಸಿಯಾಗಿದೆ. ಜನಪದ ಸಂಸ್ಕೃತಿ ತವರೂರೆನಿಸಿದೆ. ಈ ನೆಲದಲ್ಲಿರುವ ಕರ್ನಾಟಕ ಸಂಘ ನಿರಂತರವಾಗಿ ರಾಜ್ಯೋತ್ಸವ ಪ್ರಶಸ್ತಿಗಳನ್ನು, ತಲಾ 15 ಸಾವಿರ ಹಣ ನೀಡುತ್ತಾ ವರ್ಷದಿಂದ ವರ್ಷಕ್ಕೆ ಪ್ರಶಸ್ತಿ ಪುರಸ್ಕೃತರ ಸಂಖ್ಯೆ ಹೆಚ್ಚಿಸಿಕೊಳ್ಳುತ್ತಿರುವುದು ಅದರ ಹೆಗ್ಗಳಿಕೆಗೆ ಸಾಕ್ಷಿಯಾಗಿದೆ. ಒಂದು ಸಂಘ ಕಟ್ಟಿ ಬೆಳೆಸುವುದು ಸುಲಭದ ಮಾತಲ್ಲ. ಆದರೆ, ಪ್ರೊ.ಬಿ.ಜಯಪ್ರಕಾಶಗೌಡರು ಕರ್ನಾಟಕ ಸಂಘದ ಸಾರಥಿಯಾಗಿರುವಂತೆ ಸಾಂಸ್ಕೃತಿಕ ರಾಯಭಾರಿಯೂ ಆಗಿದ್ದಾರೆ. ಅಲ್ಲದೇ ಕನ್ನಡ, ಕನ್ನಡ ಸಾಹಿತ್ಯದ ಕೆಲಸವೆಂದರೆ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಇಂತಹ ಸಂಘ ಇನ್ನಷ್ಟು ಕ್ರಿಯಾಶೀಲವಾಗಿ ಬೆಳವಣಿಗೆ ಸಾಧಿಸಲಿ ಎಂದು ಆಶಿಸಿದರು.

ಇದೇ ವೇಳೆ ಬೆಟಾಗಿ ನಾನೆದ್ದು ಯಾರ್ಯಾರ ನೆನೆಯಲಿ, ಓ ನನ್ನ ಚೇತನ ಆಗು ನೀ ಅನಿಕೇತನ ಸೇರಿದಂತೆ ಹಲವು ಗೀತೆಗಳನ್ನು ಹಾಡಿ ಪ್ರೇಕ್ಷಕರ ಮನತಣಿಸಿದರು.

ಲಯನ್ಸ್ ಸಂಸ್ಥೆಯ ಕೆ.ದೇವೇಗೌಡ ಮಾತನಾಡಿ, ಜನತಾ ಶಿಕ್ಷಣ ಕಟ್ಟಿದ ಕೆ.ವಿ.ಶಂಕರಗೌಡರು ಅವರ ಕುಟುಂಬಕ್ಕೆ ಸಂಸ್ಥೆಯನ್ನು ಬಿಟ್ಟುಕೊಡಲಿಲ್ಲ, ಅದೇ ರೀತಿ ಹೆಚ್.ಡಿ. ಚೌಡಯ್ಯನವರು ಕೂಡ ಅವರ ಕುಟುಂಬಕ್ಕೆ ಟ್ರಸ್ಟ್ ನೀಡದೆ ಕೆ.ವಿ.ಶಂಕರಗೌಡರ ಮೊಮ್ಮಗನಿಗೆ ಜವಾಬ್ದಾರಿ ಒಪ್ಪಿಸಿದರು. ಇದೇ ಸಂಸ್ಕಾರ. ಕುಟುಂಬದವರ ಏಳಿಗೆ ಬಗ್ಗೆ ಚಿಂತಿಸದೆ ಸಮಾಜದ ಬಗ್ಗೆ ಕಳಕಳಿಯನ್ನಿಟ್ಟುಕೊಂಡು ಕಾರ್ಯನಿರ್ವಹಿಸಿದರೆ ಆ ಸಂಸ್ಥೆ ಯಾವ ರೀತಿ ಬೆಳವಣಿಗೆ ಕಾಣುತ್ತದೆ ಎನ್ನುವುದಕ್ಕೆ ಜನತಾ ಶಿಕ್ಷಣ ಟ್ರಸ್ಟ್, ಕರ್ನಾಟಕ ಸಂಘ ಸಾಕ್ಷಿಯಾಗಿದೆ ಎಂದರು.

ಕೆ.ವಿ.ಶಂಕರಗೌಡರ ಹೆಸರನ್ನು ರಾಜ್ಯ–ರಾಷ್ಟ್ರದಾದ್ಯಂತ ವಿಸ್ತರಿಸುವಂತೆ ಮಾಡುತ್ತಿರುವವರು ಪ್ರೊ.ಬಿ.ಜಯಪ್ರಕಾಶಗೌಡರು ತಮ್ಮ ಪ್ರತಿ ಭಾಷಣದಲ್ಲೂ ಶಂಕರಗೌಡರನ್ನು, ಚೌಡಯ್ಯನವರನ್ನು ನೆನೆಸಿಕೊಳ್ಳುತ್ತಲೇ ಇರುತ್ತಾರೆ. ಆ ಮಹಾನ್ ಚೇತನಗಳು ಹುಟ್ಟಿದ ನಾಡಿನಲ್ಲಿರುವ ಕರ್ನಾಟಕ ಸಂಘ ಇನ್ನೂ ಹೆಚ್ಚು ಪ್ರವರ್ಧಮಾನಕ್ಕೆ ಬೆಳೆಯಬೇಕು. ಅದಕ್ಕೆ ನಾವೆಲ್ಲರೂ ಬೆಂಬಲವಾಗಿ ನಿಲ್ಲಬೇಕಿದೆ ಎಂದರು.

2023ರಿಂದ ಜಿಲ್ಲೆಯ ಹಿರಿಯ ಹಾಗೂ ಕಿರಿಯ ಸಾಧಕರಿಗೆ ಮೀಸಲಾಗಿರಿಸಿ 25 ಜನ ಸಾಧಕರಿಗೆ ಪ್ರಶಸ್ತಿ ನೀಡಲಾಯಿತು. 2ನೇ ವರ್ಷ ಪ್ರಶಸ್ತಿಗಳ ಸಂಖ್ಯೆ 35ಕ್ಕೇರಿತು. ಈ ವರ್ಷ 42ಕ್ಕೇರಿದೆ. ಇದು ಜಿಲ್ಲೆಯ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲು ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಮತ್ತೀಕೆರೆ ಜಯರಾಂ, ಹಿರಿಯ ಶಿಕ್ಷಕ ಚಲುವೇಗೌಡ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ 42 ಜನರಿಗೆ 15 ಸಾವಿರ ರೂ. ಪ್ರಶಸ್ತಿ ಫಲಕ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಪರಿಸರ ಇಂಜಿನಿಯರಿಂಗ್ ಸಂಘದ ಅಧ್ಯಕ್ಷ ಕೆ.ಸಿ.ಜಯರಾಮು, ಮಹಿಳಾ ಸರ್ಕಾರಿ ಕಾಲೇಜು ಪ್ರಾಂಶುಪಾಲ ಪ್ರೊ.ಕೆ.ಗುರುರಾಜಪ್ರಭು ಇತರರಿದ್ದರು.



ಕಾರ್ಯಕ್ರಮದಲ್ಲಿ ಸಾಹಿತಿ ಕಲೀಂ ಉಲ್ಲಾ, ಪತ್ರಕರ್ತ ಮತ್ತೀಕೆರೆ ಜಯರಾಂ, ಶಿಕ್ಷಕ ಚಲುವೇಗೌಡ ಸೇರಿದಂತೆ 42 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿದ್ಯುತ್ ಬೋರ್ಡ್ ಕಳ್ಳತನ



ವಿದ್ಯುತ್ ಬೋರ್ಡ್ ಕಳ್ಳತನವಾಗಿರುವುದು.

ಪಾಂಡವಪುರ, ನ.23– ಬೋರ್‌ವೆಲ್ ಮೋಟರ್‌ನ ವಿದ್ಯುತ್ ಬೋರ್ಡ್ ಕಳ್ಳತನವಾಗಿರುವ ಘಟನೆ ತಾಲೂಕಿನ ಚಿಕ್ಕಮರಳ್ಳಿ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.

ಗ್ರಾಮದ ರೈತ ಶಂಕರೇಗೌಡರ ಜಮೀನಿನಲ್ಲಿ ಕಳ್ಳತನವಾಗಿರುವುದು. ಈತ ಗ್ರಾಮದ ಹೊರವಲಯದಲ್ಲಿರುವ ತಮ್ಮ ಜಮೀನಿನಲ್ಲಿ ಬೋರ್‌ವೆಲ್ ತೆಗೆಸಿ ಮೋಟರ್, ವಿದ್ಯುತ್ ಬೋರ್ಡ್ ಅಳವಡಿಸಿದ್ದರು. ಆದರೆ ಶನಿವಾರ ರಾತ್ರಿ ವಿದ್ಯುತ್ ಬೋರ್ಡ್ ಬಾಕ್ಸ್ ಬೀಗ ಮುರಿದಿರುವ ಕಿಡಿಗೇಡಿಗಳು ವಿದ್ಯುತ್ ಬೋರ್ಡ್ ಕಳವು ಮಾಡಿ ಪರಾರಿಯಾಗಿದ್ದಾರೆ. ಭಾನುವಾರ ಬೆಳಗ್ಗೆ ಶಂಕರೇಗೌಡರು ಜಮೀನಿಗೆ ಹೋದ ವೇಳೆ ಪ್ರಕರಣ ಬೆಳಕಿಗೆ ಬಂದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕ್ರೈಂ ವಿಭಾಗದ ಎಸ್‌ಐ ಧರ್ಮಪಾಲ್ ಅವರ ಸೂಚನೆ ಮೇರೆಗೆ ಸಿಬ್ಬಂದಿ ತೌಸಿಫ್ ಪರಿಶೀಲಿಸಿದರು. ಈ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೋಲು–ಗೆಲುವನ್ನು ಸಮನಾಗಿ ಸ್ವೀಕರಿಸಿ

ತಹಸೀಲ್ದಾರ್ ಚೇತನ್ ಯಾದವ್ ಕರೆ



ಶ್ರೀರಂಗಪಟ್ಟಣದಲ್ಲಿ ತಾಲೂಕು ಮಟ್ಟದ ಬಾಲಕಿಯರ ಕಬಡ್ಡಿ ಪಂದ್ಯಾವಳಿ ನಡೆಯಿತು.

ಶ್ರೀರಂಗಪಟ್ಟಣ, ನ.23– ಕ್ರೀಡಾಪಟುಗಳು ಸೋಲು ಗೆಲುವನ್ನು ಸಮನಾಗಿ ಸ್ವೀಕರಿಸಬೇಕು ಎಂದು ತಹಸೀಲ್ದಾರ್ ಚೇತನ್ ಯಾದವ್ ಕರೆ ನೀಡಿದರು.

ಕನ್ನಡ ರಾಜ್ಯೋತ್ಸವ ಅಂಗವಾಗಿ ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ಕರವೇ ಹೆಚ್.ಶಿವರಾಮೇಗೌಡರ ಬಣ ಹಾಗೂ ಮಹಾವೀರ ಕಣ್ಣಿನ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಾಗೂ ತಾಲೂಕು ಮಟ್ಟದ ಬಾಲಕಿಯರ ಕಬಡ್ಡಿ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡಾಪಟುಗಳಿಗೆ ಒಂದು ನಿರ್ದಿಷ್ಟ ಗುರಿ ಇರಬೇಕು. ಅಲ್ಲದೇ ಪ್ರತಿಯೊಬ್ಬರೂ ಕ್ರೀಡಾ ಮನೋಭಾವ ಹೊಂದಬೇಕು. ಕ್ರೀಡೆಯಲ್ಲಿ ಸೋಲು ಗೆಲುವು ಸಹಜ. ಹೀಗಾಗಿ ಅವುಗಳನ್ನು ಸಮನಾಗಿ ಸ್ವೀಕರಿಸಬೇಕು ಎಂದರು.

ಕಬಡ್ಡಿ ಪಂದ್ಯಾವಳಿಯಲ್ಲಿ ಶ್ರೀರಂಗಪಟ್ಟಣದ ನ್ಯೂ ಆಕ್ಸ್‌ಫರ್ಡ್ ಶಾಲೆ ಪ್ರಥಮ, ನಗುವನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ದ್ವಿತೀಯ, ಶ್ರೀರಂಗಪಟ್ಟಣದ ವಿದ್ಯಾಭಾರತಿ ಶಾಲೆ ತೃತೀಯ, ಸರ್ಕಾರಿ ಬಾಲಕಿಯರ ಶಾಲೆ ನಾಲ್ಕನೇ ಸ್ಥಾನ ಪಡೆದವು. ವಿಜೇತರಿಗೆ ನಗದು ಬಹುಮಾನದೊಂದಿಗೆ ಟ್ರೋಫಿ ವಿತರಿಸಲಾಯಿತು.

ಇದೇ ವೇಳೆ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ 150ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಗಾದರು. ಶಸ್ತ್ರಚಿಕಿತ್ಸೆ ಅಗತ್ಯವಿರುವವರಿಗೆ ಮಹಾವೀರ್ ಕಣ್ಣಿನ ಆಸ್ಪತ್ರೆಗೆ ಭೇಟಿ ನೀಡುವಂತೆ ತಿಳಿಸಲಾಯಿತು.

ಈ ವೇಳೆ ತಾಲೂಕು ಕರವೇ ಅಧ್ಯಕ್ಷ ಶಂಕರ, ಕಸಾಪ ಅಧ್ಯಕ್ಷ ಸಿದ್ದಲಿಂಗು, ಜನತಾ ಪಕ್ಷದ ಅಧ್ಯಕ್ಷ ಭಾಸ್ಕರ್, ಸಿ.ಸ್ವಾಮಿಗೌಡ, ಶಿವರಾಮು, ಭಗವಾನ್ ಮಹಾವೀರ್ ಆಸ್ಪತ್ರೆ ಸಿಬ್ಬಂದಿ ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರು, ಕ್ರೀಡಾಭಿಮಾನಿಗಳು ಉಪಸ್ಥಿತರಿದ್ದರು.

ಕೆರಗೋಡಲ್ಲಿ ಅದ್ದೂರಿ ಗಣೇಶಮೂರ್ತಿ ವಿಸರ್ಜನೆ



ಮಂಡ್ಯ: ತಾಲೂಕಿನ ಕೆರಗೋಡು ಗ್ರಾಮದಲ್ಲಿ ಪಡುವಣ ಬಾಗಿಲು ಆಂಜನೇಯಸ್ವಾಮಿ ಸೇವಾ ಸಮಿತಿಯಿಂದ ಪ್ರತಿಷ್ಠಾಪಿಸಿದ್ದ ಗಣೇಶಮೂರ್ತಿಯನ್ನು ಅದ್ದೂರಿಯಾಗಿ ವಿಸರ್ಜನೆ ಮಾಡುವ ಮೂಲಕ ಕಾಂಗ್ರೆಸ್ ಹಿಂದೂ ಜಪ ಮಾಡಿತು.

ಗ್ರಾಮದ ಯುವಕರು ಗೌರಿ–ಗಣೇಶ ಹಬ್ಬದ ಸಂದರ್ಭ ಪ್ರತಿಷ್ಠಾಪಿಸಲಾಗಿದ್ದ ಗಣೇಶಮೂರ್ತಿಯನ್ನು ಭಾನುವಾರ ಅದ್ದೂರಿಯಾಗಿ ವಿಸರ್ಜನೆ ಮಾಡಲು ನಿರ್ಧರಿಸಿದ್ದರು. ಇದಕ್ಕೆ ಪ್ರೋತ್ಸಾಹ ನೀಡಿದ ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ, ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಜಾನಪದ ಕಲಾತಂಡಗಳೊಂದಿಗೆ ಅದ್ದೂರಿ ಮೆರವಣಿಗೆ ನಡೆಸಲಾಯಿತು.

ನಗರದ ಕಾಳಿಕಾಂಭ ದೇವಸ್ಥಾನದಿಂದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ ಸೇರಿದಂತೆ ಕಾಂಗ್ರೆಸ್ ಮುಖಂಡರು ರೋಡ್ ಶೋ ಮೂಲಕ ಬೃಹತ್ ಬೈಕ್ ರ‍್ಯಾಲಿ ನಡೆಸಿದರು. ವಿಸರ್ಜನೆ ವೇಳೆ ನೂರಾರು ಯುವಕರ ಅದ್ದೂರಿ ಬೈಕ್ ಜಾಥಾ, ರಸ್ತೆ ಯುದ್ದಕ್ಕೂ ತಮಟೆ ಸದ್ದು, ನಂ.1 ಬಿಗ್ ಡ್ಯಾಡಿ ಡಿಜೆ ಸೌಂಡಿಗೆ ಯುವಕರು ಕುಣಿದು ಕುಪ್ಪಳಿಸುತ್ತಿದ್ದ ದೃಶ್ಯ ಕಂಡು ಬಂತು. ಇದರ ಜೊತೆಗೆ ಹನುಮ ಹಾಗೂ ಶಿವನ ಮೂರ್ತಿಗಳ ಮೆರವಣಿಗೆ ಗಮನ ಸೆಳೆಯಿತು. ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾ ಪೊಲೀಸ್ ಇಲಾಖೆ ನೂರಾರು ಪೊಲೀಸರನ್ನು ನಿಯೋಜಿಸುವ ಮೂಲಕ ಎಲ್ಲೆಡೆ ಕಟ್ಟೆಚ್ಚರ ವಹಿಸಿತ್ತು.

ಬಲ್ಲೇನಹಳ್ಳಿ ಸರ್ಕಾರಿ ಶಾಲೆಯಲ್ಲಿ ಪ್ರತಿಭಾ ಕಾರಂಜಿ



ಬಲ್ಲೇನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರತಿಭಾ ಕಾರಂಜಿ ನಡೆಯಿತು.

ಕೆ.ಆರ್.ಪೇಟೆ, ನ.23– ತಾಲೂಕಿನ ಬೂಕನಕೆರೆ ಹೋಬಳಿ ಮಟ್ಟದ ಪ್ರೌಢಶಾಲಾ ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಬಲ್ಲೇನಹಳ್ಳಿ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆಯಿತು.

ಪ್ರತಿಭಾ ಕಾರಂಜಿ ಉದ್ಘಾಟಿಸಿ ಮಾತನಾಡಿದ ತಾಲೂಕು ಶಿಕ್ಷಣ ಸಂಯೋಜಕ ಎಂ.ಎಸ್.ಸುರೇಶ್, ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆ ಹೊರಹೊಮ್ಮಲು ಪ್ರತಿಭಾ ಕಾರಂಜಿ, ಶಾಲಾ ವಾರ್ಷಿಕೋತ್ಸವ ಸಹಕಾರಿಯಾಗಿದೆ. ಸಾರ್ವಜನಿಕವಾಗಿ ಮಾತನಾಡುವುದು ಸುಲಭ. ಅದೇ ವೇದಿಕೆ ಮೇಲೆ ನಿಂತು ಮಾತನಾಡುವುದು ಪ್ರತಿಭೆ. ಸ್ಪರ್ಧೆಯಲ್ಲಿ ಸೋಲು ಗೆಲುವು ಸಾಮಾನ್ಯ. ಭಾಗವಹಿಸುವುದರಿಂದ ಧೈರ್ಯ ಮತ್ತು ಆತ್ಮವಿಶ್ವಾಸ ಬೆಳೆಯುತ್ತದೆ. ವಿದ್ಯಾರ್ಥಿಗಳ ನಡುವೆ ಆರೋಗ್ಯಕರ ಸ್ಪರ್ಧೆ ಪ್ರೋತ್ಸಾಹಿಸುವ ಮೂಲಕ ನಾಯಕತ್ವ ಗುಣಗಳನ್ನು ಬೆಳೆಸಲು ಪ್ರತಿಭಾ ಕಾರಂಜಿ ಮುಖ್ಯ ವೇದಿಕೆಯಾಗಿದೆ ಎಂದರು.

ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಗಾಯನ ಕಲಾ ಪ್ರಕಾರಗಳಾಗಿದ್ದು, ಪ್ರತಿಯೊಬ್ಬರನ್ನೂ ಆಕರ್ಷಿಸುತ್ತವೆ. ಆದರೆ ಕೆಲವರಿಗೆ ಮಾತ್ರ ಪ್ರತಿಭೆ ಮೈಗೂಡುತ್ತದೆ. ಶಾಲಾ ಶಿಕ್ಷಣ ಇಲಾಖೆ ಮಕ್ಕಳಲ್ಲಿ ಅಡಗಿರುವ ಕಲೆ ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಜಾರಿಗೆ ತಂದಿರುವುದು ಉತ್ತಮ ಕಾರ್ಯ ಎಂದರು.

ಕಾರ್ಯಕ್ರಮದಲ್ಲಿ ಬಲ್ಲೇನಹಳ್ಳಿ ಪ್ರೌಢಶಾಲೆ ಮುಖ್ಯಶಿಕ್ಷಕ ಶಿವಣ್ಣ, ಎಸ್‌ಡಿಎಂಸಿ ಅಧ್ಯಕ್ಷ ಮನು, ಆರ್.ಪಿ. ನಂದೀಶ್, ನಾಗೇಂದ್ರ, ಮಹೇಶ್ ಕುಮಾರ್ ಹಾಗೂ ಶಿಕ್ಷಕರು ಪೋಷಕರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ವಿವಿಧ ಶಾಲೆ ವಿದ್ಯಾರ್ಥಿಗಳು ಪ್ರದರ್ಶನ ಮಾಡಿದ ಪ್ರತಿಭಾ ಕಾರ್ಯಕ್ರಮಗಳು ಗಮನ ಸೆಳೆದವು.

ಮೂರನೇ ಪುಟದಿಂದ

ಕೈಚೆಲ್ಲಿದ ಖರ್ಗೆ

ಸರ್ಕಾರ ರಚಿಸಿದ ವೇಳೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆ ಮಾತುಕತೆಗಳು ನಡೆದಿತ್ತು ಎನ್ನಲಾಗಿದೆ. ಅದರಂತೆ ಎರಡೂವರೆ ವರ್ಷದ ನಂತರ ಡಿ.ಕೆ.ಶಿವಕುಮಾರ್ ಅವರಿಗೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡಬೇಕಾಗಿದೆ. ನ.20ಕ್ಕೆ ಎರಡೂವರೆ ವರ್ಷ ಪೂರ್ಣಗೊಂಡಿದ್ದು, ಮುಖ್ಯಮಂತ್ರಿ ಸ್ಥಾನಕ್ಕಾಗಿ ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದು ಕುಳಿತ್ತಿದ್ದಾರೆ. ಅದೇ ವೇಳೆ ಸಿದ್ದರಾಮಯ್ಯ ಅವರು ತಾವೇ ಐದು ವರ್ಷವೂ ಮುಖ್ಯಮಂತ್ರಿ ಎಂದು ಬಹಿರಂಗವಾಗಿಯೇ ಹೇಳುತ್ತಾ, ಸಿಎಂ ಸ್ಥಾನ ಬಿಟ್ಟುಕೊಡದೇ ಹಠ ಹಿಡಿದಿದ್ದಾರೆ ಎಂದು ಕಾಂಗ್ರೆಸ್‌ನ ಉನ್ನತ ಮೂಲಗಳು ತಿಳಿಸಿವೆ.

ಒಪ್ಪಂದದಂತೆ ಅಧಿಕಾರ ಹಂಚಿಕೆಯಾಗಬೇಕು ಎಂಬ ಕಾರಣಕ್ಕಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಳೆದ ಕೆಲವು ದಿನಗಳ ಹಿಂದೆ ದೆಹಲಿಗೆ ತೆರಳಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ, ತಮಗೆ ಸಿಎಂ ಸ್ಥಾನ ನೀಡಬೇಕೆಂದು ಆಗ್ರಹಪೂರ್ವಕವಾಗಿ ಮನವಿ ಮಾಡಿ ಬಂದಿದ್ದರು. ಇದರ ಬೆನ್ನಲ್ಲೇ ಅವರ ಬೆಂಬಲಿಗ ಶಾಸಕರು ದೆಹಲಿ ಯಾತ್ರೆ ಕೈಗೊಂಡು ಖರ್ಗೆ ಅವರನ್ನು ಭೇಟಿ ಮಾಡಿ ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಸ್ಥಾನ ನೀಡಲೇಬೇಕೆಂದು ಒತ್ತಾಯಿಸಿ ಬಂದಿದ್ದಾರೆ.

ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗರು ಸಚಿವ ಜಾರಕಿಹೊಳಿ ಮನೆಯಲ್ಲಿ ಡಿನ್ನರ್ ಮೀಟಿಂಗ್ ಮಾಡುವ ಮೂಲಕ ಡಿ.ಕೆ.ಶಿವಕುಮಾರ್ ಬಣಕ್ಕೆ ತಿರುಗೇಟು ನೀಡುವ ನಿಟ್ಟಿನಲ್ಲಿ ರಾಜಕೀಯ ತಂತ್ರಗಾರಿಕೆ ಹೆಣೆದಿದ್ದಾರೆ.

ಖರ್ಗೆ ಅವರನ್ನು ಶನಿವಾರ ರಾತ್ರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ಮಾಡಿ ಒಂದೂವರೆ ಗಂಟೆ ಕಾಲ ಸುದೀರ್ಘ ಚರ್ಚೆ ನಡೆಸಿದ್ದಾರೆ. ಅಧಿಕಾರ ಹಂಚಿಕೆ ವಿಚಾರವಾಗಿಯೇ ಚರ್ಚೆ ನಡೆದಿದ್ದು, ಸಿಎಂ ಸ್ಥಾನ ಬಿಟ್ಟುಕೊಡಲು ಸಿದ್ದರಾಮಯ್ಯ ಒಪ್ಪಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆಯಾದರೂ, ಖರ್ಗೆ ಭೇಟಿ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಪಕ್ಷ ಸಂಘಟನೆ ಕುರಿತು ಖರ್ಗೆ ಅವರೊಂದಿಗೆ ಚರ್ಚಿಸಿರುವುದಾಗಿಯೂ, ಇದೊಂದು ಸೌಹಾರ್ದ ಭೇಟಿ ಎಂದು ಹೇಳಿಕೆ ನೀಡಿದ್ದರು.

ಇದರ ಬೆನ್ನಲ್ಲೇ ಸಿದ್ದರಾಮಯ್ಯ ಅವರ ಕೆಲ ಆಪ್ತ ಸಚಿವರು ಡಾ. ಹೆಚ್.ಸಿ. ಮಹದೇವ ನೇತೃತ್ವದಲ್ಲಿ ಇಂದು ಬೆಳಗ್ಗೆ ಖರ್ಗೆ ಅವರನ್ನು ಭೇಟಿ ಮಾಡಿ ಅಧಿಕಾರ ಹಂಚಿಕೆ ವಿಚಾರವಾಗಿ ಮಾತನಾಡಿದ್ದಾರೆ ಎನ್ನಲಾಗಿದೆ. ಈ ಸಂದರ್ಭದಲ್ಲಿ ಮತ್ತೊಂದು ತಲೆನೋವು ಕಾಣಿಸಿಕೊಂಡಿದ್ದು, ಸಿದ್ದರಾಮಯ್ಯ ಬೆಂಬಲಿಗರು ಅಧಿಕಾರ ಹಂಚಿಕೆಯಾಗುವುದೇ ಆದರೆ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಪಟ್ಟು ಹಿಡಿದಿದ್ದಾರೆ ಎನ್ನಲಾಗಿದೆ.

ಅದಕ್ಕೆ ಪೂರಕವೆಂಬಂತೆ ಸಚಿವ ಜಾರಕಿಹೊಳಿ ಅವರು ಇಂದು ದಲಿತ ಮುಖ್ಯಮಂತ್ರಿ ವಿಚಾರವನ್ನು ಪ್ರಸ್ತಾಪ ಮಾಡಿದ್ದು, ಪರಿಶಿಷ್ಟರು ಮತ್ತು ಅಲ್ಪಸಂಖ್ಯಾತರು ಕಾಂಗ್ರೆಸ್‌ನ ಪ್ರಮುಖ ಮತದಾರರಾಗಿದ್ದಾರೆ. ಡಾ. ಜಿ.ಪರಮೇಶ್ವರ್ ಎಂಟು ವರ್ಷ ಕಾಲ ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷವನ್ನು ಬಲಪಡಿಸಿದ್ದಾರೆ. ಅವರಿಗೆ ಸಮಾನ ಅವಕಾಶ ನೀಡಬೇಕು ಎಂದು ಹೇಳಿದ್ದಾರೆ. ಈ ಎಲ್ಲಾ ಬೆಳವಣಿಗೆಗಳಿಂದ ಬೇಸರಗೊಂಡಿರುವ ಖರ್ಗೆ, ಅಧಿಕಾರ ಹಂಚಿಕೆ ವಿಚಾರದಲ್ಲಿ ಸಂಪೂರ್ಣವಾಗಿ ಕೈಚೆಲ್ಲಿದ್ದು, ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರತ್ತ ಬೊಟ್ಟು ಮಾಡಿದ್ದಾರೆ.

ಅವಕಾಶ ಸಿಗಬೇಕು

ಸರ್ಕಾರ ರಚನೆ ಮಾಡುವಷ್ಟು ಪಕ್ಷವನ್ನು ಸಿದ್ಧಪಡಿಸಿದವರಲ್ಲಿ ಅವರೂ ಒಬ್ಬರು. ಅವರಿಗೂ ಸಮಾನ ಅವಕಾಶ ಸಿಗಬೇಕು. ಎಂಬುದು ನನ್ನ ಒತ್ತಾಸೆ ಎಂದರು.

ನಾನು ಕೂಡ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಪರಮೇಶ್ವರ್ ಅವರು ಈ ಹಿಂದೆಯೂ ಹೇಳಿದ್ದಾರೆ. ಅದರಲ್ಲಿ ಏನೂ ತಪ್ಪಿಲ್ಲ. ನಾನು ಕೂಡ ಆಕಾಂಕ್ಷಿ ಆಗಿದ್ದೇನೆ. ಕಾಂಗ್ರೆಸ್ ಪಕ್ಷಕ್ಕೆ ಪರಿಶಿಷ್ಟರು, ಅಲ್ಪಸಂಖ್ಯಾತ ಸಮುದಾಯದವರೇ ಮುಖ್ಯ ಮತದಾರರು. ಹಾಗಾಗಿ, ಆ ಸಮುದಾಯಗಳಿಗೆ ಪ್ರಾತಿನಿಧ್ಯ ಸಿಗಬೇಕಿದೆ ಎಂದರು. ಒನ್ ಮ್ಯಾನ್ ಶೋ ವಿಚಾರವನ್ನು ನಾನು ನಂಬುವುದಿಲ್ಲ. ಮುಖ್ಯಮಂತ್ರಿ ಯಾರಾಗಬೇಕು, ಯಾವಾಗ ಆಗಬೇಕು ಎಂದು ಹೈಕಮಾಂಡ್ ನಿರ್ಧರಿಸುತ್ತದೆ. ಎರಡೂವರೆ ವರ್ಷದ ನಂತರ ಅಧಿಕಾರ ಹಸ್ತಾಂತರ ಮಾಡಬೇಕು ಎಂಬ ವಿಚಾರ ನನಗೆ ಗೊತ್ತಿಲ್ಲ. ಅದು ಬೆಂಗಳೂರಿನಲ್ಲಿ ನಡೆದಿದ್ದಲ್ಲ. ಅಂತಹ ಚರ್ಚೆಗಳು ದೆಹಲಿಯಲ್ಲಿ ಮಾತ್ರ ನಡೆಯುತ್ತವೆ. ಸದ್ಯ ಯಾವುದೇ ಚರ್ಚೆಯೂ ನಡೆದಿಲ್ಲ. ಚರ್ಚೆಗೆ ದೆಹಲಿಗೆ ಬನ್ನಿ ಎಂದು ನನ್ನನ್ನು ಕರೆದರೆ ಖಂಡಿತ ಹೋಗುತ್ತೇನೆ ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕೆಲವರಿಗೆ ಅಧಿಕಾರ ಇಂದೇ ಬರಬಹುದು ಅಥವಾ ಇಂದೇ ಹೋಗಬಹುದು. ಮತ್ತೆ ಕೆಲವರಿಗೆ ಒಂದು ವರ್ಷ ಬಿಟ್ಟು ಬರಬಹುದು, ಕೆಲವರಿಗೆ ಹೋಗಲೂ ಬಹುದು. ಇಂಥದ್ದಕ್ಕೆಲ್ಲ ತ್ಯಾಗ ಎಂಬ ಪದ ಸರಿಯಲ್ಲ ಎಂದು ಅವರು ಸೂಚ್ಯವಾಗಿ ಹೇಳಿದರು. ಮಾಜಿ ಸಚಿವ ರಾಜಣ್ಣ ಹೇಳಿದಂತೆ ನವೆಂಬರ್‌ನಲ್ಲಿ ಯಾವುದೇ ಕ್ರಾಂತಿ ಆಗುವುದಿಲ್ಲ. ಯಥಾಸ್ಥಿತಿ ಮುಂದುವರಿಯುತ್ತದೆ. ಈಗಾಗಲೇ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಭೆ ನಡೆಸಿದ್ದಾರೆ. ಶೀಘ್ರ ಒಂದು ಸ್ಪಷ್ಟ ನಿರ್ಧಾರಕ್ಕೆ ಬರಲಿದ್ದಾರೆ' ಎಂದು ಸಚಿವ ಹೇಳಿದರು.

ಸ್ಪಾಗಳು ಆರೋಗ್ಯ ಇಲಾಖೆ ನಿಯಂತ್ರಣಕ್ಕೆ

ಲೇಸರ್ ಚಿಕಿತ್ಸೆಗಳು, ಲಿಪೊಸಕ್ಷನ್, ಕೂದಲು ಕಸಿ, ಐವಿ ಹೈಡ್ರೇಷನ್ ಥೆರಪಿ ಸೇರಿ ಇತರೆ ಸೌಂದರ್ಯವರ್ಧಕ ಚಿಕಿತ್ಸೆಯ ಗುಣಮಟ್ಟದ ಮೇಲೆ ಕಣ್ಗಾವಲಿಡಲು ಕ್ರಮ ಕೈಗೊಳ್ಳಲಾಗಿದೆ. ಅನಧಿಕೃತವಾಗಿ ವೈದ್ಯಕೀಯ ಅಭ್ಯಾಸ ಮಾಡುವ ಮತ್ತು ವೃತ್ತಿಪರರಲ್ಲದವರು ನಡೆಸುತ್ತಿರುವ ಸೌಂದರ್ಯವರ್ಧಕ ಚರ್ಮದ ಕ್ಲಿನಿಕ್‌ಗಳು, ಕೊರಿಯನ್ ಚರ್ಮದ ಆರೈಕೆ ಕೇಂದ್ರಗಳು, ಮಸಾಜ್ ಸೆಂಟರ್‌ಗಳು ಮತ್ತು ಸ್ಪಾಗಳನ್ನು ನಿಯಂತ್ರಿಸಲು ಸಾಧ್ಯವಾಗಲಿದೆ ಎಂದು ಹೇಳಿದ್ದಾರೆ. ಅಲೋಪಥಿ ಅಥವಾ ಆಯುರ್ವೇದದಂತಹ ವೈದ್ಯಕೀಯ ಪದವಿ ಪಡೆದ ವೈದ್ಯರು ತಮ್ಮ ಕ್ಷೇತ್ರಕ್ಕೆ ಸಂಬಂಧವಿಲ್ಲದ ಸೌಂದರ್ಯವರ್ಧಕ ಕ್ಲಿನಿಕ್‌ಗಳನ್ನು ಅನಧಿಕೃತವಾಗಿ ನಡೆಸುವುದನ್ನು ನಿಯಂತ್ರಿಸಲು ಈ ಬಗ್ಗೆ ಆದೇಶ ಹೊರಡಿಸಲಾಗಿದ್ದು, ಈ ಕ್ರಮವು ರಾಜ್ಯದಲ್ಲಿ ಆರೋಗ್ಯ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಪಾರದರ್ಶಕತೆ ತರಲು ಸಹಕಾರಿಯಾಗಲಿದೆ ಎಂದಿದ್ದಾರೆ.

ಕುಮಾರಸ್ವಾಮಿ ನಡುವೆ ತಂದಿಡಬೇಡಿ...'

ಕೇಂದ್ರ ಸಚಿವ ಅಮಿತ್ ಶಾ ಅವರ ಜೊತೆಯಲ್ಲಿ ಡಿ.ಕೆ.ಶಿವಕುಮಾರ್ ಅವರು ಟಚ್‌ನಲ್ಲಿ ಇದ್ದಾರೆ ಎಂದು ಕುಮಾರಸ್ವಾಮಿ ಅವರು ಹೇಳಿದ್ದಾರೆ ಎಂದು ನೀವು (ಮಾಧ್ಯಮದವರು) ಪ್ರಶ್ನೆ ಮಾಡುತ್ತಿದ್ದೀರಿ. ಯಾವ ದಾಖಲೆಯ ಮೇಲೆ ಇದನ್ನು ಹೇಳುತ್ತಿದ್ದೀರಿ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಪ್ರಶ್ನೆ ಮಾಡಿದ್ದಾರೆ. ಈ ರೀತಿಯ ಕೆಲಸ ಮಾಡಿ ನೀವು ನಿಮ್ಮ ಗೌರವ ಕಳೆದುಕೊಳ್ಳಬೇಡಿ. ನಾವು 45 ವರ್ಷಗಳಿಂದ ರಾಜಕೀಯದಲ್ಲಿ ಇದ್ದೇವೆ. ಮುಂದೆ ಈ ರೀತಿ ತಪ್ಪುಗಳನ್ನು ಮಾಡಿದರೆ ನಾನು ಸಹಿಸುವುದಿಲ್ಲ ಎಂದು ಮಾಧ್ಯಮಗಳಲ್ಲಿ ಡಿ.ಕೆ ಶಿವಕುಮಾರ್ ಅವರು ಖಾರವಾಗಿಯೇ ಹೇಳಿದ್ದಾರೆ.

ಲೈಂಗಿಕ ಬಲವರ್ಧನೆಗೆ ಆಯುರ್ವೇದ ಔಷಧಿ ಸೇವಿಸಿ ಕಿಡ್ನಿ, 48 ಲಕ್ಷ ಕಳೆದುಕೊಂಡ ಬೆಂಗಳೂರು ಟೆಕ್ಕಿ

ಸ್ವಯಂ ಘೋಷಿತ ವೈದ್ಯ ವಿಜಯ್ ಗುರೂಜಿ ವಿರುದ್ಧ ಪ್ರಕರಣ ದಾಖಲು

ಬೆಂಗಳೂರು, ನ.23– ಲೈಂಗಿಕ ಸಮಸ್ಯೆಗೆ ಆಯುರ್ವೇಧದ ಮೂಲಕ ಪರಿಹಾರ ನೀಡುವುದಾಗಿ ಹೇಳಿ ಬೆಂಗಳೂರು ಟೆಕ್ಕಿಯಿಂದ 48 ಲಕ್ಷ ರೂಪಾಯಿ ವಂಚಿಸಿರುವ ಸಂಬಂಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ವಯಂ ಘೋಷಿತ ವೈದ್ಯ ಮತ್ತು ಆಯುರ್ವೇದ ಅಂಗಡಿ ಮಾಲೀಕನೊಬ್ಬ ಲೈಂಗಿಕ ಆರೋಗ್ಯ ಚಿಕಿತ್ಸೆಗಾಗಿ ದುಬಾರಿ ಮತ್ತು ಹಾನಿಕಾರಕ ಔಷಧಿಗಳನ್ನು ಮಾರಾಟ ಮಾಡುವ ಮೂಲಕ ಸುಮಾರು 48 ಲಕ್ಷ ರೂಪಾಯಿ ವಂಚಿಸಿದ್ದಾರೆ. ಇದರಿಂದ ನಾನು ನನ್ನ ಕಿಡ್ನಿ ಕಳೆದುಕೊಂಡಿದ್ದೇನೆ ಎಂದು ಬೆಂಗಳೂರಿನ ಸಾಫ್ಟ್ ವೇರ್ ಕಂಪನಿ ಉದ್ಯೋಗಿ ಪೊಲೀಸರಿಗೆ ದೂರು ನೀಡಿದ್ದಾರೆ.

ವಿಜಯಲಕ್ಷ್ಮಿ ಆಯುರ್ವೇದ ಅಂಗಡಿಯ ಮಾಲೀಕ 'ವಿಜಯ್ ಗುರೂಜಿ' ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕ್ಯಾಪ್ ಜೆಮಿನಿ ಖಾಸಗಿ ಸಾಫ್ಟ್ ವೇರ್ ಕಂಪನಿ ಉದ್ಯೋಗಿ ತೇಜಸ್ ಆಗ್ರಹಿಸಿದ್ದಾರೆ. ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್)ನ ಹಲವು ವಿಭಾಗಗಳ ಅಡಿಯಲ್ಲಿ ಗುರೂಜಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದು ತನಿಖೆ ನಡೆಯುತ್ತಿದೆ.

ಸಂತ್ರಸ್ತ ಟೆಕ್ಕಿ 2023ರಲ್ಲಿ ಮದುವೆಯಾದ ನಂತರ ಲೈಂಗಿಕ ಆರೋಗ್ಯ ಸಮಸ್ಯೆ ಎದುರಾಯಿತು. ಕೆಂಗೇರಿಯ ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೇ ತಿಂಗಳ ಆರಂಭದಲ್ಲಿ ಅವರು 'ಲೈಂಗಿಕ ಸಮಸ್ಯೆಗಳಿಗೆ ತ್ವರಿತ ಪರಿಹಾರಗಳು' ಎಂಬ ಜಾಹೀರಾತು ನೋಡಿ ವಿಜಯ್ ಗುರೂಜಿ ಎಂಬ ಸ್ವಯಂಘೋಷಿತ ವೈದ್ಯ ನಿರ್ದೇಶಿಸಿದ ವ್ಯಕ್ತಿಯನ್ನು ಭೇಟಿಯಾದರು. ಪರೀಕ್ಷಿಸಿದ ನಂತರ ಟೆಕ್ಕಿಗೆ ದೇವ ರಾಜ್ ಬೂಟಿ ಎಂಬ ಆಯುರ್ವೇದ ಔಷಧವನ್ನು ಶಿಫಾರಸು ಮಾಡಲಾಯಿತು. ಅದು ಅವರ ಅಂಗಡಿಯಲ್ಲಿ ಮಾತ್ರ ಲಭ್ಯವಿದ್ದು ಪ್ರತಿ ಗ್ರಾಂಗೆ 1,60,000 ರೂಪಾಯಿ ಬೆಲೆಯಿದೆ ಎಂದು ಹೇಳಿಕೊಂಡರು.

ಆನ್‌ಲೈನ್ ವಹಿವಾಟುಗಳನ್ನು ತಪ್ಪಿಸಿ ನಗದು ರೂಪದಲ್ಲಿ ಹಣ ಪಾವತಿಸಲು ಸಂತ್ರಸ್ತನಿಗೆ ಸೂಚಿಸಲಾಯಿತು. ಇದನ್ನು ನಂಬಿ, ಸಂತ್ರಸ್ತ ಔಷಧಿಯನ್ನು ಖರೀದಿಸಿದರು. ನಂತರ ಪ್ರತಿ ಗ್ರಾಂಗೆ 76,000 ಬೆಲೆಯ ಮತ್ತೊಂದು ಉತ್ಪನ್ನವಾದ ಭವನ್ ಬೂಟಿ ಎಣ್ಣೆಯನ್ನು ನೀಡಲಾಯಿತು. ಮುಂದಿನ ವಾರಗಳಲ್ಲಿ ಗುರೂಜಿ ನಿರ್ದೇಶಿಸಿದಂತೆ ಅವರು ವಿವಿಧ ಔಷಧಿಗಳಿಗಾಗಿ 17 ಲಕ್ಷ ಖರ್ಚು ಮಾಡಿದರು. ನಂತರ ಗುರೂಜಿ ಹೆಚ್ಚಿನ ಪ್ರಮಾಣದ ದೇವರಾಜ್ ಬೂಟಿಯನ್ನು ಖರೀದಿಸಬೇಕು. ಇಲ್ಲದಿದ್ದರೆ ಚಿಕಿತ್ಸೆಯು ಕೆಲಸ ಮಾಡುವುದಿಲ್ಲ ಎಂದು ಎಚ್ಚರಿಸಿದರು. ಹೀಗಾಗಿ ಸಂತ್ರಸ್ತ ಟೆಕ್ಕಿ 18 ಗ್ರಾಂ ಔಷಧಿಯನ್ನು ಖರೀದಿಸಲು ಬ್ಯಾಂಕಿನಿಂದ 20 ಲಕ್ಷ ಸಾಲವನ್ನೂ ಪಡೆದರು.

ಹೆಚ್ಚುವರಿಯಾಗಿ ಸ್ನೇಹಿತನಿಂದ 10 ಲಕ್ಷ ಸಾಲ ಪಡೆದು, ಪ್ರತಿ ಗ್ರಾಂಗೆ 2,60,000 ಬೆಲೆಯ ದೇವರಾಜ್ ರಸಬೂಟಿ ಎಂಬ ಮತ್ತೊಂದು ಉತ್ಪನ್ನವನ್ನು ಖರೀದಿಸಲು ಅವರನ್ನು ಮನವೊಲಿಸಲಾಯಿತು. ಒಟ್ಟಾರೆಯಾಗಿ, ಅವರು ಆಯುರ್ವೇದ ಅಂಗಡಿಯಲ್ಲಿ ಸುಮಾರು 48 ಲಕ್ಷ ಖರ್ಚು ಮಾಡಿದ್ದಾರೆ ಎಂದು ದೂರಿನಲ್ಲಿ ಹೇಳಿಕೊಂಡಿದ್ದಾರೆ. ಸೂಚಿಸಿದಂತೆ ಚಿಕಿತ್ಸೆಯನ್ನು ನಿಖರವಾಗಿ ಅನುಸರಿಸಿದರೂ ಸಂತ್ರಸ್ತನಿಗೆ ಯಾವುದೇ ಸುಧಾರಣೆ ಕಂಡುಬಂದಿಲ್ಲ. ಅಂತಿಮವಾಗಿ ಈ ಆಯುರ್ವೇದ ಔಷಧಿಗಳಿಂದ ಕಿಡ್ನಿ ಹಾನಿಯಾಗಿದೆ ಎಂದು ಟೆಕ್ಕಿ ಆರೋಪಿಸಿದ್ದಾರೆ.

ನಾಲ್ವರು ಬಿಪಿಒ ಉದ್ಯೋಗಿಗಳ ಅಪಹರಣ, 8.90 ಲಕ್ಷ ರೂ. ಸುಲಿಗೆ

ಪೊಲೀಸ್ ಪೇದೆ ಸೇರಿ ಎಂಟು ಮಂದಿ ಬಂಧನ

ಬೆಂಗಳೂರು, ನ.23– ಪೊಲೀಸ್ ಅಧಿಕಾರಿಗಳೆಂದು ಹೇಳಿಕೊಂಡು ಅಪಹರಿಸಿದ್ದ ನಗರದ ಬಿಪಿಒ ಸಂಸ್ಥೆಯ ಮ್ಯಾನೇಜರ್ ಮಟ್ಟದ ನಾಲ್ವರು ಉದ್ಯೋಗಿಗಳನ್ನು ಪೊಲೀಸರು ರಕ್ಷಿಸಿದ್ದು, ಘಟನೆಗೆ ಸಂಬಂಧಿಸಿದ ಪೊಲೀಸ್ ಪೇದೆ ಸೇರಿ ಎಂಟು ಜನರ ತಂಡವನ್ನು ಬಂಧಿಸಿದ್ದಾರೆ.

ಆರೋಪಿಗಳು ಸಂಸ್ಥೆಯ ಕಾರ್ಯಾಚರಣಾ ವ್ಯವಸ್ಥಾಪಕರಿಂದ 8.90 ಲಕ್ಷ ರೂ. ಸುಲಿಗೆ ಮಾಡಿದ್ದರು ಮತ್ತು ಹೆಚ್ಚಿನ ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಶುಕ್ರವಾರ ಮಧ್ಯ ರಾತ್ರಿ ಈ ಘಟನೆ ನಡೆದಿದ್ದು, ಹೆಚ್ಚಿನ ಆರೋಪಿಗಳು ಕೋಲಾರದವರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಬಂಧಿತರಲ್ಲಿ ಒಬ್ಬರು ಕೋಲಾರದಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಎಂದು ಹೇಳಲಾಗುತ್ತಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ.

ವಿವರ: ಶುಕ್ರವಾರ ಮಧ್ಯರಾತ್ರಿ 1 ಗಂಟೆಗೆ ಸೈಬರ್ ಅಪರಾಧ ತಪಾಸಣೆ ನಡೆಸುತ್ತಿರುವ ಪೊಲೀಸ್ ಸಿಬ್ಬಂದಿ ಎಂದು ಹೇಳಿಕೊಂಡು ಎಂಟು ಜನರ ತಂಡ ಕೋರಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಬಿಪಿಒವೊಂದರಲ್ಲಿ ಕೆಲಸ ಮಾಡುತ್ತಿದ್ದ ನಾಲ್ವರು ಮ್ಯಾನೇಜರ್ ಮಟ್ಟದ ಉದ್ಯೋಗಿಗಳನ್ನು ವಿಚಾರಣೆಯ ನೆಪದಲ್ಲಿ ಕರೆದುಕೊಂಡು ಹೋಗಿ ಅಪಹರಿಸಿ, ಅವರನ್ನು ಕೋಲಾರ ಜಿಲ್ಲೆಯ ಮಾಲೂರಿನ ಒಂದು ಸ್ಥಳದಲ್ಲಿ ಒತ್ತೆಯಾಳುಗಳಾಗಿ ಇರಿಸಲಾಗಿತ್ತು. ಎಂದು ಡಿಸಿಪಿ (ಆಗ್ನೇಯ) ಸಾರಾ ಫಾತಿಮಾ ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ನಂತರ ಸಂಸ್ಥೆಯ ಕಾರ್ಯಾಚರಣೆ ವ್ಯವಸ್ಥಾಪಕರಿಂದ ಆರೋಪಿಗಳಿಗೆ ಸಂಬಂಧಿಸಿದ ನಾಲ್ಕು ಬ್ಯಾಂಕ್ ಖಾತೆಗಳಿಗೆ ಆನ್‌ಲೈನ್‌ನಲ್ಲಿ 8.90 ಲಕ್ಷ ರೂ.ಗಳನ್ನು ವರ್ಗಾಯಿಸುವಂತೆ ಒತ್ತಾಯಿಸಿದ್ದಾರೆ. ಅಲ್ಲದೆ ನಗದು ರೂಪ ದಲ್ಲಿಯೂ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಅವರು ಹೇಳಿದರು. ಶನಿವಾರ ಬೆಳಗ್ಗೆ 4.30ಕ್ಕೆ ಪೊಲೀಸರು ದೂರು ಸ್ವೀಕರಿಸಿದ್ದು, ಪ್ರಕರಣವನ್ನು ಪತ್ತೆಹಚ್ಚಲು ನಾಲ್ಕು ತಂಡಗಳನ್ನು ರಚಿಸಲಾಗಿತ್ತು. ಈ ಸಂಬಂಧ ಎಂಟು ಆರೋಪಿಗಳನ್ನು ಬಂಧಿಸಲಾಗಿದ್ದು, ಅಪಹರಣಕ್ಕೆ ಬಳಸಿದ್ದ ಎರಡು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಡಿಸಿಪಿ ತಿಳಿಸಿದ್ದಾರೆ.

ಮೈಸೂರಲ್ಲಿ ಪ್ರಿಯಾಂಕ್ ಖರ್ಗೆ ಹುಟ್ಟುಹಬ್ಬ ಆಚರಣೆ

ಮೈಸೂರು, ನ.23– ಸಚಿವ ಪ್ರಿಯಾಂಕ್ ಖರ್ಗೆ ಅವರ 47ನೇ ಹುಟ್ಟುಹಬ್ಬವನ್ನು ಡಾ.ಮಲ್ಲಿಕಾರ್ಜುನ ಖರ್ಗೆ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷರೂ ಆದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನರೇಂದ್ರ ಅವರ ನೇತೃತ್ವದಲ್ಲಿ ಮೈಸೂರಿನ ತಿಲಕ್ ನಗರದ ಮಕ್ಕಳ ಶಾಲೆಯಲ್ಲಿ ಬೆಳಗಿನ ಉಪಹಾರ ನೀಡುವ ಮೂಲಕ ಹಾಗೂ ಮೈಸೂರಿನ ಕೆ.ಆರ್.ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಿನಕಲ್ ಮಂಜು, ಪ.ಪಂ ಜಿಲ್ಲಾಧ್ಯಕ್ಷ ಮಹೇಶ್, ಕೆಪಿಸಿಸಿ ಸಂಯೋಜಕ ವಿಜಯ್, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ಸಂತೋಷ್ ಚಿಕ್ಕನಹಳ್ಳಿ, ಐಎನ್‌ಟಿಯುಸಿ ಉಪಾಧ್ಯಕ್ಷ ನಾಗರಾಜು, ಪೈಲ್ವಾನ್ ಕೃಷ್ಣಪ್ಪ, ಯುವ ಕಾಂಗ್ರೆಸ್ ಉಪಾಧ್ಯಕ್ಷ ಧನಗಳ್ಳಿ ಪ್ರವೀಣ್, ಇಲವಾಲ ಹೋಬಳಿ ಡಾ. ಬಿ.ಆರ್. ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಮಿತಿಯ ಗೌರವ ಅಧ್ಯಕ್ಷ ಬಿ.ಕೆ.ಈಶ್ವರ್, ಅಧ್ಯಕ್ಷ ಚೆಲುವರಾಜು, ಕಾರ್ಯಾಧ್ಯಕ್ಷ ಸಂತೋಷ, ಉಪಾಧ್ಯಕ್ಷ ಸೋಮ ಶೇಖರ್, ಬಿಡಿಎಂ ಕುಮಾರ್, ಕಾರ್ಯದರ್ಶಿ ಶಿವಕುಮಾರ್, ಖಜಾಂಚಿ ಮೊಗಣ್ಣ, ನಿರ್ದೇಶಕರಾದ ಚೆಲುವರಾಜು, ಮಂಜಣ್ಣ, ಸೋಮಶೇಖರ್, ಲೋಕೇಶ, ನಾಗವಾಲ ಗ್ರಾ.ಪ ಸದಸ್ಯರಾದ ಮಂಜು, ಪಾಪಯ್ಯ, ಪ್ರಿಯಾಂಕ್ ಖರ್ಗೆ ಅನುಯಾಯಿಗಳು ಉಪಸ್ಥಿತರಿದ್ದರು.



ಪ್ರಿಯಾಂಕ್ ಖರ್ಗೆ ಹುಟ್ಟುಹಬ್ಬದ ಅಂಗವಾಗಿ ಕೆ.ಆರ್.ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ಮೈಸೂರು ಮಿತ್ರ ಸೋಮವಾರ 24 ನವೆಂಬರ್ 2025

ಇಂದಿನ ದಿನಗಳಲ್ಲಿ ಸಾಹಿತ್ಯ ಕಾರ್ಯಕ್ರಮಗಳು ಕಡಿಮೆಯಾಗುತ್ತಿವೆ

ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ ವಿಷಾದ



ಮೈಸೂರಿನ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಭವನದಲ್ಲಿ ನಡೆದ ಮೈಸೂರು ಸಾಹಿತ್ಯ ದಾಸೋಹದ ದಶಮಾನೋತ್ಸವ ಸಂಭ್ರಮದಲ್ಲಿ ಥಟ್ ಅಂತ ಹೇಳಿ ಖ್ಯಾತಿಯ ಡಾ.ನಾ.ಸೋಮೇಶ್ವರ ಕೈಗನ್ನಡಿ ದಶಮಾನೋತ್ಸವ ಸವಿ ಸಂಚಿಕೆ ಬಿಡುಗಡೆಗೊಳಿಸಿದರು.

ಮೈಸೂರು, ನ.23(ಜಿಎ)– ಇಂದಿನ ದಿನಗಳಲ್ಲಿ ಸಾಹಿತ್ಯ ಕಾರ್ಯಕ್ರಮಗಳು ಕಡಿಮೆಯಾಗುತ್ತಿವೆ. ಓದುವವರು ಕಡಿಮೆಯಾಗುತ್ತಿದ್ದಾರೆ. ಪರಸ್ಪರ ನಂಬಿಕೆ ಕಡಿಮೆಯಾಗಿದೆ ಎಂದು ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ ವಿಷಾದಿಸಿದರು.

ಮೈಸೂರಿನ ಕುವೆಂಪುನಗರದಲ್ಲಿನ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಭವನದಲ್ಲಿ ಮೈಸೂರು ಸಾಹಿತ್ಯ ದಾಸೋಹದ ದಶಮಾನೋತ್ಸವ ಸಂಭ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾಮಾಜಿಕ ಮೌಲ್ಯ ಕಾಪಾಡುವ ಮೂಲಕ ಉತ್ತಮ ಸಮಾಜ ನಿರ್ಮಿಸಬೇಕು. ಜೊತೆಗೆ ಮಾನವೀಯ, ಮನುಷ್ಯತ್ವ ಸಂಬಂಧಗಳನ್ನು ಗಟ್ಟಿಗೊಳಿಸಬೇಕಿದೆ. ಕೆಲವರಿಗೆ ಆಸ್ತಿ, ಹಣ ಮಾಡುವ ಹುಚ್ಚು. ಇನ್ನೂ ಕೆಲವರಿಗೆ ಬೇರೆ ಬೇರೆ ಹುಚ್ಚು ಇದೆ. ಎಲ್ಲದಕ್ಕಿಂತ ಸಾಹಿತ್ಯದ ಹುಚ್ಚು ಒಳ್ಳೆಯದು. ಹಾಗಾಗಿ, ಮೈಸೂರು ಸಾಹಿತ್ಯ ದಾಸೋಹ ಸಂಸ್ಥೆ ಹತ್ತು ವರ್ಷಗಳಿಂದ ಒಳ್ಳೆಯ ಕೆಲಸ ಮಾಡುತ್ತಿದೆ ಎಂದು ಹೇಳಿದರು.


ಹಿಂದಿನಿಂದಲೂ ಕನ್ನಡ ಸಾಹಿತ್ಯ ಪರಿಷತ್ ಮಾತ್ರವಲ್ಲದೆ, ಮೈಸೂರಿನಲ್ಲಿ ಅನೇಕ ಸಂಘಟನೆಗಳು ಸಾಹಿತ್ಯ ಕೆಲಸ ಮಾಡುತ್ತಿವೆ. ಈ ಪೈಕಿ ಕೆಲವು ಇತ್ತೀಚೆಗೆ ಮಂಕಾಗಿವೆ. ಆದರೆ, ಮೈಸೂರು ಸಾಹಿತ್ಯ ದಾಸೋಹ ಸೇರಿ ಕೆಲ ಸಂಸ್ಥೆಗಳು ಜೀವಂತಿಕೆಯನ್ನು ಮೈಗೂಡಿಸಿಕೊಂಡು ಕೆಲಸ ಮಾಡುತ್ತಿವೆ ಎಂದು ತಿಳಿಸಿದರು.

ಇಂದು ಎಲ್ಲರೂ ಅಕ್ಕ ಪಕ್ಕದವರ ಪರಿಚಯವೇ ಇಲ್ಲದೇ ಕೃತಕ ಬದುಕು ನಡೆಸುತ್ತಿದ್ದೇವೆ. ಇತ್ತೀಚೆಗೆ ನಮ್ಮ ರಸ್ತೆಯ ಕಡೆ ಮನೆಯಲ್ಲಿ ಒಬ್ಬರು ತೀರಿಕೊಂಡಿದ್ದರು. ಶವದ ಬಳಿ ಯಾರೂ ಇರಲಿಲ್ಲ. ಇಂತಹ ಸಮಾಜದ ನಡುವೆ ಬದುಕುತ್ತಿರುವುದು ನಮ್ಮ ದೌರ್ಭಾಗ್ಯ ಎಂದು ಬೇಸರ ವ್ಯಕ್ತಪಡಿಸಿದ ಅವರು, ನಾವು ಏಕೆ ಓದುತ್ತಿದ್ದೇವೆ? ಏಕೆ ಸಂಪಾದನೆ ಮಾಡುತ್ತಿದ್ದೇವೆ, ಎಲ್ಲಿಗೆ ಹೋಗಿ ನಿಲ್ಲುತ್ತಿದ್ದೇವೆ? ಎಂಬ ಪ್ರಶ್ನೆಗಳಿಗೆ ಉತ್ತರ ಇಲ್ಲವಾಗಿದೆ. ನಮ್ಮ ಬಾಲ್ಯದಲ್ಲಿ ಯಾರಿಗಾದರೂ ಅನಾರೋಗ್ಯ ಸರಿ ಇಲ್ಲ ಎಂದರೆ ಎಲ್ಲರೂ ವಿಚಾರಿಸುತ್ತಿದ್ದೆವು. ಆಸ್ಪತ್ರೆಗೆ ಕರೆದೋಗುತ್ತಿದ್ದೆವು. ಸಾವು ಎನ್ನುವುದು ಒಂದು ದುಃಖದ ಸಂಗತಿಯಾಗಿತ್ತು. ಆದರೆ, ಇಂದು ಒಬ್ಬರಿಗೊಬ್ಬರಿಗೆ ಸಂಬಂಧವೇ ಇಲ್ಲವಾಗಿದೆ. ಇಂತಹ ಸಮಯದಲ್ಲಿ ಇಂತಹ ಕಾರ್ಯಕ್ರಮ ಹೆಚ್ಚು ನಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಥಟ್ ಅಂತ ಹೇಳಿ ಖ್ಯಾತಿಯ ಡಾ.ನಾ.ಸೋಮೇಶ್ವರ ಕೈಗನ್ನಡಿ ದಶಮಾನೋತ್ಸವ ಸವಿ ಸಂಚಿಕೆ ಬಿಡುಗಡೆ ಮಾಡಿದರು. ಮೈಸೂರು ಸಾಹಿತ್ಯ ದಾಸೋಹ ಸಂಸ್ಥಾಪಕ ಎಂ.ಆರ್.ಆನಂದ್, ಕನ್ನಡವೇ ಸತ್ಯ ವೇದಿಕೆಯ ಸಂಚಾಲಕ ಬೆಂ.ಶ್ರೀ.ರವೀಂದ್ರ, ಲೇಖಕಿ ಪದ್ಮಾ ಆನಂದ್ ಉಪಸ್ಥಿತರಿದ್ದರು.

ಕಷ್ಟದಲ್ಲಿರುವವರಿಗೆ ದಾನ ಮಾಡುವುದೇ ಧರ್ಮ ಅನುಸರಿಸಲು ಸುಲಭ ಮಾರ್ಗ

ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವದಲ್ಲಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅಭಿಮತ



ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವದಲ್ಲಿ ಭಾನುವಾರ ಸಂತ ಸಮಾಗಮ ಕಾರ್ಯಕ್ರಮ ನಡೆಯಿತು. (ಎಡದಿಂದ) ಅವಧೂತ ದತ್ತ ಪೀಠದ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ, ಅರುಣಾಚಲ ಪ್ರದೇಶದ ರಾಮಕೃಷ್ಣ ಮಿಷನ್‌ನ ಸ್ವಾಮಿ ಅಚ್ಯುತೇಶಾನಂದಜಿ, ರಾಮಕೃಷ್ಣ ಮಿಷನ್ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಮಹಾರಾಜ್, ಉತ್ತರ ಪ್ರದೇಶ ಬೃಂದಾವನದ ಉದಾಸೀನ್ ಕಾರ್ಷ್ಣಿ ಆಶ್ರಮದ ಪೀಠಾಧೀಶರಾದ ಸ್ವಾಮಿ ಗುರುಶರಣಾನಂದಜಿ ಮಹಾರಾಜ್, ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಉಪಸ್ಥಿತರಿದ್ದರು.

ಮೈಸೂರು,ನ.23(ಎಂಕೆ)– ಧರ್ಮವನ್ನು ಅನುಸರಿಸುವ ಸುಲಭ ಮಾರ್ಗವೆಂದರೆ ಕಷ್ಟದಲ್ಲಿರುವವರಿಗೆ ಅಗತ್ಯವಾದದ್ದನ್ನು ದಾನ ಮಾಡುವುದಾಗಿದ್ದು, ಮನುಷ್ಯನ ಸೇವೆಯಲ್ಲಿಯೇ ಧರ್ಮ ಮತ್ತು ಭಕ್ತಿ ಅಡಗಿದೆ ಎಂದು ಅವಧೂತ ದತ್ತ ಪೀಠದ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ ಹೇಳಿದರು.

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾನುವಾರ ನಡೆದ ಸಂತ ಸಮಾಗಮ ವೇದಿಕೆಯಲ್ಲಿ 'ಮಾನವನ ದೈವೀಕರಣವೇ ಧರ್ಮದ ಉದ್ದೇಶ ಮತ್ತು ಶಕ್ತಿ' ಕುರಿತು ಮಾತನಾಡಿದ ಶ್ರೀಗಳು, ಧರ್ಮ ಕಾರ್ಯಗಳನ್ನು ಮಾಡುವ ಮೂಲಕ ಮನುಷ್ಯ ರಥವನ್ನು ಹತ್ತಿರುವ ನಾವೆಲ್ಲರೂ ದೈವ ರಥವನ್ನು ಹತ್ತಬೇಕಿದೆ ಎಂದು ತಿಳಿಸಿದರು.

ಧರ್ಮವು ಬಹಳ ಸೂಕ್ಷ್ಮ ಹಾಗೂ ನಿಗೂಢ. ಅದನ್ನು ಅರ್ಥ ಮಾಡಿಕೊಳ್ಳುವುದೇ ನಮ್ಮ ಸಾಧನೆಯಾಗಿದ್ದು, ಧರ್ಮದಲ್ಲಿ ಎಲ್ಲವೂ ಪ್ರತಿಷ್ಠಾಪನೆಯಾಗಿದೆ. ಧರ್ಮದಲ್ಲಿ ವ್ಯಕ್ತಿಯ ಬೆಳವಣಿಗೆ ಹಾಗೂ ಸಮಷ್ಟಿಯ ಅಭಿವೃದ್ಧಿ ಅಗತ್ಯ ಎಂದರು.

ಉತ್ತರ ಪ್ರದೇಶ ಬೃಂದಾವನದ ಉದಾಸೀನ್ ಕಾರ್ಷ್ಣಿ ಆಶ್ರಮದ ಪೀಠಾಧೀಶರಾದ ಸ್ವಾಮಿ ಗುರುಶರಣಾನಂದಜಿ ಮಹಾರಾಜ್ ಮಾತನಾಡಿ, ಭಕ್ತಿಯ ಹೊರತಾಗಿ ಜ್ಞಾನ ಪ್ರಾಪ್ತಿಯಾಗುವುದಿಲ್ಲ. ಮನುಷ್ಯ ಮತ್ತು ಭಗವಂತನ ಸಂಬಂಧ ತಾಯಿ–ಮಗುವಿನ ಸಂಬಂಧ ದಂತಿರಬೇಕು. ಮೋಕ್ಷ ಪಡೆಯಲು ಯಾವುದೋ ಹೊಸ ಮಾರ್ಗ ಕಂಡುಕೊಳ್ಳಲು ಒದ್ದಾಡಬೇಡಿ. ತಾಯಿ–ಮಗುವಿನ ಸಂಬಂಧವನ್ನೇ ದೇವರೆಡೆಗೆ ಪರಿವರ್ತಿಸಿ. ಆ ಪ್ರೀತಿಯೇ ಧರ್ಮ, ಭಕ್ತಿಯಾಗಿದೆ ಎಂದರು. ನಂತರ ಅರುಣಾಚಲ ಪ್ರದೇಶದ ರಾಮಕೃಷ್ಣ ಮಿಷನ್‌ನ ಸ್ವಾಮಿ ಅಚ್ಯುತೇಶಾನಂದಜಿ ಮಾತನಾಡಿದರು. ರಾಮಕೃಷ್ಣ ಮಿಷನ್ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಮಹಾರಾಜ್ ಸಾನ್ನಿಧ್ಯ ವಹಿಸಿದ್ದರು. ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಉಪಸ್ಥಿತರಿದ್ದರು.

> “ಸಮಾಜದಲ್ಲಿ ಧರ್ಮವು ಕಳೆಗುಂದುತ್ತದೆಯೋ ಆಗೆಲ್ಲಾ ಮಹಾನ್ ಚೇತನಗಳು ಅವತರಿಸಿ ಮನುಕುಲದ ಸೇವೆಯ ಮೂಲಕ ಧರ್ಮವನ್ನು ಜಾಗೃತಗೊಳಿಸಿದ್ದಾರೆ. ಅಂತಹ ಚೇತನಗಳಲ್ಲಿ ಒಬ್ಬರಾದ ರಾಮಕೃಷ್ಣ ಪರಮಹಂಸರು ಮಹಾನ್ ಸಂತರಾಗಿದ್ದಾರೆ.
> –ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ, ಅವಧೂತ ದತ್ತ ಪೀಠ

ನ.26ರಂದು ಸಿದ್ದಲಿಂಗಪುರದಲ್ಲಿ

ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿ ಷಷ್ಠಿ ಜಾತ್ರೆ



ಮೈಸೂರು,ನ.23(ಎಂಟಿವೈ)–ಮೈಸೂರು ತಾಲೂಕಿನ ಸಿದ್ದಲಿಂಗಪುರದಲ್ಲಿರುವ ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಾಲಯದ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ಷಷ್ಠಿ ಜಾತ್ರಾ ಮಹೋತ್ಸವ ನ.26ರಂದು ಜರುಗಲಿದ್ದು, ಮುಂಜಾನೆ 4 ಗಂಟೆಯಿಂದ ರಾತ್ರಿ 10 ಗಂಟೆವರೆಗೆ ಅಪಾರ ಸಂಖ್ಯೆಯ ಭಕ್ತರು ದೇವಾಲಯಕ್ಕೆ ಆಗಮಿಸಿ ದರ್ಶನ ಪಡೆಯಲಿದ್ದಾರೆ.

ಮೈಸೂರು–ಬೆಂಗಳೂರು ಮುಖ್ಯ ರಸ್ತೆಗೆ ಹೊಂದಿಕೊಂಡಂತಿರುವ ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದಲ್ಲಿ ನ.26ರಂದು ಮುಂಜಾನೆ 1.30ರಿಂದಲೇ ಅರ್ಚಕ ಎಂ.ವಿ.ಸುಬ್ರಹ್ಮಣ್ಯ ನೇತೃತ್ವದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಜರುಗಲಿವೆ. ಶ್ರೀ ಷಷ್ಠಿ ಸುಬ್ರಹ್ಮಣ್ಯೇಶ್ವರ ಸ್ವಾಮಿಯ ಮೂರ್ತಿಗೆ ರುದ್ರಾಭಿಷೇಕ, ಸಹಸ್ರನಾಮಾರ್ಚನೆ, ಅಷ್ಟಾವಧಾನ ಸೇವೆ ನೆರವೇರಿದ ಬಳಿಕ, 6 ಅಡಿ ಎತ್ತರದ ಬೆಳ್ಳಿಯ ನಾಗಾಭರಣ ಧಾರಣೆ ಮಾಡಿ, ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಗುತ್ತದೆ. ಬಳಿಕ ಮುಂಜಾನೆ 4ರಿಂದ ಭಕ್ತರಿಗೆ ಸ್ವಾಮಿ ದರ್ಶನ ಪಡೆಯಲು ಅವಕಾಶ ಮಾಡಿಕೊಡಲಾಗುತ್ತದೆ. ರಾತ್ರಿ 10 ಗಂಟೆವರೆಗೂ ದೇವಾಲಯ ಭಕ್ತರ ದರ್ಶನಕ್ಕಾಗಿ ತೆರೆದಿರುತ್ತದೆ.

ಬೆಳ್ಳಿ ನಾಗಾಭರಣ: ಜಯಚಾಮರಾಜೇಂದ್ರ ಒಡೆಯರ್ ಅವರು ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಹೆಸರಿನಲ್ಲಿ ಬೆಳ್ಳಿಯ ನಾಗಾಭರಣವನ್ನು ಮಾಡಿಸಿ ದೇವಾಲಯಕ್ಕೆ ನೀಡಿದ್ದಾರೆ. 6 ಅಡಿ ಎತ್ತರದ ಹುತ್ತಕ್ಕೆ 6 ಅಡಿ ಎತ್ತರದ, 7 ಹೆಡೆ, 14 ಕೆಂಪು ಕಣ್ಣು, 7 ಹಸಿರು ಪಚ್ಚೆ ನಾಲಿಗೆಯುಳ್ಳ ಬೆಳ್ಳಿಯ ನಾಗಾಭರಣವನ್ನು ಷಷ್ಠಿ ಜಾತ್ರೆಯ ದಿನ ಧಾರಣೆ ಮಾಡಲಾಗುತ್ತದೆ. ಅರಮನೆಯಲ್ಲಿ ಈ ನಾಗಾಭರಣವಿದ್ದು, ಬಿಗಿಭದ್ರತೆಯಲ್ಲಿ ತಂದು ಜಾತ್ರೆ ಮುಗಿದ ನಂತರ, ಅರಮನೆಗೆ ಕೊಂಡೊಯ್ಯಲಾಗುತ್ತದೆ. ಮಧ್ಯಾಹ್ನ 12ಗಂಟೆಯೊಳಗೆ ದೇವಾಲಯದ ಮುಂಭಾಗದಿಂದ ಸಿದ್ದಲಿಂಗಪುರದವರೆಗೆ ರಥೋತ್ಸವ ನೆರವೇರಲಿದೆ.

ಬಿಗಿ ಭದ್ರತೆ: ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಗೆ ಹೊಂದಿಕೊಂಡಂತೆ ಸರ್ವೀಸ್ ರಸ್ತೆಯಲ್ಲಿರುವ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದ ಮುಂಭಾಗದ ಸರ್ವೀಸ್ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದ್ದು, ನ.26ರಂದು ಮಧ್ಯರಾತ್ರಿಯಿಂದಲೇ ಸರ್ವೀಸ್ ರಸ್ತೆಯಲ್ಲಿ ಬೆಂಗಳೂರು ಕಡೆ ಹೋಗುವ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ದೇವಾಲಯಕ್ಕೆ ಬರುವ ಭಕ್ತರು ಸರಾಗವಾಗಿ ದರ್ಶನ ಪಡೆಯುವುದಕ್ಕಾಗಿ ಬ್ಯಾರಿಕೇಡ್ ವ್ಯವಸ್ಥೆ ಮಾಡಲು ತಹಶೀಲ್ದಾರ್ ಮಹೇಶ್ ಕುಮಾರ್ ನೇತೃತ್ವದಲ್ಲಿ ಕ್ರಮ ಕೈಗೊಳ್ಳಲಾಗಿದೆ. ಧರ್ಮದರ್ಶನ ಹಾಗೂ ಟಿಕೆಟ್ ಪಡೆದು ವಿಶೇಷ ದರ್ಶನ ಪಡೆಯಲು ಪ್ರತ್ಯೇಕ ಸಾಲಿನ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

ಕನ್ನಡ ರಾಜ್ಯೋತ್ಸವ ಆಚರಣೆ...



ಮೈಸೂರಿನ ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಯೋಗನರಸಿಂಹಸ್ವಾಮಿ ದೇವಸ್ಥಾನದ ಎದುರಿನ ಉದ್ಯಾನವನದಲ್ಲಿರುವ ಯೋಗಮಂಟಪದಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪುಸ್ತಕ ಮನೆ ಖ್ಯಾತಿಯ ಅಂಕೇಗೌಡ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸಂಘದ ಅಧ್ಯಕ್ಷ ಯು.ಜಿ.ಉದಯಕುಮಾರ್, ಕಾರ್ಯದರ್ಶಿ ಗೌರಿ ಕಿತ್ತೂರು ಗೌಡರ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಬಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ

ಮೈಸೂರು, ನ.23(ಎಸ್‌ಪಿಎನ್)– ಚಾಮರಾಜ ಕ್ಷೇತ್ರ ವ್ಯಾಪ್ತಿಯ 250ಕ್ಕೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಕಾರ್ಯಕ್ರಮವನ್ನು ನ.25ರಂದು ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಕೆ.ಹರೀಶ್‌ಗೌಡ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

ಚಾಮರಾಜ ಕ್ಷೇತ್ರ ವ್ಯಾಪ್ತಿಯ ಹಿಂದುಳಿದ ವರ್ಗದ ಬಿಸಿಎ, ಎಂಸಿಎ, ಬಿಇ ವ್ಯಾಸಂಗ ಮಾಡುತ್ತಿರುವ 300ಕ್ಕೂ ಹೆಚ್ಚು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗುತ್ತಿದೆ. ಕಾರ್ಯಕ್ರಮದಲ್ಲಿ ಲ್ಯಾಪ್‌ಟಾಪ್ ಪಡೆಯಲು ಆಯ್ಕೆಯಾಗಿರುವ ಫಲಾನುಭವಿಗಳು, ಪೋಷಕರು ಹಾಜರಿರುವಂತೆ ಮನವಿ ಮಾಡಿದ್ದಾರೆ. ಅಂತೆಯೇ ಮೈಸೂರು ನಗರಪಾಲಿಕೆ ವತಿಯಿಂದ ಹಿಂದುಳಿದ ವರ್ಗಗಳಿಗೆ ಲ್ಯಾಪ್‌ಟಾಪ್ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಅಲ್ಲಿ ಅರ್ಜಿ ಸಲ್ಲಿಸದವರು ಲ್ಯಾಪ್‌ಟಾಪ್ ಪಡೆಯಲು ಅವಕಾಶವಿಲ್ಲ ಎಂದಿದ್ದಾರೆ.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಕಾರ್ಯಕ್ರಮದ ಶಾಸಕ ತನ್ವೀರ್‌ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಶಾಸಕರಾದ ಡಿ.ರವಿಶಂಕರ್, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಸಂಸದ ಸುನೀಲ್ ಬೋಸ್, ಶಾಸಕರಾದ ಗಣೇಶ್‌ಪ್ರಸಾದ್, ದರ್ಶನ್ ಧ್ರುವನಾರಾಯಣ್, ರವಿಶಂಕರ್ ಉಪಸ್ಥಿತರಿರುವರು ಎಂದು ತಿಳಿಸಿದ್ದಾರೆ.

ಮೈಸೂರಲ್ಲಿ ಅವ್ಯವಸ್ಥೆ ಆಗರವಾಗಿರುವ ಪ್ರಯಾಣಿಕರ ತಂಗುದಾಣಗಳು

- ಪ್ರಯಾಣಿಕರು ಕೂರಲು ಆಸನ ವ್ಯವಸ್ಥೆ ಇಲ್ಲ, ಸ್ವಚ್ಛತೆಯಂತೂ ಇಲ್ಲವೇ ಇಲ್ಲ...
- ಹಸು, ನಾಯಿಗಳ ಆಶ್ರಯತಾಣಗಳಾಗಿ ಮಾರ್ಪಾಡು





ಮೈಸೂರಿನ ಬೋಗಾದಿ ರಸ್ತೆಯ ಪ್ರಯಾಣಿಕರ ತಂಗುದಾಣದಲ್ಲಿ ಆಸನಗಳೇ ಇಲ್ಲ (ಎಡಚಿತ್ರ). ಅಗ್ರಹಾರ ವೃತ್ತದ ಕಂಠಿ ಮಲ್ಲಣ್ಣ ತಂಗುದಾಣಕ್ಕೆ ಅಡ್ಡಲಾಗಿ ಬ್ಯಾರಿಕೇಡ್ ನಿಲ್ಲಿಸಿದ್ದು, ಸ್ವಚ್ಛತೆ ಇಲ್ಲದೆ ಗಬ್ಬೆದ್ದು ನಾರುತ್ತಿದೆ.

ಮೈಸೂರು, ನ.23(ಬಿಎಲ್‌ಯು)– ಮೈಸೂರು ನಗರದಲ್ಲಿ ನೂರಾರು ಪ್ರಯಾಣಿಕರ ತಂಗುದಾಣಗಳಿವೆ. ಆದರಲ್ಲಿ ಕೆಲವು ಶಿಥಿಲಾವಸ್ಥೆಯಲ್ಲಿದ್ದು, ಕೆಲವು ತಂಗುದಾಣಗಳಲ್ಲಿ ಪ್ರಯಾಣಿಕರು ಕೂರಲು ಆಸನಗಳೆ ಇಲ್ಲ, ಸೂರು ಕಿತ್ತು ಪ್ರಯಾಣಿಕರು ಮಳೆಯಲ್ಲಿ ನೆನೆದು, ಬಿಸಿಲಿನಲ್ಲಿ ಒಣಗುವ ಪರಿಸ್ಥಿತಿ ಎದುರಾಗಿದೆ.

ಸಮರ್ಪಕ ಬಸ್‌ಗಳ ಸೌಕರ್ಯ ಎಷ್ಟು ಮುಖ್ಯವೋ, ವ್ಯವಸ್ಥಿತವಾದ ಪ್ರಯಾಣಿಕರ ತಂಗುದಾಣಗಳು ಅಷ್ಟೆ ಮುಖ್ಯ. ಆದರೆ ಮೈಸೂರಿನಲ್ಲಿ ಪ್ರಯಾಣಿಕರ ತಂಗುದಾಣಗಳಲ್ಲಿ ಅವ್ಯವಸ್ಥೆ ತಾಂಡವಾಡುತ್ತಿದ್ದು, ಕೂರಲು ಆಸನಗಳೇ ಇಲ್ಲದಂತಾಗಿವೆ. ಕೆಲವು ಬಡಾವಣೆಗಳಲ್ಲಿ ಸಮರ್ಪಕ ಬಸ್ ಸೌಕರ್ಯವಿಲ್ಲ. ಇದರಿಂದ ಪ್ರಯಾಣಿಕರು ಬಹಳ ಸಮಯ ಬಸ್‌ಗಳಿಗಾಗಿ ಕಾಯಬೇಕು. ಆದರೆ ಆ ಸಮಯದಲ್ಲಿ ತಂಗುದಾಣದಲ್ಲಿ ಕೂರಬೇಕೆಂದರೂ ಅಲ್ಲಿ ಆಸನಗಳಿಲ್ಲವೆ.

ಕೆಲವು ತಂಗುದಾಣಗಳಲ್ಲಿ ಸೂರು ಕಿತ್ತು ಬಂದಿದ್ದು, ಮಳೆ ಬಂದಾಗ ಪ್ರಯಾಣಿಕರು ನೆನೆಯುವ, ಬಿಸಿಲಿನಲ್ಲಿ ಒಣಗುವ ಸ್ಥಿತಿ ಎದುರಾಗಿದೆ. ಇದರಿಂದ ನಾಮಕಾವಸ್ಥೆಗೆ ಬಸ್ ನಿಲ್ದಾಣಗಳಿರುವುದು ಸ್ಪಷ್ಟವಾಗಿದೆ.

ಪ್ರಯಾಣಿಕರ ತಂಗುದಾಣಗಳು ಜಾಹಿರಾತು ಫಲಕಗಳಾಗಿ ಮಾರ್ಪಟ್ಟಿವೆ. ಖಾಸಗಿ ಕಂಪನಿಗಳು ಸೇರಿದಂತೆ ಕೆಲವು ಸಂಘಟನೆಗಳು ತಮ್ಮ ಪ್ರಚಾರಕ್ಕಾಗಿ ತಂಗುದಾಣಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಪ್ರಯಾಣಿಕರ ತಂಗುದಾಣದಲ್ಲಿ ಜಾಹಿರಾತು ಕರಪತ್ರ ಅಂಟಿಸಿದರೆ ದಂಡ ವಿಧಿಸಲಾಗುವುದು ಎಂದು ನಗರಪಾಲಿಕೆ ಎಚ್ಚರಿಕೆ ನೀಡಿದೆ. ಆದರೆ ಈ ತನಕ ಯಾರ ವಿರುದ್ಧವೂ ಕ್ರಮ ಕೈಗೊಂಡಿಲ್ಲ.

ಮೈಸೂರಿನ ನಂಜುಮಳಿಗೆ, ಫೈವ್ ಲೈಟ್ ಸರ್ಕಲ್ ಬಳಿ ಫುಟ್‌ಪಾತ್ ಜಾಗವನ್ನು ತರಕಾರಿ ವ್ಯಾಪಾರಿಗಳು ಅತಿಕ್ರಮಿಸಿಕೊಂಡಿದ್ದಾರೆ. ಪ್ರಯಾಣಿಕರು ಕೂರಲು ಜಾಗವಿಲ್ಲದಂತೆ ಪ್ರಯಾಣಿಕರ ತಂಗುದಾಣಗಳನ್ನು ತರಕಾರಿ ಶೇಖರಣೆಗೆ ಬಳಸಿಕೊಂಡಿದ್ದಾರೆ. ಮೈಸೂರು ಪಾಲಿಕೆ ಈ ಬಗ್ಗೆ ಗಮನಹರಿಸಿ ಪ್ರಯಾಣಿಕರ ತಂಗುದಾಣಗಳನ್ನು ನವೀಕರಣ ಮಾಡುವುದು ಅತ್ಯವಶ್ಯವಾಗಿದೆ ಎಂದು ಸಾರ್ವಜನಿಕರು ಹೇಳುತ್ತಿದ್ದಾರೆ.

> “ಕೆಲವು ಪ್ರಯಾಣಿಕರ ತಂಗುದಾಣಗಳು ಹಸು, ನಾಯಿಗಳ ಆಶ್ರಯ ತಾಣವಾಗಿದ್ದು, ಈ ಹಿನ್ನೆಲೆ ಪ್ರಯಾಣಿಕರು ಒಳಗೆ ನಿಲ್ಲದ ಪರಿಸ್ಥಿತಿ ಎದುರಾಗಿದೆ. ಪ್ರಯಾಣಿಕರ ತಂಗು ದಾಣಗಳ ನಿರ್ಮಾಣ ಹಾಗೂ ನಿರ್ವಹಣೆ ಮೈಸೂರು ಪಾಲಿಕೆಯ ಜವಾಬ್ದಾರಿಯಾಗಿದೆ. ಅವುಗಳನ್ನು ಸ್ವಚ್ಛಗೊಳಿಸುವ ಹೊಣೆಗಾರಿಕೆ ಕೂಡ ಪಾಲಿಕೆ ಮೇಲಿದೆ. ಆದರೆ ಮೈಸೂರಿನ ಯಾವ ಪ್ರಯಾಣಿಕರ ತಂಗುದಾಣವನ್ನೂ ಸ್ವಚ್ಛ ಮಾಡಲ್ಲ. ಇದರಿಂದ ಅವುಗಳು ಗಬ್ಬೆದ್ದು ನಾರುತ್ತಿವೆ.

ಸನ್ಮಾನ...



ಮೈಸೂರು ತಾಲೂಕು ಜಯಪುರ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಅವರನ್ನು ಜಯಪುರ ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಡೇರಿ ಅಧ್ಯಕ್ಷ ಮೂಗನಾಯಕ, ಉಪಾಧ್ಯಕ್ಷೆ ಜಯಕ್ಕ, ಮುಖ್ಯ ಕಾರ್ಯನಿರ್ವಾಹಕ ಪಿ.ಬಸವರಾಜು ಹಾಗೂ ಸಂಘದ ನಿರ್ದೇಶಕರು ಉಪಸ್ಥಿತರಿದ್ದರು.

ದೇಶ – ವಿದೇಶ

SIR ಕರ್ತವ್ಯದಲ್ಲಿ ನಿರ್ಲಕ್ಷ್ಯ: ಇಬ್ಬರು ಬಿಎಲ್‌ಒಗಳ ಅಮಾನತು

ಬಹ್ರೈಚ್: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ನಿರ್ಲಕ್ಷ್ಯ ವಹಿಸಿದ ಆರೋಪದಲ್ಲಿ ಉತ್ತರ ಪ್ರದೇಶ ಬಹ್ರೈಚ್‌ನ ಇಬ್ಬರು ಬೂತ್ ಮಟ್ಟದ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ.

ಬಾರೈನ್‌ಬಾಗ್ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಶಮಾ ನಫೀಸ್ ಅವರು ಹಿರಿಯ ಅಧಿಕಾರಿಗಳ ಆದೇಶಗಳನ್ನು ಲೆಕ್ಕಿಸದೆ ಬಿಎಲ್‌ಒ ಕರ್ತವ್ಯಕ್ಕೆ ಹಾಜರಾಗದೆ, ಲಿಖಿತ ಮತ್ತು ದೂರವಾಣಿ ಸೂಚನೆಗಳನ್ನು ಪದೇ ಪದೇ ನಿರ್ಲಕ್ಷಿಸಿದ್ದಾರೆ ಎಂದು ಜಿಲ್ಲಾ ಪ್ರಾಥಮಿಕ ಶಿಕ್ಷಾ ಅಧಿಕಾರಿ ಆಶಿಶ್‌ಕುಮಾರ್ ಸಿಂಗ್ ಹೇಳಿದ್ದಾರೆ. ಬಾಲ್ಹಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಎಲ್‌ಒ ಆಗಿ ನೇಮಕಗೊಂಡ ಸಹಾಯಕ ಶಿಕ್ಷಕ ಅನುರಾಗ್ ಎಸ್‌ಐಆರ್ ಕರ್ತವ್ಯಗಳನ್ನು ನಿರ್ವಹಿಸಲು ನಿರಾಕರಿಸಿದ್ದಾರೆ ಎಂದು ಹೇಳಿದ್ದಾರೆ.

ಇಬರಿಬ್ಬರ ನಡವಳಿಕೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಚುನಾವಣಾ ಆಯೋಗವು, ಇಬ್ಬರೂ ಸೇವಾ ನಿಯಮಗಳ ಉಲ್ಲಂಘಿಸಿದ್ದಾರೆ ಎಂದು ಹೇಳಿದೆ. ಜಿಲ್ಲಾಧಿಕಾರಿ ಅಕ್ಷಯ್ ತ್ರಿಪಾಠಿ ಅವರ ನಿರ್ದೇಶನದ ಮೇರೆಗೆ, ಇಬ್ಬರೂ ಬಿಎಲ್‌ಒಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ ಎಂದು ಬಿಎಸ್‌ಎ ತಿಳಿಸಿದ್ದಾರೆ.

AI ದುರುಪಯೋಗ ತಡೆಗಟ್ಟಲು ಜಾಗತಿಕ ಒಪ್ಪಂದಕ್ಕೆ ಮೋದಿ ಕರೆ



ಜೋಹಾನ್ಸ್‌ಬರ್ಗ್: ಕೃತಕ ಬುದ್ಧಿಮತ್ತೆಯ ದುರುಪಯೋಗವನ್ನು ತಡೆಗಟ್ಟಲು ಜಾಗತಿಕ ಒಪ್ಪಂದಕ್ಕೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದರು. ನಿರ್ಣಾಯಕ ತಂತ್ರಜ್ಞಾನಗಳು ಹಣಕಾಸು ಕೇಂದ್ರಿತವಾಗಿರದೆ ಮಾನವ ಕೇಂದ್ರಿತವಾಗಿರಬೇಕೆಂದು ಬಲವಾಗಿ ಧ್ವನಿ ಎತ್ತಿದರು.

ಜಿ 20 ಶೃಂಗಸಭೆಯ ಮೂರನೇ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಮೋದಿ, ತಂತ್ರಜ್ಞಾನ ಅನ್ವಯಿಕೆಗಳು ರಾಷ್ಟ್ರಮಟ್ಟಕ್ಕಿಂತ ಜಾಗತಿಕವಾಗಿರಬೇಕು ಮತ್ತು 'ವಿಶೇಷ ಮಾದರಿ'ಗಳಿಗಿಂತ 'ಮುಕ್ತ ಮೂಲ'ವನ್ನು ಆಧರಿಸಿರಬೇಕು. ಈ ದೃಷ್ಟಿಕೋನವನ್ನು ಭಾರತದ ತಂತ್ರಜ್ಞಾನ ಪರಿಸರ ವ್ಯವಸ್ಥೆಯಲ್ಲಿ ಸಂಯೋಜಿಸಲಾಗಿದೆ. ಇದು ಬಾಹ್ಯಾಕಾಶ ಅನ್ವಯಿಕೆಗಳಲ್ಲಿ ಎಐ ಅಥವಾ ಡಿಜಿಟಲ್ ಪಾವತಿಗಳಲ್ಲಿ ಗಮನಾರ್ಹ ಪ್ರಯೋಜನಗಳಿಗೆ ಕಾರಣವಾಗಿದೆ ಎಂದರು.

ಜಾಗತಿಕ ಒಳಿತಿಗಾಗಿ ಎಐ ಬಳಸುವುದು ಮತ್ತು ಅದರ ದುರುಪಯೋಗ ತಡೆಯುವುದನ್ನು ಖಚಿತ ಪಡಿಸಿಕೊಳ್ಳಬೇಕು. ಇದನ್ನು ಮಾಡಲು, ಪರಿಣಾಮಕಾರಿ ಮಾನವ ಮೇಲ್ವಿಚಾರಣೆ, ಸುರಕ್ಷತೆ–ವಿನ್ಯಾಸ, ಪಾರದರ್ಶಕತೆ ಮತ್ತು ಡೀಪ್‌ಫೇಕ್‌ಗಳು, ಅಪರಾಧ, ಭಯೋತ್ಪಾದಕ ಚಟುವಟಿಕೆಗಳಲ್ಲಿ ಎಐ ಬಳಕೆ ಮೇಲೆ ನಿರ್ಬಂಧಗಳು ಸೇರಿದಂತೆ ಕೆಲವು ಪ್ರಮುಖ ತತ್ವಗಳ ಆಧಾರದ ಮೇಲೆ ನಾವು ಎಐ ಕುರಿತು ಜಾಗತಿಕ ಒಪ್ಪಂದ ರಚಿಸಬೇಕು ಎಂದು ಹೇಳಿದರು.

ವಿದ್ಯಾರ್ಥಿನಿ ಮೇಲೆ ಅತ್ಯಾಚಾರ: ಶಿಕ್ಷಕನಿಗೆ ಜೀವಾವಧಿ ಶಿಕ್ಷೆ



ಕಣ್ಣೂರು: ವಿದ್ಯಾರ್ಥಿನಿಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಆರೋಪದಲ್ಲಿ ನ್ಯಾಯಾಲಯದಿಂದ ಜೀವಾವಧಿ ಶಿಕ್ಷೆ ವಿಧಿಸಲ್ಪಟ್ಟ ಬಿಜೆಪಿ ಕಾರ್ಯಕರ್ತನೂ ಆಗಿರುವ ಶಿಕ್ಷಕನನ್ನು ಸೇವೆಯಿಂದ ವಜಾಗೊಳಿಸಲಾಗಿದೆ ಎಂದು ಕೇರಳದ ಶಿಕ್ಷಣ ಸಚಿವ ವಿ.ಶಿವನ್‌ಕುಟ್ಟಿ ಹೇಳಿದ್ದಾರೆ. ಪ್ರಕರಣದ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಜಲರಾಜನಿ ಎಂ.ಟಿ. ಅವರು ಕಡವತ್ತೂರಿನ ನಿವಾಸಿ ಪಪ್ಪೆನ್ ಮಾಸ್ಟರ್ (48) ಎಂದೂ ಕರೆಯಲ್ಪಡುವ ಪದ್ಮರಾಜನ್ ಕೆ. ಅವರನ್ನು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿಯಲ್ಲಿ ತಪ್ಪಿತಸ್ಥರೆಂದು ಪರಿಗಣಿಸಿ ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ. ನ್ಯಾಯಾಲಯದ ತೀರ್ಪಿನ ಬೆನ್ನಲ್ಲೇ ಶಿಕ್ಷಣ ಇಲಾಖೆಯು ಪದ್ಮರಾಜನ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಾಲಾ ಆಡಳಿತ ಮಂಡಳಿಗೆ ನಿರ್ದೇಶನ ನೀಡಿತ್ತು. ಈ ಹಿನ್ನೆಲೆಯಲ್ಲಿ ಪದ್ಮರಾಜನ್ ಅವರನ್ನು ಸೇವೆಯಿಂದ ವಜಾಗೊಳಿಸಿ ಶಾಲೆಯ ವ್ಯವಸ್ಥಾಪಕರು ಆದೇಶ ಹೊರಡಿಸಿದ್ದಾರೆ ಎಂದು ಶಿವನ್‌ಕುಟ್ಟಿ ಹಂಚಿಕೊಂಡಿದ್ದಾರೆ.

ಪದ್ಮರಾಜನ್ ಅವರು 10 ವರ್ಷದ ವಿದ್ಯಾರ್ಥಿಯ ಮೇಲೆ ಶಾಲೆಯ ಶೌಚಾಲಯದಲ್ಲಿ ಮತ್ತು ಅವರ ನಿವಾಸದಲ್ಲಿ ಲೈಂಗಿಕ ದೌರ್ಜನ್ಯ ಎಸಗಿದ್ದರು.


ಗಾಜಾ ಮೇಲೆ ಇಸ್ರೇಲ್ ವೈಮಾನಿಕ ದಾಳಿ: 24 ಪ್ಯಾಲೆಸ್ತೀನಿಯರ ಸಾವು!



ಗಾಜಾ: ಹಮಾಸ್ ಮತ್ತು ಇಸ್ರೇಲ್ ನಡುವಿನ ಕದನ ವಿರಾಮ ಮತ್ತೊಮ್ಮೆ ಉಲ್ಲಂಘನೆಯಾಗಿದೆ. ಉತ್ತರ ಮತ್ತು ಮಧ್ಯ ಗಾಜಾದಾದ್ಯಂತ ಇಸ್ರೇಲ್ ನಡೆಸಿದ ಡ್ರೋನ್, ಕ್ಷಿಪಣಿ ದಾಳಿಯಲ್ಲಿ ಕನಿಷ್ಠ 24 ಪ್ಯಾಲೆಸ್ಟೀನಿಯನ್ನರು ಸಾವನ್ನಪ್ಪಿದ್ದಾರೆ. ಡಜನ್‌ಗಟ್ಟಲೇ ಜನರು ಗಾಯಗೊಂಡಿದ್ದಾರೆ. ಇಸ್ರೇಲ್ ವೈಮಾನಿಕ ದಾಳಿಯಲ್ಲಿ 24 ಜನರು ಸಾವನ್ನಪ್ಪಿದ್ದು, ಮಕ್ಕಳು ಸೇರಿದಂತೆ 54 ಜನರು ಗಾಯಗೊಂಡಿದ್ದಾರೆ ಎಂದು ಗಾಜಾದ ಆರೋಗ್ಯ ಅಧಿಕಾರಿಗಳು ವರದಿ ಮಾಡಿದ್ದಾರೆ.

2 ವರ್ಷಗಳ ಯುದ್ಧದ ನಂತರ, ಅ.10ರಂದು ಯುಎಸ್ ಮಧ್ಯಸ್ಥಿಕೆಯಲ್ಲಿ ಇಸ್ರೇಲ್ ಮತ್ತು ಹಮಾಸ್ ನಡುವೆ ಕದನ ವಿರಾಮ ಜಾರಿಗೆ ಬಂದ ನಂತರ ಭೀಕರ ದಾಳಿ ನಡೆದಿದೆ. ಸಶಸ್ತ್ರ ಭಯೋತ್ಪಾದಕ ಗಾಜಾ ಪಟ್ಟಿಯೊಳಗಿನ ಹಳದಿ ರೇಖೆ ದಾಟಿದ್ದಾನೆ. ಈ ವೇಳೆ ಇಸ್ರೇಲ್ ಸೈನಿಕರ ಮೇಲೆ ಗುಂಡು ಹಾರಿಸಿದ್ದಾನೆ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ. ದಕ್ಷಿಣ ಗಾಜಾದಲ್ಲಿ ನಡೆದ ಘಟನೆಗೆ ಪ್ರತಿಕ್ರಿಯೆಯಾಗಿ, ಗಾಜಾಪಟ್ಟಿಯಲ್ಲಿರುವ ಭಯೋತ್ಪಾದಕ ತಾಣಗಳ ಮೇಲೆ ದಾಳಿ ಮಾಡಲು ಪ್ರಾರಂಭಿಸಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ. ಗಾಜಾದಲ್ಲಿನ ಆರೋಗ್ಯ ಸಚಿವಾಲಯದ ಪ್ರಕಾರ, ಕದನ ವಿರಾಮ ಆರಂಭವಾದಾಗಿನಿಂದ ಇಸ್ರೇಲ್ ಗುಂಡಿನ ದಾಳಿಯಲ್ಲಿ 312 ಪ್ಯಾಲೆಸ್ಟೀನಿಯನ್ನರು ಸಾವನ್ನಪ್ಪಿದ್ದಾರೆ.

ಮಧ್ಯಪ್ರದೇಶ: ಶಸ್ತ್ರಾಸ್ತ್ರಗಳ ಅಕ್ರಮ ತಯಾರಿಕೆ ಜಾಲ ಪತ್ತೆ



ಪುಣೆ: ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶ ಪೊಲೀಸರು ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ, ಶಸ್ತ್ರಾಸ್ತ್ರಗಳ ಅಕ್ರಮ ತಯಾರಿಕೆ ಹಾಗೂ ಸಾಗಾಟದ ಜಾಲವನ್ನು ಭೇದಿಸಿದ್ದಾರೆ. 36 ಜನರನ್ನು ಬಂಧಿಸಿದ್ದು, ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಮಧ್ಯಪ್ರದೇಶದ ಬರ್ವಾನಿ ಜಿಲ್ಲೆಯ ಉಮಾರ್ತಿ ಗ್ರಾಮದಲ್ಲಿ ಈ ಅಕ್ರಮ ಚಟುವಟಿಕೆ ನಡೆಯುತ್ತಿತ್ತು. ಈ ಜಾಲವನ್ನು ಪತ್ತೆ ಹಚ್ಚಿದ ಬಳಿಕ, 105 ಮಂದಿ ಪೊಲೀಸ್ ಸಿಬ್ಬಂದಿಯ ತಂಡವು ಕಾರ್ಯಾಚರಣೆ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಯಾಚರಣೆ ವೇಳೆ, ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿದ್ದ 50 ಘಟಕಗಳನ್ನು ನಾಶಪಡಿಸಲಾಗಿದೆ. ಕಳೆದ ಮೂರು ವಾರಗಳಲ್ಲಿ ಪುಣೆಯಲ್ಲಿ 21 ಪಿಸ್ತೂಲ್ ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಪ್ರಕರಣಗಳಲ್ಲಿ ಬಂಧಿತರಾದ ಆರೋಪಿಗಳ ವಿಚಾರಣೆಯಲ್ಲಿ, ಮಧ್ಯಪ್ರದೇಶದಿಂದ ಇಲ್ಲಿಗೆ ಶಸ್ತ್ರಾಸ್ತ್ರಗಳನ್ನು ಸಾಗಿಸಲಾಗುತ್ತಿದೆ ಎಂಬುದು ಗೊತ್ತಾಯಿತು. ಈ ಜಾಲದಲ್ಲಿ ಇನ್ನೂ ಹಲವರು ಭಾಗಿಯಾಗಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದರು

ಮೈಸೂರು ಮಿತ್ರ ಸೋಮವಾರ 24 ನವೆಂಬರ್ 2025

ಶೌರ್ಯ ವಿಪತ್ತು ನಿರ್ವಹಣಾ ಘಟಕದಿಂದ ಶ್ರಮದಾನ



ಶೌರ್ಯ ವಿಪತ್ತು ನಿರ್ವಹಣಾ ಘಟಕದಿಂದ ಸರ್ಕಾರಿ ಪದವಿ ಕಾಲೇಜಿನಲ್ಲಿ ಶ್ರಮದಾನ ಮಾಡಲಾಯಿತು.

ನಾಪೋಕ್ಲು, ನ.23– ಶೌರ್ಯ ವಿಪತ್ತು ನಿರ್ವಹಣಾ ಘಟಕ ವತಿಯಿಂದ ಇಲ್ಲಿಯ ಸರ್ಕಾರಿ ಪದವಿ ಕಾಲೇಜಿನಲ್ಲಿ ಶ್ರಮದಾನ ಮಾಡಲಾಯಿತು.

ಸಾರ್ವಜನಿಕ ಸೇವೆಯಲ್ಲಿ ಮುಂಚೂಣಿಯಲ್ಲಿರುವ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸದಸ್ಯರು ಒಟ್ಟು ಸೇರಿ ಕಾಲೇಜಿನ ಆವರಣದಲ್ಲಿ ಬೆಳೆದಿದ್ದ ಕಾಡು ಗಿಡ ಗಂಟಿಗಳನ್ನು ಕಡಿದು ಸ್ವಚ್ಛ ಕಾರ್ಯವನ್ನು ಮಾಡಿ ಕಾಲೇಜಿಗೆ ಮೆರುಗನ್ನು ಇನ್ನಷ್ಟು ಹೆಚ್ಚಿಸಿದರು. ನಾಪೋಕ್ಲು ಶೌರ್ಯ ವಿಪತ್ತು ನಿರ್ವಹಣಾ ಘಟಕದ ಮಾಸ್ಟರ್ ಆಗಿರುವ ಬಾಳೆಯಡ ದಿವ್ಯ ಮಂದಪ್ಪ, ಹಾಗೂ ಸದಸ್ಯರಾದ ಉಮಾಲಕ್ಷ್ಮಿ, ಸುನಿತಾ, ರಮ್ಯಾ, ಚಂದ್ರಕಲಾ, ರಶ್ಮಿ ಶಂಕರ, ದಿಲೀಶ್, ಶರವಣ ನಾರಾಯಣ, ಮೈಲಪ್ಪ ಹಾಗೆ ಕಾಲೇಜು ಪ್ರಿನ್ಸಿಪಾಲ್ ಹೆಚ್.ಸಿ.ಪಲ್ಲವಿ ಉಪನ್ಯಾಸಕರು ಹಾಜರಿದ್ದರು.

ಕೆದಮುಳ್ಳೂರು: 1.30 ಕೋಟಿ ರೂ. ಕಾಮಗಾರಿಗಳಿಗೆ ಚಾಲನೆ



1.30 ಕೋಟಿ ರೂ ವೆಚ್ಚದ ಕಾಮಗಾರಿಗಳಿಗೆ ಶಾಸಕ ಎ.ಎಸ್. ಪೊನ್ನಣ್ಣ ಗುದ್ದಲಿಪೂಜೆ ನೆರವೇರಿಸಿದರು.

ವಿರಾಜಪೇಟೆ, ನ.23–ಸತತ ಮಳೆಯಾದ ಕಾರಣ ಜಿಲ್ಲೆಯ ಬಹುತೇಕ ರಸ್ತೆಗಳು ಹಾನಿಯಾಗಿವೆ. ಮುಗಿಯದ ಕಾಮಗಾರಿಗಳಿಗೆ ಸಾಮಾಜಿಕ ಜಾಲತಾಣದ ಮೂಲಕ ಕಾಮಗಾರಿ ಕಳಪೆ ಬಿಂಬಿಸುವುದು ಅಜ್ಞಾನ ಎಂದು ಶಾಸಕ ಎ.ಎಸ್. ಪೊನ್ನಣ್ಣ ಅಭಿಪ್ರಾಯ ಪಟ್ಟಿದ್ದಾರೆ.

ತಾಲೂಕು ಕೆದಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಟ್ಟೋಳಿಯಲ್ಲಿ ಶಾಸಕರ ವಿಶೇಷ ಅನುದಾನ ನಿಧಿಯಿಂದ 1.30 ಕೋಟಿ ರೂ ಅಂದಾಜು ವೆಚ್ಚದಲ್ಲಿ ಸುಸಜ್ಜಿತ ರಸ್ತೆ, 20 ಲಕ್ಷ ರೂ ವೆಚ್ಚದ ಬಾರಿಕಾಡು ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಅಕಾಲಿಕ ಮಳೆಯಿಂದಾಗಿ ಜಿಲ್ಲೆಯ ಬಹುತೇಕ ರಸ್ತೆಗಳು ಹಾನಿಯಾಗಿವೆ. ಮಳೆಯಿಂದಾಗಿ ಕಾಮಗಾರಿಗಳು ವಿಳಂಬವಾಯಿತು.

ಗ್ರಾಮೀಣ ರಸ್ತೆಗಳ ದುರಸ್ತಿಗಾಗಿ 24 ಕೋಟಿ ಮತ್ತು ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗಾಗಿ 140 ಕೋಟಿ ಅನುದಾನ ಬಿಡುಗಡೆಯಾಗಿದ್ದು. ಕ್ಷೇತ್ರದ ವಿವಿಧ ಭಾಗಗಳಲ್ಲಿ ಕಾಮಗಾರಿ ಆರಂಭವಾಗಿ ಪ್ರಗತಿಯಲ್ಲಿದೆ. ಮಳೆಯಲ್ಲಿ ಯಾವುದೇ ಕಾಮಗಾರಿಗಳು ಆರಂಭವಾದರೂ ಗುಣಮಟ್ಟ, ಶೂನ್ಯವಾಗುತ್ತದೆ ಈ ನಿಟ್ಟಿನಲ್ಲಿ ಮಳೆಯ ಬಳಿಕ ಕಾಮಗಾರಿ ಅರಂಭಿಸಲಾಗಿದೆ. ಕೆಲವು ಪ್ರಗತಿ ಹಂತದಲ್ಲಿರುವ ರಸ್ತೆ ಕಾಮಗಾರಿಯನ್ನು ಮೊಬೈಲ್ ಮೂಲಕ ಚಿತ್ರೀಕರಿಸಿ ಸಾಮಾಜಿಕ ಜಾಲತಾಣದ ಮೂಲಕ ಕಳಪೆ ಎಂದು ಬಿಂಬಿಸಿ ಹರಿಯಬಿಟ್ಟಿದ್ದಾರೆ. ಆತ್ಮ ವಿಮರ್ಶೆ ಮಾಡಿಕೊಳ್ಳುವುದು ಲೇಸು ಎಂದು ಟೀಕಾಕಾರರಿಗೆ ಪರೋಕ್ಷವಾಗಿ ಹೇಳಿದರು. ಗುಣಮಟ್ಟದಿಂದ ನಿಗದಿತ ಸಮಯದಲ್ಲಿ ರಸ್ತೆ ಕಾಮಗಾರಿಗಳು ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಿದರು.

ಕೆ.ಡಿ.ಪಿ ಸದಸ್ಯ, ಕೆದಮುಳ್ಳೂರು ಗ್ರಾಮ ಪಂಚಾಯಿತಿ ಸದಸ್ಯ ಮಾಳೇಟಿರ ಪ್ರಶಾಂತ್ ಉತ್ತಪ್ಪ ಪ್ರಾಸ್ತಾವಿಕ ಭಾಷಣ ಮಾಡಿದರು. ಕೆದ ಮುಳ್ಳೂರು ಗ್ರಾ.ಪಂ ಸದಸ್ಯ ಎಂ.ಎಂ. ಇಸ್ಮಾಯಿಲ್ ಸ್ವಾಗತಿಸಿ, ವಂದಿಸಿದರು. ಗ್ರಾ.ಪಂ. ಅಧ್ಯಕ್ಷ ಜೆಫ್ರಿ ಉತ್ತಪ್ಪ, ವಲಯ ಕಾಂಗ್ರೆಸ್ ಅಧ್ಯಕ್ಷ ನಡಿಕೇರಿಯಂಡ ಮಹೇಶ್, ನಗರ ಕಾಂಗ್ರೆಸ್ ಮಾಜಿ ಅಧ್ಯಕ್ಷ ಪಾಲೇಕಂಡ ಅಯ್ಯಣ್ಣ, ಡಿ.ಸಿ.ಸಿ ಸದಸ್ಯರಾದ ಬೆಲ್ಲು ಬೋಪಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಶಭೀರ್, ಮಾಜಿ ಪುರಸಭಾ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಹಾಗೂ ವಲಯ ಕಾಂಗ್ರೆಸ್ ಸದಸ್ಯರು, ಪಕ್ಷದ ಕಾರ್ಯಕರ್ತರು, ಗ್ರಾಮಸ್ಥರು ಹಾಜರಿದ್ದರು.

ಎನ್.ಸಿ.ಸಿ ಕೆಡೆಟ್‌ಗಳಿಂದ ಸ್ವಚ್ಛ ಕೊಡಗು, ಸುಂದರ ಕೊಡಗು ಅಭಿಯಾನ



ಎನ್.ಸಿ.ಸಿ ಕೆಡೆಟ್‌ಗಳು ಶನಿವಾರ ಅಭಿಯಾನ ನಡೆಸಿದರು.

ಮಡಿಕೇರಿ, ನ.23– ನಗರದ ಕೊಡಗು ವಿದ್ಯಾಲಯದ ಎನ್.ಸಿ.ಸಿ ಕೆಡೆಟ್‌ಗಳು 'ಎನ್.ಸಿಸಿ ರೈಝಿಂಗ್ ಡೇ' ಪ್ರಯುಕ್ತ ನಗರದ ಸರ್ಕಾರಿ ಮತ್ತು ಖಾಸಗಿ ಬಸ್ ನಿಲ್ದಾಣಗಳಲ್ಲಿ 'ಸ್ವಚ್ಛ ಕೊಡಗು, ಸುಂದರ ಕೊಡಗು' ಅಭಿಯಾನವನ್ನು ನಡೆಸಿದರು.

ಬಸ್‌ನಲ್ಲಿ ಕಸವನ್ನು ಹೊರಗೆ ಎಸೆಯಬಾರದು ಬಸ್ಸಿನ ಒಳಗೆ ಉಗುಳಬಾರದು ಸ್ವಚ್ಛತೆಯ ಕಡೆ ಗಮನಹರಿಸುವಂತೆ ಪ್ರಯಾಣಿಕರಿಗೆ ಮನವಿ ಮಾಡಿದರು. ಸರ್ಕಾರಿ ಹಾಗೂ ಖಾಸಗಿ ಬಸ್ ನಿಲ್ದಾಣಗಳಲ್ಲಿ ಕೆಡೆಟ್‌ಗಳು ಸ್ವಚ್ಛತಾ ಕಾರ್ಯ ಕೈಗೊಂಡರು. ಶಾಲೆಯ ಪ್ರಾಂಶುಪಾಲ ಕೆ.ಎಸ್ ಸುಮಿತ್ರ, ಆಡಳಿತ ವ್ಯವಸ್ಥಾಪಕ ಪಿ. ರವಿ, ಎನ್.ಸಿ.ಸಿ ಅಧಿಕಾರಿ ಹಾಗೂ ಶಿಕ್ಷಕರು ಕೆಡೆಟ್‌ಗಳೊಂದಿಗೆ ಭಾಗವಹಿಸಿದ್ದರು.

ಕಾಲೂರಿನಲ್ಲಿ ತಂಬಾಕು ಮುಕ್ತ–ಮಹಿಳಾ ಸಭೆ

ಮಡಿಕೇರಿ, ನ.23– ಕಾಲೂರು ಗ್ರಾಮಕ್ಕೆ ತಂಬಾಕು ಕೋಶದ ತಂಡ ಭೇಟಿ ನೀಡಿ ಮಹಿಳಾ ಸಂಘದ ಸದಸ್ಯರಿಗೆ ಮಾಹಿತಿ ನೀಡಲು ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲಾಯಿತು.

ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಜಿ.ವಿ.ಶ್ರೀನಾಥ್ ಮಾತನಾಡಿ, ಮನೆಗಳಿಂದಲೇ ತಂಬಾಕು ಮುಕ್ತಗೊಳಿಸಲು ಮಹಿಳೆಯರು ಮುಂದೆ ಬರುವಂತೆ ತಿಳಿಸಿ, ಮುಂದಿನ ಪೀಳಿಗೆಗಳಿಗೆ ಆರೋಗ್ಯಕರ ವಾತಾವರಣ ಸೃಷ್ಟಿಸಬೇಕಾದ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು. ಗ್ರಾಮದಲ್ಲಿ ಎಲ್ಲರೂ ಸೇರಿ ತಂಬಾಕು ಮಾರಾಟ ಮತ್ತು ಉತ್ಪನ್ನಗಳಿಗೆ ಅವಕಾಶ ನೀಡದೆ ಮಾದರಿ ಗ್ರಾಮವನ್ನಾಗಿಸಲು ಎಲ್ಲರ ಸಹಕಾರ ಕೋರಿದರು. ಜಿಲ್ಲಾ ತಂಬಾಕು ಕೋಶದ ಪುನೀತ, ಮಂಜುನಾಥ್ ಈ ಗ್ರಾಮದಿಂದಲೇ ತಂಬಾಕು ನಿರ್ಮೂಲನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಇತರರಿಗೆ ಪ್ರೇರಣೆ ಆಗಬೇಕೆಂದರು

ಸಭೆಯಲ್ಲಿ ಮಹಿಳಾ ಸಂಘದ ಅಧ್ಯಕ್ಷೆ ಕಾವೇರಮ್ಮ, ಉಪಾಧ್ಯಕ್ಷೆ ಜಮುನಾ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ದೇವಕಿ, ಸಮುದಾಯ ಆರೋಗ್ಯ ಅಧಿಕಾರಿ ಯಶೋಧ, ಆಶಾ ಕಾರ್ಯಕರ್ತೆ ರೇಖಾ ಹಾಗೂ ಪಂಚಾಯಿತಿ ಅಧಿಕಾರಿ ಮನುಕುಮಾರ್ ಹಾಜರಿದ್ದರು.

ಆಂಗ್ಲ ಭಾಷೆಯ ಬ್ಯಾನರ್ ಕಿತ್ತು ಹಾಕಿ ರಕ್ಷಣಾ ವೇದಿಕೆ ಆಕ್ರೋಶ

ಮಡಿಕೇರಿ, ನ.23–ಕುಶಾಲನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಸಂಪೂರ್ಣವಾಗಿ ಆಂಗ್ಲ ಭಾಷೆಯಲ್ಲಿ ಅಳವ ಡಿಸಿದ್ದ ಬ್ಯಾನರ್ ಅನ್ನು ಕನ್ನಡ ಪರ ಸಂಘಟನೆ ಕಿತ್ತು ಹಾಕಿ ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆದಿದೆ. ಆಂಗ್ಲ ಭಾಷೆಯಲ್ಲಿ ಜಾಹೀರಾತು ಬ್ಯಾನರ್ ಅಳವಡಿಸಿರುವ ಮಾಹಿತಿ ಅರಿತು ಸ್ಥಳಕ್ಕಾಗಮಿಸಿದ ಹೆಚ್.ಶಿವರಾಮೇಗೌಡರ ರಾಜ್ಯ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ದಿನೇಶ್ ಹಾಗೂ ಸಂಘಟನೆಯ ಪ್ರಮುಖರು ಬ್ಯಾನರನ್ನು ಕಿತ್ತು ನೆಲಕ್ಕೆ ಬಿಸಾಡಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಜಿಲ್ಲಾಧ್ಯಕ್ಷ ದಿನೇಶ್, ಇತ್ತೀಚಿನ ದಿನಗಳಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಆಂಗ್ಲ ಭಾಷೆಯ ಬ್ಯಾನರ್‌ಗಳು ರಾರಾಜಿಸುತ್ತಿವೆ. ಪುರಸಭೆ ಅಧಿಕಾರಿಗಳು ಗಮನ ಹರಿಸದೆ ಇರುವುದು ಕನ್ನಡಕ್ಕೆ ಮಾಡಿದ ಅವಮಾನವಾಗಿದೆ. ಸಂಪೂರ್ಣ ಆಂಗ್ಲ ಭಾಷೆಯ ಬ್ಯಾನರ್ ಅಳವಡಿಸಲು ಪರವಾನಗಿ ನೀಡಿರುವುದನ್ನು ಸಂಘಟನೆಯ ಪರವಾಗಿ ಬಲವಾಗಿ ಖಂಡಿಸುವ ಮೂಲಕ ಮುಂದಿನ ದಿನಗಳಲ್ಲಿ ಸಂಪೂರ್ಣ ಆಂಗ್ಲ ಭಾಷೆಯ ಬ್ಯಾನರ್‌ಗಳನ್ನು ಕಟ್ಟಲು ಸ್ಥಳೀಯ ಆಡಳಿತ ಅನುಮತಿ ನೀಡಿದರೆ ಪುರಸಭೆ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಗೌರವ ಅಧ್ಯಕ್ಷ ಕೆ.ಚಂದ್ರು, ತಾಲೂಕು ಸಂಚಾಲಕ ರಂಗಸ್ವಾಮಿ, ಪ್ರಮುಖರಾದ ಸತೀಶ್ ಜಯರಾಜ್ ಮುಂತಾದವರಿದ್ದರು.

ಶಾಲೆಯ ಎಸ್‌ಡಿಎಂಸಿ ಸದಸ್ಯನ ಮೇಲೆ ಹಲ್ಲೆ: ದೂರು ದಾಖಲು



ಹಲ್ಲೆಗೊಳಗಾದ ಎಸ್.ಡಿ.ಎಂ.ಸಿ ಸದಸ್ಯ ಎಂ.ಎಂ ರಜಾಕ್ ದಾನಕ್ಕೆ ಸಂಬಂಧಿಸಿದ ದಾಖಲೆಯನ್ನು ಸುದ್ದಿಗಾರರೆದುರು ಪ್ರದರ್ಶಿಸಿದರು.

ವಿರಾಜಪೇಟೆ, ನ.23–ಶಾಲೆಗೆ ನೀಡಿದ್ದ ಜಾಗವನ್ನು ಮರಳಿ ತಮಗೆ ನೀಡಬೇಕೆಂಬ ವ್ಯಾಜ್ಯ ಪರಿಹಾರಕ್ಕೆಂದು ನ್ಯಾಯಾಲಯ ನಿಯೋಜಿಸಿದ್ದ ಅಧಿಕಾರಿಯು ಸ್ಥಳ ಪರಿಶೀಲನೆ ಮಾಡುತ್ತಿರುವಾಗಲೇ ಶಾಲೆಯ ಎಸ್.ಡಿ.ಎಂ.ಸಿ ಸದಸ್ಯ ರೊಬ್ಬರ ಮೇಲೆ ದಾನಿಯ ಮೂವರು ಮಕ್ಕಳು ತೀವ್ರ ಹಲ್ಲೆ ನಡೆಸಿರುವ ಘಟನೆ ಭಾನುವಾರ ಸಂಭವಿಸಿದೆ.

ಸಮೀಪದ ಬೇಟೋಳಿಯ ಗುಂಡಿಕೆರೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ಸದಸ್ಯ ಹಾಗೂ ಗ್ರಾಮ ಪಂಚಾಯಿತಿ ಸದಸ್ಯರಾಗಿರುವ ಎಂ.ಎಂ. ರಜಾಕ್ ಎಂಬುವವರೆ ಹಲ್ಲೆಗೊಳಗಾದವರಾಗಿದ್ದಾರೆ.

1964ರ ಸಮಯದಲ್ಲಿ 50 ಸೆಂಟ್ ಜಾಗವನ್ನು ಉದಾರವಾಗಿ ನೀಡಿದ್ದರು. ಕೆಲ ಕಾಲದ ನಂತರ ಈ ದಾನಿಯ ಮಕ್ಕಳು ಆ ಜಾಗವನ್ನು ಮರಳಿ ತಮಗೇ ನೀಡುವಂತೆ ಕೋರಿ ಕೆಳ ನ್ಯಾಯಾಲಯ ಮತ್ತು ಮೇಲಿನ ನ್ಯಾಯಾಲಯದಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ಇವರ ವಿರುದ್ಧವಾಗಿ ತೀರ್ಪು ಹೊರ ಬಂದಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮರುಪರಿಶೀಲನಾ ದಾವೆ ಹೂಡಿದ್ದರು. ಹೈಕೋರ್ಟ್ ಮೊಕದ್ದಮೆಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆಗೆಂದು ನೇಮಕಗೊಂಡಿದ್ದ ಆಯುಕ್ತ ಗುರುಪ್ರಸಾದ್ ಹೆಗಡೆ ಸಂಜೆ ಅಧಿಕಾರಿಗಳು, ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳ ಸಮ್ಮುಖದಲ್ಲಿ ಸ್ಥಳ ಪರಿಶೀಲನೆ ಮಾಡುತ್ತಿರುವಾಗ ಕೆ.ಎಂ. ಇಸ್ಮಾಯಿಲ್, ರಮ್ಲಾಬಿ ಮತ್ತು ಸಿ.ಎ ಇಸ್ಮಾಯಿಲ್ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ರಜಾಕ್ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

ಹಲ್ಲೆಗೊಳಗಾದ ರಜಾಕ್ ಚಿಕಿತ್ಸೆಗಾಗಿ ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸಚಿವ ಸ್ಥಾನ ನೀಡುವ ವಿಚಾರ ಹೈಕಮಾಂಡ್ ನಿಲುವಿಗೆ ಬಿಟ್ಟಿದ್ದು: ಎ.ಆರ್.ಕೃಷ್ಣಮೂರ್ತಿ



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ಭೇಟಿಯಾಗಿ ಅಭಿನಂದಿಸಿದರು.

ಕೊಳ್ಳೇಗಾಲ, ನ.23– ಹೈಕಮಾಂಡ್ ನನ್ನ ಹಿರಿತನಕ್ಕೆ ಮನ್ನಣೆ ನೀಡಿ ಸಚಿವ ಸ್ಥಾನ ನೀಡಿದರೆ ಸಮರ್ಥವಾಗಿ ನಿಬಾಯಿಸಲು ಸಿದ್ದನಿದ್ದೇನೆ, ಈ ವಿಚಾರದಲ್ಲಿ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಹೇಳಿದರು.

ರಾಜ್ಯ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷರಾಗಿ ನೇಮಕಗೊಂಡ ಅವರು ಬ್ಲಾಕ್ ಕಾಂಗ್ರೆಸ್ ವತಿಯಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿ, ನಾನು ಈ ಹಿಂದೆ 2 ಬಾರಿ, ಈಗ ಮತ್ತೊಮ್ಮೆ ಶಾಸಕನಾಗಿದ್ದೇನೆ, ನನ್ನ ಹಿರಿತನ, ಕಾರ್ಯವೈಖರಿ ಗಮನಿಸಿ ಸಚಿನ ಸ್ಥಾನ ನೀಡುವ ವಿಶ್ವಾಸವಿದೆ. ಈ ವಿಚಾರ ಹೈಕಮಾಂಡ್‌ಗೆ ಬಿಟ್ಟಿದ್ದು ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನಕ್ಕೆ ನಾನು ಬದ್ಧನಾಗಿರುವೆ ಎಂದರು

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಕಾರ್ಯದರ್ಶಿ ಬಸ್ತೀಪುರ ರವಿ, ನಗರಸಭೆ ಮಾಜಿ ಅಧ್ಯಕ್ಷರಾದ ಬಸ್ತಿಪುರ ಶಾಂತು, ರೇಖಾ ರಮೇಶ್, ರಮೇಶ್, ಪುರಸಭೆ ಮಾಜಿ ಉಪಾಧ್ಯಕ್ಷ ಲಿಂಗರಾಜು, ತಾಪಂನ ಮಾಜಿ ಉಪಾಧ್ಯಕ್ಷ ಹಂಪಾ ಪುರ ಬಸವಣ್ಣ, ಸ್ವಾಮಿ ನಂಜಪ್ಪ, ರಾಘವೇಂದ್ರ, ಶಂಕನಪುರ ಜಗದೀಶ್, ಭೀಮನಗರದ ಯಜಮಾನ ಸಿದ್ದಾರ್ಥ, ಸುರೇಶ್, ರಾಜಶೇಖರಮೂರ್ತಿ ಇನ್ನಿತರರಿದ್ದರು

ಖರ್ಗೆ ಭೇಟಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಶಾಸಕ ಎ ಆರ್ ಕೃಷ್ಣಮೂರ್ತಿ ಭೇಟಿಯಾಗಿದ್ದರು. ಅವರ ಬೆಂಗಳೂರಿನ ನಿವಾಸಕ್ಕೆ ತೆರಳಿ ಖರ್ಗೆ ಅವರನ್ನು ಅಭಿನಂದಿಸಿ ಕೆಲಕಾಲ ಪ್ರಸ್ತುತ ರಾಜಕೀಯ ಬೆಳವಣಿಗೆ, ಕಾಂಗ್ರೆಸ್ ಪಕ್ಷದ ಬಲವರ್ಧನೆ ಕುರಿತಂತೆ ಚರ್ಚಿಸಿ ದರು ಎನ್ನಲಾಗಿದೆ. ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿರುವ ಶಾಸಕರು ಭಾನುವಾರ ಖರ್ಗೆಯವರನ್ನು ಭೇಟಿ ಮಾಡಿರುವ ವಿಚಾರ ಸಾಕಷ್ಟು ಚರ್ಚೆಗೆ ಆಸ್ಪದ ಮಾಡಿಕೊಟ್ಟಿದೆ.

ಅದ್ಧೂರಿಯಾಗಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ



ಪಟ್ಟಣದ ಹಳೆ ಬಸ್ ನಿಲ್ದಾಣದ ಆವರಣದಲ್ಲಿ ಬೆಳ್ಳಿ ರಥದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಶಾಸಕ ಗಣೇಶ್ ಪ್ರಸಾದ್ ಮೆರವಣಿಗೆಗೆ ಚಾಲನೆ ನೀಡಿದರು.

ಗುಂಡ್ಲುಪೇಟೆ, ನ.23(ಸೋಮ್.ಜಿ)–ಪಟ್ಟಣದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಪಟ್ಟಣ ಹಾಗೂ ತಾಲೂಕಿನ ನಾಯಕ ಸಮುದಾಯದಿಂದ ಅದ್ದೂರಿ ಯಾಗಿ ಆಯೋಜನೆ ಮಾಡಲಾಗಿತ್ತು. ಸಾವಿರಾರು ಸಂಖ್ಯೆಯಲ್ಲಿ ನಾಯಕ ಸಮಯದಾಯದ ಮುಖಂಡರು, ಯುವಕರು, ಹಿರಿಯರು ಭಾಗಿಯಾಗಿದ್ದರು ಪಟ್ಟಣದ ಹಳೆ ಬಸ್ ನಿಲ್ದಾಣದ ಆವರಣದಲ್ಲಿ ಬೆಳ್ಳಿ ರಥದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ವಿವಿಧ ಕಲಾತಂಡಗಳು ಡೊಳ್ಳು ಕುಣಿತ ತಮಟೆ ಹಾಗೂ ಡಿ ಜೆ ಸದ್ದಿಗೆ ತಾಲೂಕಿನ ವಿವಿಧ ಹಳ್ಳಿಗಳಿಂದ ಆಗಮಿಸಿದ ಸಮುದಾಯದ ಯುವಕ ಸಂಘದ ಪದಾಧಿಕಾರಿಗಳು ಹಾಗೂ ಸಮಾಜದ ಬಾಂಧವರು ಹೆಜ್ಜೆ ಹಾಕಿದರು. ಅಲ್ಲದೆ ಮೆರವಣಿಗೆಯಲ್ಲಿ ಪ್ರತಿಯೊಂದು ಹಳ್ಳಿಯಿಂದ ಆಗಮಿಸಿದ ವಾಲ್ಮೀಕಿ ಯುವಕ ಸಂಘದ ಪದಾಧಿಕಾರಿಗಳು. ತಮ್ಮ ತಮ್ಮ ವಾಹನಗಳಿಗೆ ದೊಡ್ಡ ಪ್ರಮಾಣದಲ್ಲಿ ವಾಲ್ಮೀಕಿ ಭಾವಚಿತ್ರವಿರುವ ಫ್ಲೆಕ್ಸ್‌ಗಳನ್ನು ಕಟ್ಟಿಕೊಂಡು ತಂಡೋಪತಂಡವಾಗಿ ಅಗಮಿಸುವ ಮೂಲಕ ಮೆರವಣಿಗೆಯ ಮೆರಗು ಹೆಚ್ಚಿಸಿದರು.

ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಸ್ವಾಮೀಜಿ ಒಬ್ಬ ವ್ಯಕ್ತಿಯು ತನ್ನ ಜೀವಿತ ಅವಧಿಯಲ್ಲಿ ಸಮಾಜದಲ್ಲಿ ಆದರ್ಶವಾಗಿ ಹೇಗೆ ಬಾಳಬೇಕು ಎಂಬುದನ್ನು ವಾಲ್ಮೀಕಿ ಮಹರ್ಷಿಗಳು ತೋರಿಸಿದ್ದಾರೆ ಅವರ ಬದುಕೂ ಎಲ್ಲರಿಗೂ ಆದರ್ಶವಾಗಿದೆ ಎಂದರು. ಮಹರ್ಷಿ ವಾಲ್ಮೀಕಿ ರಾಮಾಯಣ ಮಾನವ ಸಮುದಾಯಕ್ಕೆ ಬದುಕುವ ನೈತಿಕತೆಯ ಕೈಗನ್ನಡಿಯಾಗಿದೆ. ಮೇರು ಕೃತಿಯನ್ನು ನೀಡಿದ ವಾಲ್ಮೀಕಿ ಅವರ ಆದರ್ಶ ಮೌಲ್ಯಗಳನ್ನು ಪ್ರತಿಯೊಬ್ಬರೂ ಪಾಲನೆ ಮಾಡಿದಾಗ ಮಾತ್ರ ಬದುಕು ಹಸನಾಗಲು ಸಾಧ್ಯ ಇಂದು ವಾಲ್ಮೀಕಿ ಜಯಂತಿ ಸಂಭ್ರಮಿಸಿ ಕುಣಿದು ಕುಪ್ಪಳಿಸಿ. ಆದರೆ, ಮದ್ಯಪಾನ ಮಾಡಬೇಡಿ ಅಹಿತಕರ ಘಟನೆ ನಡೆಯದಂತೆ ಜಯಂತಿ ಆಚರಿಸಿ ವಾಲ್ಮೀಕಿ ಮಹರ್ಷಿಗಳ ಜಯಂತಿ ನೆನಪಿಡುವಂತೆ ನಡೆಸಲು ಕಿವಿಮಾತು ಹೇಳಿದರು.

ಮಹರ್ಷಿ ವಾಲ್ಮೀಕಿ ಅವರ ತತ್ವ ಮತ್ತು ಆದರ್ಶ ಸರ್ವಕಾಲಕ್ಕೂ ದಾರಿದೀಪ ಅದನ್ನು ಎಲ್ಲರೂ ಅನುಸರಿಸಬೇಕು ಪ್ರಸನ್ನಾನಂದಪುರ ಸ್ವಾಮಿಗಳು ಆಗಾಗ ತಾಲೂಕಿನ ಆಗುಹೋಗುಗಳ ಬಗ್ಗೆ ಚರ್ಚಿಸುತ್ತಾರೆ ಎಂದು ಶಾಸಕ ಎಚ್‌ಎಂ ಗಣೇಶ್ ಪ್ರಸಾದ್ ತಿಳಿಸಿದರು. ಮಾಜಿ ಶಾಸಕ ಸಿ ಎಸ್ ನಿರಂಜನ್ ಕುಮಾರ್ ಮಾತನಾಡಿ ವಾಲ್ಮೀಕಿ ಜಯಂತಿಗೆ ಶುಭಕೋರಿದರು.

ಪುರಸಭೆ ಮಾಜಿ ಅಧ್ಯಕ್ಷ ಪಿ ಗಿರೀಶ್, ಮುಖಂಡರಾದ ಎನ್ ಮಲ್ಲೇಶ್, ವೆಂಕಟೇಶ್ ನಾಯಕ, ಪಟ್ಟಾಬಿ, ಗೋವಿಂದ, ಕ್ರೇಜಿ ನಾಗರಾಜು, ಕಣ್ಣಪ್ಪ ಶ್ರೀನಿವಾಸ್, ನಾ ಕುಮಾರ್, ಸುರೇಶ್ ಕಾರ್ಗಳ್ಳಿ, ಶಶಿ ಜೆಎಪ್ ಸಿ, ಮೂರ್ತಿ, ವಿಠಲ್, ರಂಗಸ್ವಾಮಿ, ಸುರೇಶ್ ನಾಯಕ್, ರಾಸ ರಾಜೇಶ್ ಭಾಗಿಯಾಗಿದ್ದರು.

ಕಾರಿನಲ್ಲಿ ತಮಿಳುನಾಡು ಮೂಲದ ವ್ಯಕ್ತಿ ಶವ ಪತ್ತೆ



ಚಾಮರಾಜನಗರ, ನ.23– ನಗರದ ಹೊರವಲಯದಲ್ಲಿರುವ ಬಂಜಾರ ಶಾಲೆ ಹಾಗೂ ಈದ್ಗಾ ಮೈದಾನದ ಬಳಿ ತಮಿಳುನಾಡು ಮೂಲದ ವ್ಯಕ್ತಿಯ ಶವವು ಕಾರಿನಲ್ಲಿ ಪತ್ತೆಯಾಗಿದೆ.

ತಮಿಳುನಾಡಿನ ಈರೋಡ್ ಜಿಲ್ಲೆಯ ಕಾವುಂದ ಪಾಡಿ ಗ್ರಾಮದ ಮಣಿಕಂಠರಾಜೇಶ್ (45) ಮೃತಪಟ್ಟ ವ್ಯಕ್ತಿಯಾಗಿದ್ದು, ಹೃದಯಾಘಾತದಿಂದ ನಿಧನರಾಗಿರಬಹುದೆಂದು ಶಂಕಿಸಲಾಗಿದೆ. ತಮಿಳುನಾಡು ಮೂಲದ ಕಾರೊಂದು ಈದ್ಗಾ ಮೈದಾನ ಬಳಿ ನಿಂತಿದ್ದು, ಕಾರಿನೊಳಗೆ ವ್ಯಕ್ತಿ ಮೃತಪಟ್ಟಿರುವುದನ್ನು ನೋಡಿದ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಪೊಲೀಸರು ಮೃತದೇಹವನ್ನು ಯಡಬೆಟ್ಟದ ಸಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿ, ಮೃತನ ಸ್ವಿಚ್ ಆಫ್ ಆಗಿದ್ದ ಮೊಬೈಲ್ ಅನ್ನು ಚಾರ್ಜ್ ಮಾಡಿ ಮೃತನ ಕಡೆಯವರಿಗೆ ಕರೆ ಮಾಡಿದಾಗ ವಿಳಾಸ ತಿಳಿದುಬಂದಿದೆ ಎಂದು ಪೊಲೀಸರು ಹೇಳಿದ್ದಾರೆ. ವಾರಸುದಾರರು ತಮಿಳುನಾಡಿನಿಂದ ಬರುತ್ತಿದ್ದು, ಮೃತದೇಹವನ್ನು ಸಿಮ್ಸ್ ಶವಾಗಾರದಲ್ಲಿ ಇರಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ವಿದ್ಯುತ್ ಗುತ್ತಿಗೆದಾರರ ಹಿತಕ್ಕಾಗಿ ಆರ್.ಆರ್.ತಂಡ ಬೆಂಬಲಿಸಲು ಮನವಿ

ಚಾಮರಾಜನಗರ, ನ.23–ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ಪಂಚವಾರ್ಷಿಕ ಕೇಂದ್ರ ಸಮಿತಿಗೆ ಡಿ. 14 ರಂದು ನಡೆಯಲಿರುವ ಚುನಾವಣೆ ಯಲ್ಲಿ ಆರ್‌ಆರ್ ತಂಡವನ್ನು ಬೆಂಬಲಿಸಿ ಅವರನ್ನು ಜಯಶೀಲರನ್ನಾಗಿ ಮಾಡು ವಂತೆ ಸಿ.ರಮೇಶ್ ಮನವಿ ಮಾಡಿದರು.



ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಚುನಾವಣೆಯಲ್ಲಿ ಆರ್‌ಆರ್ ತಂಡವನ್ನು ಬೆಂಬಲಿಸುವ ಸಂಬಂಧ ಚುನಾವಣಾ ಪೂರ್ವಭಾವಿ ಸಭೆಯಲ್ಲಿ ಸಿ.ರಮೇಶ್ ಮಾತನಾಡಿದರು.

ನಗರದ ರಾಯಲ್ ಬ್ರದರ್ ಪಾರ್ಟಿ ಹಾಲ್‌ನಲ್ಲಿ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ಜಿಲ್ಲಾ ಸಮಿತಿ ವತಿಯಿಂದ ಪಂಚವಾರ್ಷಿಕ ಕೇಂದ್ರ ಸಮಿತಿಯ ಚುನಾವಣೆ ಅಂಗವಾಗಿ ಆರ್‌ಆರ್ ತಂಡ ವತಿಯಿಂದ ನಡೆದ ಚುನಾವಣಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಂಘದ ಆರ್ಥಿಕ ಸ್ಥಿತಿಗೆ ಸಂಬಂಧಿಸಿದಂತೆ ಇನ್ನೂ ಅಗತ್ಯವಿರುವ ಯೋಜನೆಗಳನ್ನು ರೂಪಿಸಿ ಆರ್ಥಿಕವಾಗಿ ಸಂಘವನ್ನು ಮತ್ತಷ್ಟು ಸದೃಢಗೊಳಿಸಲಾಗುವುದು. ರಾಜ್ಯದಲ್ಲಿರುವ ಎಲ್ಲಾ 31 ಜಿಲ್ಲಾ ಸಮಿತಿಗಳು, ತಾಲೂಕು ಸಮಿತಿಗಳು ಹಾಗೂ ಉಪ ಸಮಿತಿಗಳಿಗೆ ಕಡ್ಡಾಯವಾಗಿ ಸ್ವಂತ ನಿವೇಶನ ಹಾಗೂ ಸ್ವಂತ ಕಟ್ಟಡ ಸೌಲಭ್ಯ ಹೊಂದಲು ಮುಂದಿನ 5 ವರ್ಷಗಳಲ್ಲಿ ಕಾರ್ಯಯೋಜನೆ ರೂಪಿಸಲಾಗುವುದು ಎಂದರು

ಸದಸ್ಯರುಗಳ ಸುರಕ್ಷತೆಗಾಗಿ ಆರೋಗ್ಯ ಸಮಸ್ಯೆಗಳಾದಾಗ ಅಧ್ಯಕ್ಷರ ನಿಧಿಯಿಂದ ನೀಡಲಾಗುತ್ತಿದ್ದ 10 ಸಾವಿರ ಸಹಾಯ ಧನವನ್ನು 15ಸಾವಿರ ರೂಗಳಿಗೆ ಹೆಚ್ಚಿಸಲಾಗುವುದು. ವಿದ್ಯುತ್ ಪರವಾನಗಿ ಪಡೆಯುವವರಿಗೆ ನವೀಕರಣ ಮಾಡಿಸುವವರಿಗೆ ಹಾಗೂ ಸೂಪರ್ ವೈಸರ್ ಮತ್ತು ವೈರ್‌ಮೆನ್ ಲೈಸೆನ್ಸ್ ಎಂಡೋಸೆರ್‌ಂಟ್ ಆಯಾ ಜಿಲ್ಲಾ ಕಛೇರಿಗಳಲ್ಲಿಯೇ ಅಪ್‌ಲೋಡ್ ಮಾಡುವ ವ್ಯವಸ್ಥೆ ಕಲ್ಪಿಸಲಾಗುವುದು. ವಿದ್ಯುತ್ ಗುತ್ತಿಗೆದಾರರು ಸಂಘದ ಪ್ರಗತಿಗಾಗಿ, ಸದಸ್ಯರ ಕಲ್ಯಾಣಕ್ಕಾಗಿ ಆರ್.ಆರ್. ತಂಡವನ್ನು ಗೆಲ್ಲಿಸಬೇಕೆಂದು ಕೋರಿದರು. ಸಭೆಯಲ್ಲಿ ಸಂಘದ ರಾಜ್ಯ ಸಮಿತಿ ಸದಸ್ಯ ತಸ್ಕಿನ್, ಜಿಲ್ಲಾಧ್ಯಕ್ಷ ಜಿ.ಎಂ.ಸುರೇಶ್, ಪ್ರಧಾನ ಕಾರ್ಯದರ್ಶಿ ಭಾನುಪ್ರಕಾಶ್, ಖಜಾಂಚಿ ಸಿದ್ದಾರ್ಥ, ಸಂಘಟನಾ ಕಾರ್ಯದರ್ಶಿ ಸಂಪತ್ ಕುಮಾರ್, ಉಪಾಧ್ಯಕ್ಷ ಅನ್ಸರ್ ಅಲಿಖಾನ್, ತಾಲೂಕು ಅಧ್ಯಕ್ಷ ಮಾರಿಮುತ್ತು, ಎಸ್ ಸಿ, ಎಸ್ ಟಿ ಸಂಘದ ಅಧ್ಯಕ್ಷ ನಾಗರಾಜು, ಕೃಷ್ಣ, ಧರ್ಮವೀರ್, ನಾಗೇಂದ್ರ ಗೌಡ, ರಾಜಶೇಖರ, ಶಶಿಧರ್, ಗೋಪಾಲ್, ಗಣೇಶ, ವೆಂಕಟೇಶ್, ನಾಗರಾಜು, ಖದೀರು, ಲಿಂಗರಾಜು, ಲೋಕೇಶ್, ದೇವೇಗೌಡ ಇತರರು ಭಾಗವಹಿಸಿದ್ದರು.

ಅಂಬೇಡ್ಕರ್ ಭವನಕ್ಕೆ ಸಚಿವ ಮಹದೇವಪ್ಪ ಕೋಟಿ ರೂ. ಬಿಡುಗಡೆ



ರಾಜ್ಯ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷರಾಗಿ ನೇಮಕಗೊಂಡ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರನ್ನು ಬ್ಲಾಕ್ ಕಾಂಗ್ರೆಸ್ ಸನ್ಮಾನಿಸಿತು.

ಕೊಳ್ಳೇಗಾಲ, ನ.23–ಪಟ್ಟಣದಲ್ಲಿ ಅಪೂರ್ಣಗೊಂಡಿರುವ ಅಂಬೇಡ್ಕರ್ ಭವನಕ್ಕೆ ಈವರೆಗೆ ಸಚಿವ ಮಹದೇವಪ್ಪ ಕೋಟಿ ರೂ. ಬಿಡುಗಡೆ ಮಾಡಿದ್ದು, ಉಳಿದ ಅನುದಾನ ಶೀಘ್ರ ಬಿಡುಗಡೆ ಮಾಡಲಿದ್ದಾರೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ಅಂಬೇಡ್ಕರ್ ಭವನದಲ್ಲಿ ಮುದುವರೆದ ಶೌಚಾಲಯ ಕಾಮಗಾರಿಗೆ ಚಾಲನೆ ನೀಡಿ ಮಾತ ನಾಡಿದ ಅವರು, ಹಿಂದಿದ್ದ ಸರ್ಕಾರಗಳು ಈಗಾಗಲೇ ವಿವಿಧ ಸರ್ಕಾರಗಳ ಅಧಿಕಾರಾವಧಿಯಲ್ಲಿ ಸುಮಾರು 4.35ಕೋಟಿ ಅನುದಾನವನ್ನು ನೀಡಿವೆ, ಅದೇ ರೀತಿಯಲ್ಲಿ ಭವನ ಸಂಪೂರ್ಣಕ್ಕಾಗಿ 2.82 ಕೋಟಿ ಅನುದಾನ ಬೇಕಿದೆ. ಲೋಕಸಭೆ ಚುನಾವಣೆಗೂ ಮುನ್ನ ಸಚಿವ ಹೆಚ್.ಸಿ. ಮಹದೇವಪ್ಪ ಅನುದಾನ ಬಿಡುಗಡೆ ಭರವಸೆ ನೀಡಿದಾಗ ಕೇವಲ 25ಲಕ್ಷ ಅನುದಾನ ಬಿಡುಗಡೆ ಮಾಡಿದ್ದರು. ಉಳಿಕೆ ಅನುದಾನ ಬಿಡುಗಡೆ ಮಾಡುವಂತೆ ಸಚಿವರಿಗೆ ಮನವಿ ಮಾಡಿದ್ದರ ಮೇರೆಗೆ ಈಗ ಬಿಡು ಗಡೆಯಾಗಿರುವ ಕೋಟಿ ರೂ. ಅನುದಾನದಲ್ಲಿ ಅಗತ್ಯ ಪೀಠೋಪಕರಣ ಸಾಮಗ್ರಿ ಖರೀದಿ ಮಾಡಲಾಗುವುದು ಎಂದು ಶಾಸಕರು ತಿಳಿಸಿದರು.

ಸಮಾಜ ಕಲ್ಯಾಣಾಧಿಕಾರಿ ಕೇಶವಮೂರ್ತಿ, ಕೆಆರ್‌ಐಡಿಎಲ್ ಎಂಜಿನಿಯರ್ ಚಿಕ್ಕಲಿಂಗಯ್ಯ, ಅಂಬೇಡ್ಕರ್ ಸ್ಮಾರಕ ಸಂಘದ ಆನಂದ ಮೂರ್ತಿ, ನಗರಸಭೆ ಮಾಜಿ ಅಧ್ಯಕ್ಷೆ ರೇಖಾ ರಮೇಶ್, ಮಾಜಿ ಅಧ್ಯಕ್ಷ ರಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಭೀಮನಗರದ ಮುಖಂಡರು, ಯಜಮಾನರು ಇದ್ದರು.

ಚೊಚ್ಚಲ ಅಂಧರ ಟಿ20 ವಿಶ್ವಕಪ್ ಗೆದ್ದ ಮಹಿಳಾ ಕ್ರಿಕೆಟ್ ತಂಡ



ಭಾರತ ಮಹಿಳಾ ಕ್ರಿಕೆಟ್ ತಂಡ ಮೊದಲ ಬಾರಿಗೆ ಚೊಚ್ಚಲ ಅಂಧರ ಟಿ20 ವಿಶ್ವಕಪ್ ಗೆದ್ದು ದಾಖಲೆ ನಿರ್ಮಿಸಿದ ಖುಷಿಯಲ್ಲಿ ಆಟಗಾರರು.

ಕೊಲಂಬೋ, ನ.23– ಭಾರತ ಮಹಿಳಾ ಕ್ರಿಕೆಟ್ ತಂಡ ಮತ್ತೊಂದು ಇತಿಹಾಸ ನಿರ್ಮಿಸಿದ್ದು, ಇದೇ ಮೊದಲ ಬಾರಿಗೆ ಚೊಚ್ಚಲ ಅಂಧರ ಟಿ20 ವಿಶ್ವಕಪ್ ಗೆದ್ದು ದಾಖಲೆ ನಿರ್ಮಿಸಿದೆ.

ಕೆಲ ದಿನಗಳ ಹಿಂದಷ್ಟೇ ಭಾರತ ಮಹಿಳಾ ಕ್ರಿಕೆಟ್ ತಂಡ ಏಕದಿನ ವಿಶ್ವಕಪ್ ಗೆದ್ದಿತ್ತು. ಈ ಖುಷಿ ಬೆನ್ನಲ್ಲೇ ಭಾರತ ಮಹಿಳಾ ಅಂಧರ ಕ್ರಿಕೆಟ್ ತಂಡ ಕೂಡ ತನ್ನ ಚೊಚ್ಚಲ ಟಿ20 ವಿಶ್ವಕಪ್ ಗೆದ್ದು ಇತಿಹಾಸ ನಿರ್ಮಿಸಿದೆ. ಕೊಲಂಬೊದಲ್ಲಿ ಭಾನುವಾರ ನಡೆದ ಮೊದಲ ಅಂಧ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡ ನೇಪಾಳವನ್ನು ಏಳು ವಿಕೆಟ್‌ಗಳಿಂದ ಸೋಲಿಸಿ ಪ್ರಶಸ್ತಿ ಗೆದ್ದಿದೆ.

ಶ್ರೀಲಂಕಾದ ಕೊಲಂಬೊದ ಪಿ. ಸರವನಮುತ್ತು ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ನೇಪಾಳ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ನೇಪಾಳ ತಂಡವನ್ನು ಮಣಿಸುವ ಮೂಲಕ ಭಾರತ ಅಂಧ ಮಹಿಳಾ ಕ್ರಿಕೆಟ್ ತಂಡ ಟ್ರೋಫಿಗೆ ಮುತ್ತಿಟ್ಟಿದೆ. ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದ ಟೀಮ್ ಇಂಡಿಯಾ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟಿಂಗ್ ಮಾಡಿದ ನೇಪಾಳ ತಂಡವು 20 ಓವರ್‌ಗಳಲ್ಲಿ ಐದು ವಿಕೆಟ್ ನಷ್ಟಕ್ಕೆ 114 ರನ್‌ಗಳಿಸಿತು.

ಈ ಗುರಿಯನ್ನು ಬೆನ್ನತ್ತಿದ ಭಾರತ ಮಹಿಳಾ ತಂಡವು 12 ಓವರ್‌ಗಳಲ್ಲಿ ಮೂರು ವಿಕೆಟ್ ನಷ್ಟಕ್ಕೆ 117 ರನ್‌ಗಳಿಸಿ ಭರ್ಜರಿ ಜಯ ಸಾಧಿಸಿತು. ಈ ಮೂಲಕ ಭಾರತ ಮಹಿಳಾ ತಂಡವು ಚೊಚ್ಚಲ ಬಾರಿಗೆ ಅಂಧರ ಟಿ20 ವಿಶ್ವಕಪ್ ಅನ್ನು ಮುಡಿಗೇರಿಸಿಕೊಂಡಿದೆ.

ಈ ವಿಶೇಷ ಟೂರ್ನಿಯನ್ನು ಶ್ರೀಲಂಕಾ ಮತ್ತು ಭಾರತ ಜಂಟಿಯಾಗಿ ಆಯೋಜಿಸಿದ್ದವು. ಅಂಧರ ಕ್ರಿಕೆಟ್ ಅನ್ನು ಬಿಳಿ ಪ್ಲಾಸ್ಟಿಕ್ ಚೆಂಡಿನೊಂದಿಗೆ ಆಡಲಾಗುತ್ತದೆ. ಅದು ಉರುಳುವಾಗ ಗುಡುಗುವ ಬಾಲ್ ಬೇರಿಂಗ್‌ಗಳಿಂದ ತುಂಬಿರುತ್ತದೆ. ಇದು ಆಟಗಾರರಿಗೆ ಕೇಳಲು ಅನುವು ಮಾಡಿಕೊಡುತ್ತದೆ. ಈ ಶಬ್ಧ ಕೇಳಿಕೊಂಡು ಬ್ಯಾಟರ್‌ಗಳು ಬ್ಯಾಟ್ ಬೀಸುತ್ತಾರೆ.

ಇಂದು ನ್ಯಾ. ಸೂರ್ಯಕಾಂತ್ ಸಿಜೆಐ ಆಗಿ ಪ್ರಮಾಣ

ನವದೆಹಲಿ, ನ.23– ಸುಪ್ರೀಂ ಕೋರ್ಟ್‌ನ 53ನೇ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ನ್ಯಾಯಮೂರ್ತಿ ಸೂರ್ಯಕಾಂತ್ ಅವರು ನಾಳೆ (ಸೋಮವಾರ) ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.



ನ್ಯಾಯಮೂರ್ತಿ ಸೂರ್ಯಕಾಂತ್ ಅವರು, ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದು, ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ, ಪೆಗಾಸಸ್ ಸ್ಪೈವೇರ್ ಪ್ರಕರಣ ಸೇರಿದಂತೆ ಹಲವು ಮಹತ್ವದ ತೀರ್ಪುಗಳು ಮತ್ತು ಆದೇಶಗಳ ಭಾಗವಾಗಿದ್ದಾರೆ.

ಇಂದು ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ನಿವೃತ್ತರಾಗಲಿದ್ದಾರೆ. ಅವರ ಉತ್ತರಾಧಿಕಾರಿಯಾಗಿ ಸೂರ್ಯಕಾಂತ್ ಅವರನ್ನು ನೇಮಕ ಮಾಡುವಂತೆ ಗವಾಯಿ ಅವರು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ನ್ಯಾಯಮೂರ್ತಿ ಕಾಂತ್ ಅವರನ್ನು ಮುಂದಿನ ಸಿಜೆಐ ಆಗಿ ಅಕ್ಟೋಬರ್ 30 ರಂದು ನೇಮಕ ಮಾಡಲಾಯಿತು.

ಸುಪ್ರೀಂಕೋರ್ಟ್‌ನ ನ್ಯಾಯ ಮೂರ್ತಿಯಾಗಿ ನ್ಯಾ. ಸೂರ್ಯಕಾಂತ್ ಅವರು 2019ರ ಮೇ 24ರಂದು ಬಡ್ತಿ ಪಡೆದಿದ್ದರು. ಇವರು 2027ರ ಫೆ. 9ರಂದು ನಿವೃತ್ತಿಯಾಗಲಿದ್ದಾರೆ. ಇವರು ಸುಮಾರು 15 ತಿಂಗಳವರೆಗೆ ಸಿಜೆಐ ಆಗಿ ಕಾರ್ಯನಿರ್ವಹಿಸಲಿದ್ದಾರೆ.

ಚಿನ್ನಮ್ಮ(ಗುಡ್ಡಮ್ಮ) ನಿಧನ

ಮೈಸೂರು, ನ.23– ಮೈಸೂರಿನ ಬಿಎಂಶ್ರೀ ನಗರದ ಚಿನ್ನಮ್ಮ(ಗುಡ್ಡಮ್ಮ) ಅವರು ಶನಿವಾರ ರಾತ್ರಿ ನಿಧನ ಹೊಂದಿದರು.



ಅವರಿಗೆ 70 ವರ್ಷ ವಯಸ್ಸಾಗಿತ್ತು. ಮೃತರು ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದಿದ್ದಾರೆ. ಇವರು ಬಿಎಂಶ್ರೀ ನಗರದ ರೇಣುಕಾ ಯಲ್ಲಮ್ಮ ಗೆಳೆಯರ ಬಳಗದ ಗೌರವಾಧ್ಯಕ್ಷರೂ ಆಗಿದ್ದರು. ಮೃತರ ಅಂತ್ಯಕ್ರಿಯೆ ಭಾನುವಾರ ಜೋಡಿ ತೆಂಗಿನ ಮರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಪುಟ್ಟಮ್ಮ



ಮೈಸೂರು: ಮೈಸೂರಿನ ಹಿನಕಲ್ ನಿವಾಸಿ ಪುಟ್ಟಮ್ಮ(74) ಅವರು ಭಾನುವಾರ ನಿಧನರಾದರು. ಮೃತರು ತಾಪಂ ಮಾಜಿ ಸದಸ್ಯ ಚಂದ್ರು ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯ ಕ್ರಿಯೆಯು ನ.24ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಹಿನಕಲ್ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಮರಿಗಳನ್ನು ರಕ್ಷಿಸಿಕೊಳ್ಳಲು ಚಿರತೆಯೊಂದಿಗೆ ಹೋರಾಡಿ ಪ್ರಾಣ ಬಿಟ್ಟ ತಾಯಿ ಬೆಕ್ಕು

ತಾಯಿ ಬೆಕ್ಕನ್ನು ಕೊಂದು, ಮರಿಗಳನ್ನು ತಿಂದು ಹೋದ ಚಿರತೆ

ಹೆಚ್.ಡಿ.ಕೋಟೆ: ತಾಯಿ ಬೆಕ್ಕೊಂದು ತನ್ನ ಮರಿಗಳನ್ನು ಉಳಿಸಿಕೊಳ್ಳಲು ಚಿರತೆಯೊಂದಿಗೆ ಹೋರಾಡಿ ಪ್ರಾಣ ಬಿಟ್ಟಿರುವ ಘಟನೆ ತಾಲೂಕಿನ ಬೆಳಗನಹಳ್ಳಿ ಕಾವಲ್ ತೋಟದಲ್ಲಿ ಸಂಭವಿಸಿದ್ದು, ಹೋರಾಟದ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಕೊನೆಗೆ ಕಾದಾಟದಲ್ಲಿ ಚಿರತೆಯು ತೋಟದ ಮನೆಯಲ್ಲಿದ್ದ ತಾಯಿ ಬೆಕ್ಕನ್ನು ಕೊಂದು ಹಾಕಿ ಐದು ಮರಿಗಳನ್ನು ತಿಂದು ಪರಾರಿಯಾಗಿದೆ.

ತಾಲೂಕಿನ ಬೆಳಗನಹಳ್ಳಿ ಕಾವಲ್ ನಿವಾಸಿ ಸೋಮಶೇಖರ್ ಎಂಬುವರ ತೋಟದ ಮನೆಯಲ್ಲಿ ಸಾಕಿದ್ದ ಬೆಕ್ಕೊಂದು ಮನೆಯ ತಾರಸಿ ಮೇಲೆ ಐದು ಮರಿಗಳಿಗೆ ಜನ್ಮ ನೀಡಿ ಅವುಗಳನ್ನು ನೋಡಿ ಕೊಂಡಿತ್ತು. ಶನಿವಾರ ರಾತ್ರಿ ಚಿರತೆಯೊಂದು ಬೆಕ್ಕಿನ ಮೇಲೆ ದಾಳಿ ನಡೆಸಿದೆ. ಈ ವೇಳೆ ಬೆಕ್ಕು ತನ್ನ ಮರಿಗಳನ್ನು ಕಾಪಾಡಿಕೊಳ್ಳಲು ತೀವ್ರ ಹೋರಾಟ ನಡೆಸಿದೆ. ಕೊನೆಗೆ ಬಲಿಷ್ಠ ಚಿರ ತೆಯ ದಾಳಿಯ ಮುಂದೆ ಸೆಣಸಾಡಿ ಸಾವ ನ್ನಪ್ಪಿದೆ. ಬೆಕ್ಕಿನ ಈ ಚೀರಾಟ ಕೇಳಿ ಗಾಬರಿ ಗೊಂಡು ಮನೆಯವರು ಮನೆಯ ಲೈಟ್‌ಗಳನ್ನು ಹಾಕಿ ತಾರಸಿ ಮೇಲೆ ಶಬ್ದ ಮಾಡುತ್ತಾ ಹೋಗಿ ನೋಡಿದಾಗ ತಾಯಿ ಬೆಕ್ಕನ್ನು ಚಿರತೆ ಕೊಂದು ಹಾಕಿ ಐದು ಬೆಕ್ಕಿನ ಮರಿಗಳನ್ನ ತಿಂದು ಹಾಕಿ ಪರಾರಿಯಾಗಿರುವುದು ಕಂಡು ಬಂದಿತು.

ಬಳಿಕ ಸೋಮಶೇಖರ್ ಅವರು ಮನೆಯಲ್ಲಿ ಅಳವಡಿಸಿರುವ ತಮ್ಮ ಸಿಸಿ ಕ್ಯಾಮೆರಾವನ್ನು ಪರಿಶೀಲಿಸಿದಾಗ ಚಿರತೆ ದಾಳಿ ಮಾಡಿದ್ದು, ಬೆಕ್ಕು ತನ್ನ ಮರಿಗಳನ್ನು ಉಳಿಸಿಕೊಳ್ಳಲು ಚಿರತೆ ಜೊತೆ ಹೋರಾಟ ನಡೆಸಿರುವುದು ಕಂಡು ಬಂದಿದೆ. ಚಿರತೆ ತಾಯಿ ಬೆಕ್ಕನ್ನು ಕೊಂದು ಐದು ಮರಿಗಳನ್ನು ತಿಂದು ಹೋಗಿರುವುದು ಕಂಡು ಬಂದಿತು.

ಚಿರತೆ ದಾಳಿಯ ವಿಷಯವನ್ನು ಅರಣ್ಯ ಇಲಾಖೆಯವರಿಗೆ ತಿಳಿಸಲಾಗಿದ್ದು ಕಾರ್ಯಾಚರಣೆ ಆರಂಭಿಸಿದ ಅರಣ್ಯ ಸಿಬ್ಬಂದಿಗಳು ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಿಸಿ ಹೆಜ್ಜೆ ಗುರುತುಗಳ ಆಧಾರದ ಮೇಲೆ ಚಿರತೆ ಸೆರೆಗೆ ಬೋನ್ ಇರಿಸಿದ್ದಾರೆ. ಎಚ್.ಡಿ. ಕೋಟೆ ಪ್ರಾದೇಶಿಕ ವಲಯದ ವಲಯ ಅರಣ್ಯಾಧಿಕಾರಿ ರುಕಿಯಾಬೇಗ್ ಈ ವಿಷಯ ತಿಳಿಸಿದ್ದಾರೆ.




ಮನೆಯ ತಾರಸಿ ಮೇಲೆ ಚಿರತೆ ತೆರಳುತ್ತಿರುವ ದೃಶ್ಯ, ಚಿರತೆ ಸೆರೆ ಹಿಡಿಯಲು ಅರಣ್ಯ ಇಲಾಖೆಯವರು ಬೋನ್ ಇಟ್ಟಿರುವುದು.

ಕಾರುಗಳ ಮುಖಾಮುಖಿ ಡಿಕ್ಕಿ: ಓರ್ವ ಸಾವು, ಏಳು ಮಂದಿಗೆ ಗಾಯ

ತಿ.ನರಸೀಪುರ-ಮೈಸೂರು ಮುಖ್ಯ ರಸ್ತೆಯಲ್ಲಿ ದುರಂತ

ತಿ.ನರಸೀಪುರ, ನ.23– ಎರಡು ಕಾರುಗಳ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಿಂದ ಓರ್ವ ಸಾವನ್ನಪ್ಪಿ, ಏಳು ಮಂದಿ ಗಾಯಗೊಂಡಿರುವ ಘಟನೆ ಮೈಸೂರು–ತಿ.ನರಸೀಪುರ ಮುಖ್ಯ ರಸ್ತೆಯ ಎಂ.ಸಿ.ಹುಂಡಿ ಬಳಿ ಭಾನುವಾರ ಸಂಭವಿಸಿದೆ.


ರವಿಕುಮಾರ್

ತಾಲೂಕಿನ ಕೆಂಪಯ್ಯನ ಹುಂಡಿ ಗ್ರಾಮದ ರವಿ ಕುಮಾರ್(65) ಎಂಬುವರೇ ದುರಂತದಲ್ಲಿ ಸಾವನ್ನಪ್ಪಿದವರಾಗಿದ್ದಾರೆ. ತೀವ್ರವಾಗಿ ಗಾಯಗೊಂಡಿರುವ ಮೃತ ರವಿಕುಮಾರ್ ಅವರ ಅಕ್ಕ ಶಾರದಮ್ಮ ಮತ್ತು ಪತ್ನಿ ಸವಿತಾ ಸೇರಿದಂತೆ 7 ಮಂದಿಯನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ತಾಲೂಕಿನ ಮರಳು ಗುತ್ತಿಗೆದಾರ ಕೆಂಪಯ್ಯನ ಹುಂಡಿ ಗ್ರಾಮದ ಕೆ.ಅರುಣ್ ಕುಮಾರ್ ಅವರ ಭಾವನವರಾದ ರವಿಕುಮಾರ್ ವ್ಯವಸಾಯ ಮಾಡಿಕೊಂಡಿದ್ದು, ಭಾನುವಾರ ಬೆಳಿಗ್ಗೆ ಕೆ.ಆರ್. ನಗರದಲ್ಲಿ ನಡೆಯುತ್ತಿದ್ದ ಮದುವೆಗೆ ತಮ್ಮ ಪತ್ನಿ ಸವಿತಾ ಹಾಗೂ ಅಕ್ಕ ಶಾರದಮ್ಮ ಅವರೊಂದಿಗೆ ಸ್ವಿಫ್ಟ್ ಕಾರಿ(ಕೆಎ 02 ಎಂಸಿ 7192)ನಲ್ಲಿ ತೆರಳಿದ್ದರು.

ಮದುವೆ ಮುಗಿಸಿಕೊಂಡು ಊರಿಗೆ ಹಿಂತಿರುಗುತ್ತಿದ್ದ ವೇಳೆ ಎಂ.ಸಿ.ಹುಂಡಿ ಬಳಿ ಎದುರಿಗೆ ಬಂದ ಮಾರುತಿ ಈಕೋ ಕಾರು (ಕೆಎ–09 ಎಂಹೆಚ್ 0914) ಡಿಕ್ಕಿ ಹೊಡೆದಿದ್ದರಿಂದ ಈ ದುರಂತ ಸಂಭವಿಸಿದೆ. ಈ ಕಾರಿನಲ್ಲಿದ್ದವರು ಮೈಸೂರಿನ ಬೆಲವತ್ತ ಮಂಟಯವರಾಗಿದ್ದು, ಚಾಮರಾಜನಗರದಲ್ಲಿ ನಡೆಯುತ್ತಿದ್ದ ಸೀಮಂತ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಿಂತಿರುಗುತ್ತಿದ್ದರು ಎನ್ನಲಾಗಿದೆ. ಕಾರಿನಲ್ಲಿದ್ದ ಐದು ಮಂದಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಅಪಘಾತದಿಂದ ಇಡೀ ರಸ್ತೆ ಬಂದ್ ಆಗಿದ್ದು, ಎರಡು ಕಡೆಯೂ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಕೆಲ ಕಾಲ ಸಂಚಾರ ಅಸ್ತವ್ಯಸ್ತಗೊಂಡಿತ್ತು. ವಿಷಯ ತಿಳಿದ ವರುಣ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಲೋಕೇಶ್, ತಕ್ಷಣ ಸ್ಥಳಕ್ಕೆ ತೆರಳಿ, ಸಿಬ್ಬಂದಿಗಳ ಮತ್ತು ಸಾರ್ವಜನಿಕರ ಸಹಾಯದಿಂದ ಕಾರುಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಲ್ಲದೆ, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲು ಮಾಡಿದರು.

ಸೋಮವಾರ ಮಧ್ಯಾಹ್ನ 12 ಗಂಟೆಗೆ ಕೆಂಪಯ್ಯನ ಹುಂಡಿ ಗ್ರಾಮದಲ್ಲಿ ಮೃತ ರವಿಕುಮಾರ್ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಳಮೀಸಲಾತಿಯಲ್ಲಿ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಶೇ.2ರಷ್ಟು ಮೀಸಲಾತಿ ಕೋರಿ ಸಿಎಂಗೆ ದಸಂಸ ಮನವಿ



ಹುಣಸೂರು, ನ.23– ಪರಿಶಿಷ್ಟ ಜಾತಿಗೆ ಸೇರಿದ ಅಲೆಮಾರಿ ಸಮುದಾಯಗಳಿಗೆ ಒಳ ಮೀಸಲಾತಿಯಲ್ಲಿ ಪ್ರತ್ಯೇಕವಾಗಿ ಶೇ.2 ರಷ್ಟು ಮೀಸಲಾತಿಯನ್ನು ಕಲ್ಪಿಸಿಕೊಡುವಂತೆ ಮೈಸೂರು ಜಿಲ್ಲಾ ದಸಂಸದ ವತಿಯಿಂದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಮೈಸೂರಿನಲ್ಲಿ ಮನವಿ ಸಲ್ಲಿಸಲಾಯಿತು.

ಮೈಸೂರಿನ ಶಾರದಾದೇವಿ ನಗರದಲ್ಲಿರುವ ಮುಖ್ಯಮಂತ್ರಿಗಳ ನಿವಾಸದ ಹತ್ತಿರ ಮನವಿ ಸಲ್ಲಿಸಲು ಸರತಿ ಸಾಲಿನಲ್ಲಿ ನಿಂತಿದ್ದ ದಸಂಸದ ನಿಂಗರಾಜ್ ಮಲ್ಲಾಡಿ ಮತ್ತು ಮುಖಂಡರನ್ನು ಮುಖ್ಯಮಂತ್ರಿಗಳು ಗಮನಿಸಿ ಸಂಘದ ಹೋರಾಟದ ಬಗ್ಗೆ ವಿಚಾರಿಸಿ ಮನವಿಯನ್ನು ಆಲಿಸಿದರು.

ಈ ಸಂದರ್ಭದಲ್ಲಿ ದಸಂಸದ ನಿಂಗರಾಜ್ ಮಲ್ಲಾಡಿ ಮಾತನಾಡಿ, ಪರಿಶಿಷ್ಟರಿಗೆ ಒಳ ಮೀಸಲಾತಿಯನ್ನು ತಾವು ತಂದಿರುವುದು ಒಂದು ಐತಿಹಾಸಿಕ ನಿರ್ಧಾರವಾಗಿದೆ. ಇದರಿಂದ ಪರಿಶಿಷ್ಟರಲ್ಲೇ ಇರುವ ಒಳಜಾತಿಗಳಲ್ಲಿ ಇದ್ದ ಭಿನ್ನಾಭಿಪ್ರಾಯ ಶಮನವಾಗಿದೆ ಎಂದರು. ಪರಿಶಿಷ್ಟ ಜಾತಿಗೆ ಸೇರಿದ ನಿರ್ಗತಿಕ ಅಲೆಮಾರಿ ಸಮುದಾಯಗಳಾದ ಹಂದಿಜೋಗಿ, ದೊಂಬರ, ಸುಡುಗಾಡು ಸಿದ್ಧ, ಚನ್ನದಾಸ, ಬೈರ, ಕೊರಮ ಮುಂತಾದ ಜಾತಿಗಳಿಗೆ ಒಳ ಮೀಸಲಾತಿ ಶೇ.2 ರಷ್ಟು ಮೀಸಲಾತಿಯನ್ನು ನೀಡುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ದಸಂಸದ ಕೆ. ನಂಜಪ್ಪ ಬಸವನಗುಡಿ, ಅಲೆಮಾರಿ ಸಮುದಾಯಗಳ ಮುಖಂಡರಾದ ಏಕಲವ್ಯ, ನಗರದ ವೆಂಕಟೇಶ, ವೈ ಕುಮಾರ, ಜೋಗಿ ನಾರಾಯಣಪ್ಪ, ಮಂಜುನಾಥ, ಲಿಂಗೇಶ ಮುಂತಾದವರು ಹಾಜರಿದ್ದರು.

ಮಠದ ಅಭಿವೃದ್ಧಿಗೆ ಶ್ರಮಿಸುತ್ತಿದ್ದ ಮಲ್ಲನಮೂಲೆ ಶ್ರೀಗಳು

ಭಕ್ತಿ ನೆನಪು ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಗಳ ಸ್ಮರಣೆ

ನಂಜನಗೂಡು, ನ.23– ಕಾಯಕ ಹಾಗೂ ದಾಸೋಹದ ತತ್ವಗಳನ್ನು ತಮ್ಮ ಆಚರಣೆಯಲ್ಲಿ ಅಳವಡಿಸಿಕೊಂಡಿದ್ದ ಮಲ್ಲನಮೂಲೆ ಶ್ರೀ ಚೆನ್ನಬಸವಸ್ವಾಮೀಜಿ ಭಕ್ತರ ಆಶೋತ್ತರಗಳಿಗೆ ಪೂರಕವಾಗಿ ಸ್ಪಂದಿಸುವುದರ ಜೊತೆಗೆ ಮಠದ ಅಭಿವೃದ್ಧಿಯಲ್ಲೂ ಮಹತ್ವದ ಪಾತ್ರ ವಹಿಸಿದ್ದರು ಎಂದು ಸುತ್ತೂರು ವೀರಸಿಂಹಾಸನಾ ಮಹಾಸಂಸ್ಥಾನ ಮಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಹಾಗೂ ವಿವಿಧ ಸಂಘಸಂಸ್ಥೆಗಳಿಂದ ಆಯೋಜಿಸಿದ್ದ ಶ್ರೀ ಮಲ್ಲನಮೂಲೆ ಶ್ರೀ ಚೆನ್ನಬಸವಸ್ವಾಮೀಜಿ ಭಕ್ತಿ ನೆನಪು ಸಮಾರಂಭದಲ್ಲಿ ಮಾತನಾಡಿದರು.

ಜಾತಿ,ಮತ ಹಾಗೂ ಧರ್ಮಾತೀತವಾಗಿ ಭಕ್ತರನ್ನು ಹೊಂದಿದ್ದ ಚೆನ್ನಬಸವಸ್ವಾಮೀಜಿಯಾವುದೇ ತಪ್ಪುಗಳು ಕಂಡು ಬಂದಾಗ ನಿಷ್ಠುರತೆಯಿಂದ ಎಚ್ಚರಿಸುತ್ತಿದ್ದರು. ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಸ್ವಾಮೀಜಿ ಕಾರ್ತೀಕ ಮಾಸದ ಮೂರನೇ ಸೋಮವಾರವೇ ದೇಹಾಂತ್ಯ ಮಾಡುವ ಇಂಗಿತ ಹೊಂದಿದ್ದು, ಇದನ್ನು ಆಪ್ತರ ಜೊತೆ ಹಂಚಿಕೊಂಡಿದ್ದರು. ಹೀಗಾಗಿ ಅವರು ನಿಶ್ಚಿತ ಸಮಯದಲ್ಲೇ ಲಿಂಗೈಕ್ಯರಾಗುವ ಮೂಲಕ ತಮ್ಮ ಆಶಯದಂತೆ ನಡೆದುಕೊಂಡಿದ್ದಾರೆ. ಇನ್ನು ಶ್ರೀ ಗುರುಕಂಬಳೀಶ್ವರ ಮಠದ ನೂತನ ಪೀಠಾಧಿಪತಿಯಾಗಲಿರುವ ಕಿರಿಯ ಶ್ರೀಗಳಿಗೆ ಸಮಾಜದ ಎಲ್ಲರ ಸಹಕಾರ ಹಾಗೂ ಬೆಂಬಲ ಅಗತ್ಯ ಎಂದರು.


ಶ್ರೀ ಮಲ್ಲನಮೂಲೆ ಶ್ರೀಗಳ ಭಕ್ತಿ ನೆನಪು ಕಾರ್ಯಕ್ರಮ ಉದ್ಘಾಟಿಸುತ್ತಿರುವ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ.

ನುಡಿನಮನ ಸಲ್ಲಿಸಿ ಮಾತನಾಡಿದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸದಾಶಿವಮೂರ್ತಿ ಮಲ್ಲನಮೂಲೆ ಸ್ವಾಮೀಜಿಯವರು ತಮ್ಮ ಜೀವನ ಪರ್ಯಂತ ಸಮಾಜದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವ ಮೂಲಕ ಬದುಕಿನಲ್ಲಿ ಸಾರ್ಥಕತೆ ಕಂಡುಕೊಂಡಿದ್ದಾರೆ ಎಂದು ಹೇಳಿದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ ಮೈಸೂರು ಮತ್ತು ಚಾಮರಾಜನಗರ ಪ್ರಾಂತ್ಯದಲ್ಲಿ ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿದ್ದ ಮಲ್ಲನಮೂಲೆ ಶ್ರೀ ಚೆನ್ನಬಸವ ಸ್ವಾಮೀಜಿಯವರು ಭೌತಿಕವಾಗಿ ಮರೆಯಾಗಿದ್ದರೂ ಅವರ ಸರಳ ಜೀವನ ಶೈಲಿ ಹಾಗೂ ಮಠದಲ್ಲಿನ ದಾಸೋಹ ಪದ್ಧತಿ ಮತ್ತು ಸ್ವಾಭಿಮಾನದ ಸಂದೇಶಗಳ ಮೂಲಕ ಭಕ್ತರ ಮನದಲ್ಲಿ ಸದಾ ಕಾಲದಲ್ಲೂ ಉಳಿಯಲಿದ್ದಾರೆ ಎಂದು ಹೇಳಿದರು.

ಸಭೆಯನ್ನುದ್ದೇಶಿಸಿ ದೇವನೂರು ಶ್ರೀ ಗುರು ಮಲ್ಲೇಶ್ವರ ಮಠಾಧ್ಯಕ್ಷ ಮಹಾಂತಸ್ವಾಮಿಜಿ, ಹುಲ್ಲಹಳ್ಳಿ ವಿರಕ್ತಮಠಾಧ್ಯಕ್ಷ ಶ್ರೀ ಚೆನ್ನಮಲ್ಲ ದೇಶಿಕೇಂದ್ರಸ್ವಾಮೀಜಿ, ಶಿರಮಳ್ಳಿ ಮಠಾಧ್ಯಕ್ಷ ಇಮ್ಮಡಿ ಮುರುಗಿ ಸ್ವಾಮೀಜಿ, ನಾಗರಾಜೇಂದ್ರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಸಿಂಧುವಳ್ಳಿ ಎಸ್.ಎಂ.ಕೆಂಪಣ್ಣ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ ಮಾತನಾಡಿದರು.

ಸಮಾರಂಭದಲ್ಲಿ ಮಲ್ಲನಮೂಲೆಯ ನಿಯೋಜಿತ ಪೀಠಾಧ್ಯಕ್ಷ ಶ್ರೀ ಇಮ್ಮಡಿ ಸಿದ್ಧಲಿಂಗಸ್ವಾಮೀಜಿ, ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ಜಿಪಂ ಮಾಜಿ ಸದಸ್ಯರಾದ ಮಂಗಳಾ ಸೋಮಶೇಖರ್, ಗುರುಸ್ವಾಮಿ, ಮುಖಂಡರಾದ ಶಿವಪ್ಪದೇವರು, ಮಹೇಶ್, ಬಿ.ಎಸ್. ಮಹದೇವಪ್ಪ, ಶಿವರುದ್ರ, ಗುರುಮಲ್ಲಪ್ಪ, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ಅಖಿಲ ಭಾರತ ವೀರಶೈವ ಮಹಾಸಭಾ ಯುವ ಅಧ್ಯಕ್ಷ ಮಲ್ಕುಂಡಿ ಮಹದೇವಸ್ವಾಮಿ, ನಂದಿನಿ, ಕೋಮಲ, ಮಹದೇವಪ್ರಸಾದ್, ಮೊದಲಾದವರು ಭಾಗವಹಿಸಿದ್ದರು.

ಸರಗೂರಲ್ಲಿ ಜೆಡಿಎಸ್ ಬೆಳ್ಳಿ ಮಹೋತ್ಸವ ಆಚರಣೆ

ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿ ಶೀಘ್ರ ಗುಣಮುಖರಾಗುವಂತೆ ಹಾರೈಕೆ

ಸರಗೂರು: ಜೆಡಿಎಸ್ ಪಕ್ಷದ ರಜತ ಮಹೋತ್ಸವ ಅಂಗವಾಗಿ ಸಮುದಾಯ ಆರೋಗ್ಯ ಕೇಂದ್ರ ಮತ್ತು ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸಿ ಶೀಘ್ರ ಗುಣಮುಖರಾಗುವಂತೆ ಹಾರೈಸಲಾಯಿತು.

ಈ ವೇಳೆ ಜೆಡಿಎಸ್ ಮುಖಂಡ ಕೆ.ಕೃಷ್ಣನಾಯಕ, ಮಾತನಾಡಿ ಮಾಜಿ ಪ್ರಧಾನಿ, ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಗೂ ಪಕ್ಷದ ಎಲ್ಲಾ ನಾಯಕರು ರಾಜ್ಯದಲ್ಲಿ ಪಕ್ಷವನ್ನು ಸಂಘಟಿಸಿ ಬಲಗೊಳಿಸುತ್ತಿದ್ದಾರೆ ಎಂದರು.


ಜೆಡಿಎಸ್ ಪಕ್ಷದ ರಜತ ಮಹೋತ್ಸವ ಅಂಗವಾಗಿ ಸರಗೂರಿನ ಸಮುದಾಯ ಆರೋಗ್ಯ ಕೇಂದ್ರ ಮತ್ತು ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸಿ ಶೀಘ್ರ ಗುಣಮುಖ ರಾಗುವಂತೆ ಹಾರೈಸಲಾಯಿತು.

ಜೆಡಿಎಸ್ ಪಕ್ಷ ರೈತರ ಪರವಾಗಿದ್ದು, ಜನರು ಬದಲಾವಣೆ ಬಯಸಿದ್ದಾರೆ. ಯುವ ಸಮುದಾಯ ಪಕ್ಷ ಸಂಘಟನೆಗೆ ಮುಂದಾಗಿರುವುದು ಬಿಹಾರದ ಮಾದರಿ 2028ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಅಧಿಕಾರ ಪಡೆಯುವುದು ಖಚಿತವೆಂದು ತಿಳಿಸಿದರು.

ತಾಲೂಕಿನ ಸ್ಥಳೀಯ ಸಮಸ್ಯೆಗಳು ದಿನೇ ದಿನೆ ಹೆಚ್ಚಾಗುತ್ತಿದೆ, ಕಾಂಗ್ರೆಸ್ ಪಕ್ಷದ ಅಧಿಕಾರದಲ್ಲಿ ಚುನಾವಣಾ ದಿನಾಂಕಗಳನ್ನು ತಾರತಮ್ಯ ಮಾಡುವ ಅಭ್ಯಾಸ ಮುಂದುವರಿಯುತ್ತಿದೆ, ಹುಲಿ ದಾಳಿಯಲ್ಲಿ ಮೃತರಾದ ಕುಟುಂಬಗಳಿಗೆ ಸರಿಯಾದ ರಕ್ಷಣೆ ಇಲ್ಲದಿರುವುದು ಹಾಗೂ ಅರಣ್ಯ ಇಲಾಖೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಇದರಿಂದ ತಾಲೂಕಿನ ಜನಸಾಮಾನ್ಯರಿಗೆ ತೊಂದರೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು

ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ ಜಿ.ಗೋಪಾಲಸ್ವಾಮಿ ಮಾತನಾಡಿದರು. ಹೆಚ್.ಡಿ.ಕೋಟೆ ಜೆಡಿಎಸ್ ಅಧ್ಯಕ್ಷ ರಾಜೇಂದ್ರ, ಮುಖಂಡರಾದ ನರಸಿಂಹೇಗೌಡ, ಮಳಲಿ ಶಾಂತಕುಮಾರ್, ಹೆಗ್ಗನೂರು ಸುಧೀರ್, ಬಿ.ಮಟಕೆರೆ ಉದಯ್ ಕುಮಾರ್, ಹೆಚ್. ಅನು, ಹೂವಿನಕೊಳ ಮಹೇಂದ್ರ, ಪುಟ್ಟಹನುಮಯ್ಯ, ಪರಶಿವಮೂರ್ತಿ, ಚಿಕ್ಕತಿಮ್ಮನಾಯಕ, ಸಾಗರೆ ಶಂಕರ್, ಶ್ರೀನಿವಾಸ್, ರವಿಗೌಡ, ಕಾಳಸ್ವಾಮಿ, ಚಂದ್ರು, ಬಸವಣ್ಣ, ರಾಮರಾಜ, ವಕೀಲ ಪ್ರಶಾಂತ್ ಗೌಡ, ಲೇಖನ, ವಿಜಯ್, ಚಾಮನಾಯಕ, ಚೆನ್ನನಾಯಕ, ಹಾಗೂ ಜೆಡಿಎಸ್ ಮುಖಂಡರು ಭಾಗಿಯಾಗಿದ್ದರು.

ಬೆಟ್ಟದಪುರದಲ್ಲಿ ಅಂತರ್ ಶಾಲಾ ಸ್ಪರ್ಧೆ

ಬೆಟ್ಟದಪುರ: ವಿದ್ಯಾರ್ಥಿಯು ಭವಿಷ್ಯದ ಬಗ್ಗೆ ಸ್ಪಷ್ಟವಾದ ಗುರಿ ಹೊಂದಿರಬೇಕು. ಆ ಗುರಿಯನ್ನು ಮುಟ್ಟಲು ಸತತವಾಗಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಪಿರಿಯಾಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ನಂಜುಂಡಸ್ವಾಮಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಡಿಟಿಎಂಎನ್ ವಿದ್ಯಾಸಂಸ್ಥೆ ವತಿಯಿಂದ ಆಯೋಜಿಸಿದ್ದ ಅಂತರ್ ಶಾಲಾ ಸ್ಪರ್ಧೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸತತ ಪ್ರಯತ್ನ, ಶಿಸ್ತು ಬದ್ಧವಾದ ಯೋಜನಾ ಕ್ರಮ ರೂಢಿಸಿಕೊಂಡರೆ ಉನ್ನತ ಸಾಧನೆ ಮಾಡಲು ಸಾಧ್ಯ. ಆತ್ಮವಿಶ್ವಾಸ, ಪ್ರಾಮಾಣಿಕವಾದ ಪ್ರಯತ್ನದಿಂದ ಉನ್ನತ ಸಾಧನೆ ಮಾಡಲು ಸಾಧ್ಯ ಎಂದರು.

ವಿದ್ಯಾಸಂಸ್ಥೆಯ ಖಜಾಂಚಿ ರವಿ ಪಿ ಮಾತನಾಡಿದರು.

ಡಿಟಿಎಂಎನ್ ವಿದ್ಯಾಸಂಸ್ಥೆಯ ಅಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಶ್ರೀಶೈಲಾ, ಖಜಾಂಚಿ ರವಿ.ಪಿ, ಆಡಳಿತಾಧಿಕಾರಿ ನಟರಾಜ್, ನಿರ್ದೇಶಕರಾದ ಸಿ.ಟಿ ಗುರುದತ್, ಬಾಬು, ಮುಖ್ಯಶಿಕ್ಷಕರಾದ ಮುರುಳಿಕೃಷ್ಣ, ರಾಮಶೆಟ್ಟಿ ಸೇರಿದಂತೆ ವಿವಿಧ ಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಲಕ್ಷಾಂತರ ರೂ.ಗಳಿದ್ದ ಗೋಲಕ ತೆರೆಯಲಾಗದೆ ಸಾವಿರಾರೂ ರೂ.ಗಳಿದ್ದ ಗೋಲಕ ಕದ್ದ ಕಳ್ಳರು

ಭೀಮನ ಕೊಲ್ಲಿ ಶ್ರೀ ಮಹದೇಶ್ವರ ದೇವಸ್ಥಾನದ ಬೀಗ ಮುರಿದು ಕಳ್ಳತನ


ಕಳ್ಳತನ ಸಂಭವಿಸಿರುವ ಶ್ರೀ ಭೀಮನ ಕೊಲ್ಲಿ ಮಹದೇಶ್ವರಸ್ವಾಮಿ ದೇವಾಲಯ.


ಲಕ್ಷಕ್ಕೂ ಹೆಚ್ಚು ಹಣ ಇರುವ ಲಾಕರ್ ಗೋಲಕವನ್ನ ತೆಗೆಯಲಾಗದೆ ಬಿಟ್ಟು ಹೋಗಿರುವುದು.

ಹೆಚ್.ಡಿ.ಕೋಟೆ: ತಾಲೂಕಿನ ಭೀಮನ ಕೊಲ್ಲಿ ಶ್ರೀ ಮಹದೇಶ್ವರ, ದೇವಸ್ಥಾನದ ಬೀಗ ಮುರಿದು ಗೋಲಕವನ್ನು ಕದ್ದು ಪರಾರಿಯಾಗಿರುವ ಘಟನೆ ಕಳೆದ ರಾತ್ರಿ ಸಂಭವಿಸಿದೆ.

ಪುಣ್ಯಕ್ಷೇತ್ರ ಭೀಮನ ಕೊಲ್ಲಿ ಶ್ರೀ ಮಹದೇಶ್ವರ ದೇವಾಲಯದಲ್ಲಿ ಶನಿವಾರ ರಾತ್ರಿ ಕಳ್ಳರು ದೇವಾಲಯದ ಬೀಗ ಒಡೆದು ಗರ್ಭಗುಡಿಗೆ ನುಗ್ಗಲು ಸಾಧ್ಯವಾಗದೆ, ದೇವಾಲಯದ ಆವರಣದಲ್ಲಿರುವ ಲಕ್ಷಕ್ಕೂ ಹೆಚ್ಚು ಹಣವಿರುವ ಲಾಕರ್ ಗೋಲಕವನ್ನು ತೆಗೆಯಲು ಸಾಧ್ಯವಾಗದೆ ಸಾವಿರಾರೂ ರೂ. ಸಂಗ್ರಹವಾಗಿದ್ದ ಇನ್ನೆರಡು ಗೋಲಕ ಕದ್ದು ಪರಾರಿಯಾಗಿದ್ದಾರೆ ಎನ್ನಲಾಗಿದೆ. ಸ್ಥಳಕ್ಕೆ ಬೆರಳಚ್ಚು ತಂಡ ಹಾಗೂ ಶ್ವಾನದಳ, ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಗ್ರಾಮದ ಮುಖಂಡ ವೇಣುಗೋಪಾಲ್ ಮಾತನಾಡಿ ಇತ್ತೀಚಿನ ದಿನಗಳಲ್ಲಿ ತಾಲೂಕಿನಲ್ಲಿ ಕಳ್ಳತನಗಳು ಹೆಚ್ಚುತ್ತಿವೆ. ಅದು ಕಳ್ಳರು ದೇವಾಲಯಗಳಲ್ಲಿ ಹೆಚ್ಚು ಕಳ್ಳತನ ಮಾಡುತ್ತಿದ್ದಾರೆ. ಅದಲ್ಲದೆ ಕಳೆದ ಕೆಲ ತಿಂಗಳ ಹಿಂದೆ ಪಟ್ಟಣದಲ್ಲಿ ಪೊಲೀಸರ ಮನೆಯಲ್ಲೇ ಕಳ್ಳರು ಲಕ್ಷಾಂತರ ರೂ. ನಗ–ನಾಣ್ಯ ದೋಚಿ ಹೋಗಿದ್ದಾರೆ. ದಯಮಾಡಿ ಈಗಲಾದರೂ ಪೊಲೀಸರು ಎಚ್ಚೆತ್ತುಕೊಂಡು ಕಳ್ಳರನ್ನು ಹಿಡಿಯಲು ಮುಂದಾಗಿ ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ದೇವಸ್ಥಾನದ ಕಮಿಟಿ ಅಧ್ಯಕ್ಷ ಎಂಪಿಎಸ್ ಮೂರ್ತಿ, ಕಾರ್ಯದರ್ಶಿ ಎಂ.ಎನ್. ಜಗದೀಶ್, ಸದಸ್ಯರಾದ ದಯಾನಂದ್, ಗುರುಮಲ್ಲಪ್ಪ, ಗುರುಮೂರ್ತಿ, ಬಸವಣ್ಣ, ಗ್ರಾಮಸ್ಥರು ಈ ಸಂದರ್ಭದಲ್ಲಿ ಹಾಜರಿದ್ದರು.

ರಾಜ್ಯದ 5950 ಗ್ರಾಪಂಗಳಿಗೆ ಮೀಸಲು ನಿಗದಿಗೊಳಿಸಲು ಗ್ರಾಪಂ ಒಕ್ಕೂಟ ಮನವಿ

ಪಿರಿಯಾಪಟ್ಟಣ, ನ.23– ರಾಜ್ಯದ 5,950 ಗ್ರಾಮ ಪಂಚಾಯಿತಿಗಳ ಅಧಿಕಾರಾವಧಿ ಮುಂದಿನ ವರ್ಷ ಜನವರಿ ಮತ್ತು ಫೆಬ್ರವರಿಯಲ್ಲಿ ಮುಗಿಯಲಿದ್ದು, ಸಕಾಲದಲ್ಲಿ ಚುನಾವಣೆ ನಡೆಸಲು ಅನುವಾಗುವಂತೆ ಅಂತಿಮ ಮೀಸಲು ಅಧಿ ಸೂಚನೆ ಹೊರಡಿಸಬೇಕೆಂದು ರಾಜ್ಯ ಗ್ರಾಪಂ ಸದಸ್ಯರ ಮಹಾ ಒಕ್ಕೂಟದ ಮೈಸೂರು ಜಿಲ್ಲಾ ಉಪಾಧ್ಯಕ್ಷ ರವಿಚಂದ್ರ ಬೂದಿತಿಟ್ಟು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು ರಾಜ್ಯದ ಗ್ರಾಪಂಗಳಿಗೆ 2020 ಡಿಸೆಂಬರ್‌ನಲ್ಲಿ ಸಾರ್ವತ್ರಿಕ ಚುನಾವಣೆ ನಡೆದಿತ್ತು. ಅವುಗಳ ಅವಧಿ 2026ರ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಮುಕ್ತಾಯವಾಗಲಿದೆ. ಮುಂದಿನ ಅವಧಿಗೆ ಹೊಸದಾಗಿ ಚುನಾವಣೆ ನಡೆಸಬೇಕಾದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಸೆಕ್ಷನ್ 5(5)ರ ಅನ್ವಯ ಮೀಸಲು ನಿಗದಿಯಾಗಬೇಕು. ಈ ಮೀಸಲು ನಿಗದಿಪಡಿಸಬೇಕಾಗಿರುವುದು ಸರಕಾರದ ಜವಾಬ್ದಾರಿಯಾಗಿದೆ. ಅದೇ ರೀತಿ ಚುನಾವಣೆ ನಡೆಸುವುದು ರಾಜ್ಯ ಚುನಾವಣಾ ಆಯೋಗದ ಹೊಣೆಗಾರಿಕೆಯಾಗಿದೆ. ಮೀಸಲು ಅಂತಿಮಗೊಳ್ಳುವವರೆಗೆ ಚುನಾವಣಾ ದಿನಾಂಕ ಘೋಷಿಸಲು ಸಾಧ್ಯವಿಲ್ಲ ಎಂದು ಈಗಾಗಲೇ ಆಯೋಗ ಹೇಳಿದೆ. ಒಟ್ಟು ಸ್ಥಾನಗಳಿಗೆ ಮೀಸಲು ನಿಗದಿಪಡಿಸಿ ಸರಕಾರ ಅಂತಿಮ ಅಧಿಸೂಚನೆ ಹೊರಡಿಸದ ಹೊರತು ಚುನಾವಣಾ ವೇಳಾಪಟ್ಟಿ ಪ್ರಕಟಿಸಲು ಚುನಾವಣಾ ಆಯೋಗಕ್ಕೆ ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಈಗಾಗಲೇ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳಿಗೆ ಐದು ವರ್ಷಗಳಿಂದ ಚುನಾವಣೆ ನಡೆದಿಲ್ಲ. ಈಗ ಗ್ರಾಮ ಪಂಚಾಯಿತಿ ಚುನಾವಣೆಯು ಸಹ ಅದೇ ಹಾದಿ ಹಿಡಿಯುತ್ತಿದೆ ಸಕಾಲದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಸಲು ಸರ್ಕಾರ ಅನುವು ಮಾಡಿಕೊಡಬೇಕು ಇಲ್ಲದಿದ್ದರೆ ಸಂವಿಧಾನದ 74ನೇ ತಿದ್ದುಪಡಿಯ ಆಶಯಕ್ಕೆ ವಿರುದ್ಧವಾಗಿರುತ್ತದೆ ಎಂದಿದ್ದಾರೆ. ಈಗಾಗಲೇ ನಮ್ಮ ಸಂಘದ ರಾಜ್ಯಾಧ್ಯಕ್ಷರು ಮತ್ತು ಜಿಲ್ಲಾಧ್ಯಕ್ಷರು, ಗ್ರಾಮ ಪಂಚಾಯಿತಿ ಸದಸ್ಯರ ಮೀಸಲಾತಿ ಅಂತಿಮಗೊಳಿಸುವಂತೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದು, ಆದಷ್ಟು ಬೇಗ ಗ್ರಾಮ ಪಂಚಾಯಿತಿಗಳ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದ್ದರು.

ಡಿ.3, ವೀರಶೈವ ಮಹಾಸಭಾದ ಸಭಾಭವನ ಉದ್ಘಾಟನೆ

ತಿ.ನರಸೀಪುರದಲ್ಲಿ ಪೋಸ್ಟರ್ ಬಿಡುಗಡೆ, ಮನೆ ಮನೆಗೆ ಆಹ್ವಾನ ಪತ್ರಿಕೆ ಹಂಚಿಕೆಗೆ ಚಾಲನೆ

ತಿ.ನರಸೀಪುರ,ನ.23– ಪಟ್ಟಣದ ವಿವೇಕಾನಂದ ನಗರದಲ್ಲಿ ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾದ ನವೀಕೃತ ಸಭಾಭವನ ಡಿ.3 ರಂದು ಉದ್ಘಾಟನೆಗೊಳ್ಳಲಿದ್ದು, ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಪಟ್ಟಣದ ವಿವೇಕಾನಂದ ನಗರದಲ್ಲಿದ್ದ ತಾಲೂಕು ವೀರಶೈವ ವಿದ್ಯಾರ್ಥಿ ನಿಲಯ ಶಿಥಿಲಗೊಂಡಿದ್ದ ಹಿನ್ನೆಲೆಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅದರ ನವೀಕರಣ ಕಾರ್ಯ ಕೈಗೊಂಡಿತ್ತು. ಈಗ ಅಂದಾಜು 36 ಲಕ್ಷ ರೂ.ಗಳ ವೆಚ್ಚದಲ್ಲಿ ನವೀಕೃತ ಗೊಂಡಿರುವ ಸಭಾಭವನ ಉದ್ಘಾಟನೆಗೆ ಸಿದ್ಧವಾಗಿದ್ದು, ಸಮೀಪದ ಹೆಳವರಹುಂಡಿ ಗ್ರಾಮದಲ್ಲಿ ಸಭಾಭವನ ಉದ್ಘಾಟನಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ವತಿಯಿಂದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಹಾಗು ಮನೆ ಮನೆಗೆ ಆಹ್ವಾನ ಪತ್ರಿಕೆ ಹಂಚಿಕೆಗೆ ಚಾಲನೆ ನೀಡಲಾಯಿತು.

ಈ ವೇಳೆ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಎಸ್ ಎಂ.ಆರ್.ಪ್ರಕಾಶ್ ಪಟ್ಟಣದ ವಿವೇಕಾನಂದ ನಗರದಲ್ಲಿ 36 ಲಕ್ಷ ರೂ.ಗಳ ವೆಚ್ಚದಲ್ಲಿ ಸಭಾ ಭವನವನ್ನು ನವೀಕರಣಗೊಳಿಸಲಾಗಿದ್ದು, ಡಿಸೆಂಬರ್ 3 ರಂದು ಪಟ್ಟಣದ ಎಪಿಎಂಸಿ ಆವರಣದಲ್ಲಿ ಉದ್ಘಾಟನೆ ಹಾಗು ಧಾರ್ಮಿಕ ಸಭೆ ಆಯೋಜಿಸಲಾಗಿದೆ ಎಂದರು.


ವೀರಶೈವ–ಲಿಂಗಾಯತ ಮಹಾಸಭಾದ ನವೀಕೃತ ಸಭಾಭವನ ಉದ್ಘಾಟನೆಯ ಪೋಸ್ಟರ್ ಬಿಡುಗಡೆ ಮಾಡಿದರು.



ನವೀಕೃತ ಸಭಾ ಭವನ

ಡಿಸೆಂಬರ್ 3ರ ಬೆಳಿಗ್ಗೆ 10.30ಕ್ಕೆ ಆರಂಭವಾಗಲಿರುವ ಉದ್ಘಾಟನೆ ಹಾಗೂ ಧಾರ್ಮಿಕ ಸಭೆಯ ದಿವ್ಯ ಸಾನಿಧ್ಯವನ್ನು ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮಿಗಳು ಹಾಗೂ ಸಿದ್ದಗಂಗಾ ಮಠದ ಶ್ರೀ ಸಿದ್ದಗಂಗಾಮಹಾಸ್ವಾಮಿಗಳು ವಹಿಸಲಿದ್ದು, ವಾಟಾಳು ಮಠದ ಸಿದ್ದಲಿಂಗಶಿವಾಚಾರ್ಯ ಮಹಾಸ್ವಾಮಿ, ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮಿಗಳು, ದೇವನೂರು ಮಠದ ಮಹಂತಸ್ವಾಮಿಗಳು, ಗುರು ಕಂಬಳೀಶ್ವರ ಮಠದ ಚೆನ್ನಬಸವ ಸ್ವಾಮಿಗಳು ಹಾಗು ಸಾಲೂರು ಬೃಹನ್ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳ ದಿವ್ಯ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.


ತಾಲೂಕು ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ ಮಾತನಾಡಿ ವೀರಶೈವ ಲಿಂಗಾಯತ ಮಹಾಸಭಾದ ಎರಡು ಕಣ್ಣುಗಳೇ ಆಗಿರುವ ಸುತ್ತೂರು ಹಾಗೂ ಸಿದ್ದಗಂಗಾ ಮಠದ ಪರಮಪೂಜ್ಯರ ಅಮೃತ ಹಸ್ತದಿಂದ ಸಭಾಭವನ ಉದ್ಘಾಟನೆಯಾಗುತ್ತಿದ್ದು,ತಾಲೂಕಿನ ಪ್ರತಿ ಗ್ರಾಮದ ಪ್ರತಿ ಮನೆಯ ವೀರಶೈವ ಬಂಧುಗಳು ಕಾರ್ಯ ಕ್ರಮದಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಈ ವೇಳೆ ಮಹಾಸಭಾದ ಉಪಾಧ್ಯಕ್ಷ ಎಸ್.ಕೆ.ಕಿರಣ್,ನಿರ್ದೇಶಕರಾದ ತೊಂಟೇಶ್, ಬಿ.ಎಂ.ವಿಜಯಕುಮಾರ್, ಎಂ.ಸುರೇಶ್, ಜಿಲ್ಲಾ ಯುವ ಘಟಕದ ಉಪಾಧ್ಯಕ್ಷ ಮಹದೇವ ಪ್ರಸಾದ್, ಮಹಾಪೋಷಕರಾದ ಎನ್. ಲೋಕೇಶ್, ಎಂ.ಸಿದ್ದಲಿಂಗಸ್ವಾಮಿ, ಪೂಜಿತ್ ಮೆಡಿಕಲ್ ಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ರೂಪಾ ಪರಮೇಶ್ ನಿರ್ದೇಶಕಿ ವಿಜಯಲಕ್ಷ್ಮಿ, ಶೋಭಾ,ಗೌದ್ರ ಕುಮಾರ್, ನಾಗೇಂದ್ರ,ಅಡುಗೆ ಪ್ರಭು,ನಂದೀಶ, ವಿಜಿ, ಮೂರ್ತಿ, ರಾಜಶೇಖರ್, ಡಾಲಿ, ಹೆಳವರ ಹುಂಡಿ ನಟರಾಜು,ಗೌಡ್ರ ನಾಗಣ್ಣ,ರೇವಣ್ಣ, ಹರೀಶ,ಬಿ.ಜೆ.ರಾಜಶೇಖರ, ಶಾಮಿಯಾನ ನಾಗೇಶ್, ಗೌಡ್ರ ರಾಜೇಂದ್ರ, ಶಿವಲೀಲಾ, ಬಜ್ಜಿ ನಿಂಗಪ್ಪ,ಕಿರಗಸೂರು ಸುರೇಶ್, ಡಿ.ಎಲ್. ಮಹದೇವಪ್ಪ,ನಿಲಸೋಗೆ ಶೇಖರಪ್ಪ, ಹೊಸೂರುಂಡಿ ಸೋಮಶೇಖರ್, ಮಣಿ, ಹರಿಪ್ರಸಾದ್, ಮಹಾಪೋಷಕ ಆಡಿಟರ್ ಮಂಜುನಾಥ್,ಭತ್ತದ ನಾಗರಾಜು, ನಿಲಸೋಗೆ ಪ್ರಸಾದ್, ಆಟೋ ಮೂರ್ತಿ ಇದ್ದರು.

ಮೈಸೂರು ಮಿತ್ರ

ಮಕ್ಕಳಲ್ಲಿ ಸಾಹಿತ್ಯಾಸಕ್ತಿ ಮೂಡಿಸುವುದು ಅತ್ಯಗತ್ಯ

ರಾಜವಂಶಸ್ಥೆ ತ್ರಿಶಿಕಾ ಕುಮಾರಿ ಒಡೆಯರ್ ಅಭಿಮತ





ಮಕ್ಕಳು ಬರೆದ ಪುಸ್ತಕಗಳನ್ನು ರಾಜ ವಂಶಸ್ಥೆ ತ್ರಿಶಿಕಾ ಕುಮಾರಿ ಒಡೆಯರ್ ಹಾಗೂ ರೂಪಿಕಾ ವಿಕ್ರಂ ಮುತ್ತಣ್ಣ ಬಿಡುಗಡೆ ಮಾಡಿದರು. ಮತ್ತೊಂದು ಚಿತ್ರದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಕ್ಕಳನ್ನು ಕಾಣಬಹುದು

ಮೈಸೂರು, ನ.23(ವಿವಿಹೆಚ್)– ಕಥೆ ಕೇಳುವುದೇ ಒಂದು ರೋಮಾಂಚನಕಾರಿ. ವೇಗದ ಈ ದಿನಗಳಲ್ಲಿ ಮಕ್ಕಳಿಗೆ ಕಥೆ ಹೇಳುವ ಪ್ರತೀತಿ ಅತ್ಯಂತ ಶ್ಲಾಘನೀಯ ಎಂದು ರಾಜ ವಂಶಸ್ಥೆ ತ್ರಿಶಿಕಾ ಕುಮಾರಿ ಒಡೆಯರ್ ಅಭಿಪ್ರಾಯಪಟ್ಟರು.

ನಗರದ ವಿಜಯನಗರದಲ್ಲಿರುವ ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್‌ನಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಭಾನುವಾರ ಏರ್ಪಡಿಲಾಗಿದ್ದ ಮೈಸೂರು ಮಕ್ಕಳಿಗಾಗಿ ಮಕ್ಕಳ ಸಾಹಿತ್ಯೋತ್ಸವ–2025ರ 10ನೇ ಆವೃತ್ತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಕ್ಕಳಲ್ಲಿ ಸಾಹಿತ್ಯಾಸಕ್ತಿ ಮೂಡಿಸುವುದು ಅತ್ಯಗತ್ಯವಾಗಿದ್ದು, ಇಂತಹ ಸಾಹಿತ್ಯೋತ್ಸವಗಳು ಹೆಚ್ಚು ಹೆಚ್ಚು ನಡೆಯಬೇಕಿದೆ. ಮೈಸೂರು ಎಲ್ಲರಲ್ಲೂ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡುವ ಸ್ಥಳ. ಇಂತಹ ವಾತಾವರಣದಲ್ಲಿ ಮಕ್ಕಳು ಜೀವಿಸಿದರೆ ಅವರ ಭವಿಷ್ಯ ಅತ್ಯುತ್ತಮವಾಗಲಿದೆ ಎಂದರು.

ರೂಪಿಕಾ ವಿಕ್ರಂ ಮುತ್ತಣ್ಣ ಅವರು ಮಾತನಾಡಿ, ಇಂದಿನ ವಿದ್ಯಮಾನದಲ್ಲಿ ತಂತ್ರಜ್ಞಾನದ ಬಳಕೆಯಿಂದ ಬೆರಳ ತುದಿಯಲ್ಲಿಯೇ ಮಾಹಿತಿ ಸಿಕ್ಕರೂ, ಪುಸ್ತಕ ಓದುವ ಸಂತೋಷ ಎಲ್ಲೂ ಸಿಗುವುದಿಲ್ಲ. ಪುಸ್ತಕಗಳನ್ನು ಓದುತ್ತಾ ಮುಂದಿನ ಸಾಲು ಏನೆಂಬುದನ್ನು ತಿಳಿಯಲು ಉತ್ಸುಕತೆಯಿಂದ ಓದುವುದೇ ಸೊಗಸು ಎಂದರು.

ಈ ಯುಗದ ಮಕ್ಕಳು ಬೆಳೆಯುವ ಹಂತದಲ್ಲಿಯೇ ಓದುವುದನ್ನು ರೂಢಿಸಿಕೊಳ್ಳಬೇಕು. ಪುಸ್ತಕಗಳ ಓದು ಕೇವಲ ಪಠ್ಯವಾಗಿರದೇ ವ್ಯಕ್ತಿತ್ವ ವಿಕಸನಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಮಕ್ಕಳೇ ಬರೆದ 'ಅಡ್ವೆಂಚರ್ ಆಫ್ ಲಿಲ್ಲಿ ಅಂಡ್ ಲಿಯೋ', 'ದಿ ಟ್ರಿಪ್ ಟು ದಿ ಫ್ಯಾಂಟಸಿ ವರ್ಲ್ಡ್, ಕ್ಯಾಪ್', 'ಗೌನ್ ಅಂಡ್ ಲಿಟರ್ಸ್ ಅನ್ ಸೆಟ್' ಹಾಗೂ 'ದಿ ಬುಕ್ ಆಫ್ ವೈಲ್ಡ್ ಚಾಲೆಂಜರ್ಸ್' ಕಿರು ಹೊತ್ತಿಗೆಗಳನ್ನು ತ್ರಿಶಿಕಾ ಕುಮಾರಿ ಒಡೆಯರ್ ಅವರು ಬಿಡುಗಡೆಗೊಳಿಸಿದರು.

ಮೈಸೂರು ಮಕ್ಕಳ ಸಾಹಿತ್ಯ ಹಬ್ಬದಲ್ಲಿ 3 ರಿಂದ 15 ವರ್ಷದೊಳಗಿನ 100ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಮಕ್ಕಳಿಗಾಗಿ ಕಥೆ ಕೇಳುವ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಶಿಕ್ಷಣದ ಕಲಿಕೆಯ ಜತೆಗೆ ಕಥೆಗಳನ್ನು ಕೇಳಿ, ಅದರೊಳಗಿನ ನೈತಿಕ ಹಾಗೂ ಮಾನವೀಯ ವಿಚಾರಗಳನ್ನು ಅಳವಡಿಸಿಕೊಳ್ಳುವುದನ್ನು ಸಾಹಿತ್ಯೋತ್ಸವದಲ್ಲಿ ಹೇಳಿಕೊಡಲಾಯಿತು.

ಗ್ರೇಸ್ಟ್ರೋಕ್, ಅಪರ್ಣಾ ಕಪೂರ್ ಅವರಿಂದ ಮಕ್ಕಳಿಗಾಗಿ ಕಥೆ ಹೇಳುವ, ರಂಗಪುತ್ತಳಿ ತಂಡದಿಂದ ಗೊಂಬೆ ಆಟ ಹಾಗೂ ಫಣೀಶ್ ಅವರಿಂದ ಫೈರ್ ಡಿಜೆಯಂತಹ ಮನರಂಜನೀಯ ಕಾರ್ಯಕ್ರಮಗಳು ಮಕ್ಕಳನ್ನು ರಂಜಿಸಿದವು.

ಅಧ್ಯಕ್ಷೆ ಶುಭ ಸಂಜಯ್ ಅರಸ್, ಕಾರ್ಯದರ್ಶಿ ತಂಕಮ್ ಪನಕಲ್, ಚಾಂದಿನಿ ಉಪಸ್ಥಿತರಿದ್ದರು.

> ಜಗನ್ನಾಥ ಆವರಣದಲ್ಲಿ ಮಕ್ಕಳಿಗಾಗಿ ಆಯೋಜಿಸಲಾಗಿದ್ದ ವಿಶೇಷ ಆಟೋಟ ಪಾಠಗಳ ಸ್ಟಾಲ್‌ಗಳು ಮಕ್ಕಳನ್ನು ಅತ್ಯಾಕರ್ಷಿಸಿದವು. ರೋಲ್ ದಿ ಡೈಸ್ ಹೆಸರಿನ ಕುಳಿತು ಆಡುವ ದೇಸೀಯ ಆಟಗಳ ಸಾಮಾಗ್ರಿಗಳನ್ನು ಕೊಂಡುಕೊಳ್ಳಲು ಮಕ್ಕಳು ಮತ್ತು ಪೋಷಕರು ಮುಗಿಬಿದ್ದರು. ಚೌಕಬಾರಾ, ಪಗಡೆ, ಆಡು ಮತ್ತು ಹುಲಿ, ಚೆಸ್ ಸೇರಿದಂತೆ ಹಲವು ಆಟಗಳ ಸಮಾಗ್ರಿಗಳು ಮಾರಾಟಕ್ಕಿದ್ದವು.
>
> ಮತ್ತೊಂದೆಡೆ ಹೂ, ಮಣ್ಣು ವಿವಿಧ ಬಗೆಯ ಲಿಕ್ವಿಡ್ ಬಳಸಿ ಮಾಡಲಾಗಿದ್ದ ಕರಕುಶಲ ಕೀ–ಬಂಚ್, ಡಾಲರ್, ಫೋಟೋ ಫ್ರೇಮ್‌ಗಳು, ನೀತಿ ಕಥೆ, ಸಣ್ಣ ಕಥೆ, ಹಾಸ್ಯ ಕಥೆ, ವಿಜ್ಞಾನ ಸಂಬಂಧಿತ ಕಥೆ ಪುಸ್ತಕಗಳು ಸೇರಿದಂತೆ ಮಕ್ಕಳಿಗೆ ಇಷ್ಟವಾಗುವಂತಹ ಹಲವು ಕಥೆ ಪುಸ್ತಕಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕಿಡಲಾಗಿತ್ತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ತಿಯಾವರ್ ಕುಲಾಯಿ ನಡುಂಗಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಮಸ್ತಿ (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ರಾಧೇಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಧೇಯ (ಕ)	4 ಪ್ರದರ್ಶನಗಳು
ರಾಜಕಮಲ್	
ತಿಯಾವರ್ ಕುಲಾಯಿ ನಡುಂಗಾ (ತ)	4 ಪ್ರದರ್ಶನಗಳು
ಸಂಗಂ	
ಕಂಗ್ರಾಜುಲೇಷನ್ ಬ್ರದರ್(ಕ)	4 ಪ್ರದರ್ಶನಗಳು
ಲಿಡೋ	
ಬ್ರ್ಯಾಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಟಾಸ್ಕ್ (ಕ)	4 ಪ್ರದರ್ಶನಗಳು

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿಗೆ ಸನ್ಮಾನ



ಮೈಸೂರು ತಾಲೂಕು ಜಯಪುರ ಗ್ರಾಮಕ್ಕೆ ಶನಿವಾರ ಬೇಟಿ ನೀಡಿದ್ದ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಅವರನ್ನು ಜಯಪುರ ಹೋಬಳಿ ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಸಂಘದ ಗೌರವಾಧ್ಯಕ್ಷ ಜಯಪುರ ಪಿ.ಬಸವರಾಜು, ಅಧ್ಯಕ್ಷ ಎ.ಮಂಜುನಾಥ್ ದೂರ, ಉಪಾಧ್ಯಕ್ಷ ಡಿ.ಸಾಲುಂಡಿ ಮರೀಗೌಡ, ಕಾರ್ಯದರ್ಶಿ ತಳೂರು ಟಿ.ವಿ.ಮಂಜುನಾಥ, ಕಡಕೊಳ ಮಹದೇವು, ಗೋಪಾಲಪುರ ಸುರೇಶ, ಮೈಮುಲ್ ಮೈಸೂರು ತಾಲೂಕು ಮೇಲ್ವಿಚಾರಕ ಎಸ್.ಸಂತೋಷ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

'ನೆಲದ ನಕ್ಷತ್ರಗಳು', 'ಅರಿವಿನ ದೀವಿಗೆ' ಕೃತಿಗಳ ಬಿಡುಗಡೆ



ಹಿರಿಯ ಸಾಹಿತಿ ಪ್ರೊ.ಸಿ.ಪಿ.ಸಿದ್ಧಾಶ್ರಮ ರಚಿತ 'ನೆಲದ ನಕ್ಷತ್ರಗಳು', 'ಅರಿವಿನ ದೀವಿಗೆ' ಕೃತಿಗಳನ್ನು ಜಾನಪದ ವಿದ್ವಾಂಸ ಪ್ರೊ.ರಾಮೇಗೌಡ (ರಾಗೌ) ಭಾನುವಾರ ಬಿಡುಗಡೆಗೊಳಿಸಿದರು.

ಮೈಸೂರು,ನ.23(ಎಸ್‌ಪಿಎನ್)– ಹಿರಿಯ ಸಾಹಿತಿ ಪ್ರೊ.ಸಿ.ಪಿ.ಸಿದ್ಧಾಶ್ರಮ ರಚಿತ 'ನೆಲದ ನಕ್ಷತ್ರಗಳು', 'ಅರಿವಿನ ದೀವಿಗೆ' ಕೃತಿಗಳನ್ನು ಜಾನಪದ ವಿದ್ವಾಂಸ ಪ್ರೊ.ರಾಮೇಗೌಡ (ರಾಗೌ) ಭಾನುವಾರ ಬಿಡುಗಡೆಗೊಳಿಸಿದರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಭವನದಲ್ಲಿ ಜಿಲ್ಲಾ ಕಸಾಪ ಹಾಗೂ ಉಷಾ ಪ್ರಕಾಶನ ಸಹಯೋಗದೊಂದಿಗೆ ಏರ್ಪಡಿಸಿದ್ದ ಸಮಾರಂಭದಲ್ಲಿ ಕೃತಿ ಬಿಡುಗಡೆ ಗೊಳಿಸಿ ಮಾತನಾಡಿದರು.

ಲೇಖಕನನ್ನು ವಯಸ್ಸಿನ ಆಧಾರದ ಮೇಲೆ ನೋಡುವುದನ್ನು ಬಿಡಬೇಕು. ಆತ ರಚಿಸಿರುವ ಸಾಹಿತ್ಯದಲ್ಲಿ ಎಷ್ಟು ಪ್ರಬುದ್ಧನಾಗಿದ್ದಾನೆ ಎಂಬುದನ್ನು ಮೊದಲು ಅರಿಯಬೇಕು. ಲೇಖಕರಿಗೆ ಸಮಾಜದ ಕುರಿತು ಕಳಕಳಿ ಇದೆಯೇ ಇಲ್ಲವೇ ಎಂಬು ದನ್ನು ತಿಳಿಯಲು ಅರಿವು ಮತ್ತು ನಿತ್ಯ, ಪ್ರತಿಭೆ–ಪರಿಶ್ರಮ, ಸೂಕ್ಷ್ಮತೆ ಮತ್ತು ಸೃಜನ ಶೀಲತೆ ಈ ಮೂರು ಅಂಶಗಳನ್ನು ಮೈಗೂಡಿಸಿ ಕೊಂಡಿದ್ದರೆ, ಸಮಾಜದ ನೋವುಗಳಿಗೆ ಆತ ಸ್ಪಂದಿಸುವ ಗುಣ ಬೆಳೆಸಿಕೊಂಡಿದ್ದಾನೆ ಎಂಬುದನ್ನು ಅರಿಯಲು ಸಾಧ್ಯ ಎಂದರು.

ಕಳೆದ 35 ವರ್ಷಗಳ ಸುದೀರ್ಘ ಸೇವೆಯ ನಂತರ ನಿವೃತ್ತಿ ಹೊಂದಿರುವ ಪ್ರೊ.ಸಿದ್ಧಾಶ್ರಮ ಅವರು ಪೂರ್ಣ ಪ್ರಮಾಣದ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಚಿಂತನೆ, ಆಲೋಚನೆಗಳಿಗೆ ವೇಗಪಡೆದುಕೊಂಡು ಅಕ್ಷರ ರೂಪದಲ್ಲಿ ಕಾಣಿಸಿಕೊಳ್ಳುತ್ತಿವೆ. ಅಂದರೆ, ಅವರ ವಿಭಿನ್ನ ಆಲೋಚನೆಗಳು ಪುಸ್ತಕ ರೂಪದಲ್ಲಿ ಹೊರಬರುತ್ತಿವೆ ಎಂದು ಬಣ್ಣಿಸಿದರು.

ಈ ವೇಳೆ ಮಹಾರಾಜ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಕೆ.ತಿಮ್ಮಯ್ಯ ಕೃತಿ ಕುರಿತು ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕುವೆಂಪು ಸರ್ಕಾರಿ ಪದವಿ ಕಾಲೇಜಿನ ಪ್ರಾಧ್ಯಾಪಕ ಡಾ.ಆರ್.ಗುರುಸ್ವಾಮಿ, ಹಿರಿಯ ಸಾಹಿತಿ ಜಯಪ್ಪ ಹೊನ್ನಾಳಿ, ಉಪನ್ಯಾಸಕಿ ಡಾ.ಎಂ.ಎಸ್.ಅನಿತ ಮಂಗಲ ಕಾರ್ಯಕ್ರಮ ನಿರೂಪಿಸಿದರು.

ಆಕಾಶವಾಣಿ ಸಂಗೀತ ಸಮ್ಮೇಳನದಲ್ಲಿ ಪ್ರೇಕ್ಷಕರ ಹೃದಯಗೆದ್ದ ಮೃದಂಗ, ವೀಣಾವಾದನ



ವಿದ್ವಾನ್ ಎಚ್.ಎಲ್.ಶಿವಶಂಕರಸ್ವಾಮಿ ತಬಲಾ ವಾದನಕ್ಕೆ ಪ್ರೇಕ್ಷಕರು ತಲೆದೂಗಿದರು.

ಮೈಸೂರು, ನ23(ಎಸ್‌ಪಿಎನ್)– ವಿದ್ವಾನ್ ಎಚ್.ಎಲ್.ಶಿವಶಂಕರಸ್ವಾಮಿ ಹಾಗೂ ವಿದುಷಿ ಎಸ್.ವಿ.ಸಹನಾ ಅವರ 'ಮೃದಂಗ' ಹಾಗೂ 'ವೀಣೆ' ನಾದಕ್ಕೆ ಪ್ರೇಕ್ಷಕರು ತಲೆದೂಗಿದರು.

ಮೈಸೂರು ಕುವೆಂಪುನಗರದ ಗಾನಭಾರತೀ ವೀಣೆ ಶೇಷಣ್ಣ ಭವನದಲ್ಲಿ 'ಆಕಾಶವಾಣಿ ಮೈಸೂರು', ತನ್ನ 91ನೇ ವರ್ಷಾಚರಣೆ ಪ್ರಯುಕ್ತ ಆಯೋಜಿಸಿದ್ದ '67ನೇ ಆಕಾಶವಾಣಿ ಸಂಗೀತ ಸಮ್ಮೇಳನ'ದಲ್ಲಿ 'ಮೃದಂಗ ತರಂಗ'ವು ಸಹೃದಯರಲ್ಲಿ ಭಾವದ ಅಲೆ ಎಬ್ಬಿಸಿದರೆ, 'ವೀಣಾ ವಾದನ'ವು ಪ್ರೇಕ್ಷಕರ ಹೃದಯ ತಣಿಸಿದವು.

ಮೃದಂಗಗಳನ್ನು ಸಾಲಾಗಿ ಇರಿಸಿ, ರಾಗಗಳನ್ನು ಹೊಮ್ಮಿಸಿದ್ದ ವಿದ್ವಾನ್ ಶಿವಶಂಕರಸ್ವಾಮಿ, ಲಯ ವೈವಿಧ್ಯದ ಜಾದೂವನ್ನು ಪ್ರೇಕ್ಷಕರ ಮುಂದಿಟ್ಟರು. 'ಬೃಂದಾವನ ಸಾರಂಗ' ರಾಗದಲ್ಲಿ ಸಂಗೀತ ಕಛೇರಿ ಆರಂಭಿಸಿದ ಶಿವಶಂಕರಸ್ವಾಮಿ, 'ತಿಶ್ರಾ', 'ಚತುಶ್ರ', 'ಕಾಂಡಾ', 'ಮಿಶ್ರಾ', 'ಸಂಕೀರ್ಣ' ನಡೆಗಳನ್ನು ನುಡಿಸಿ, ಸಭಿಕರ ಮನಸೂರೆಗೊಂಡರು.

'ಮೃದಂಗ'ಗಳಲ್ಲಿ ಹೊಮ್ಮುತ್ತಿದ್ದ ಸಪ್ತ ಸ್ವರಕ್ಕೆ ಕೊಳಲಿನಲ್ಲಿ ಸಮೀರ್ ರಾವ್ ಹಾಗೂ ವಯಲಿನ್‌ನಲ್ಲಿ ಜೋತ್ಸ್ನಾ ಶ್ರೀಕಾಂತ್ ಹಾಗೂ ಕೀಬೋರ್ಡ್‌ನಲ್ಲಿ ಸಂಗೀತ್ ಥಾಮಸ್ ನುಡಿಸಿದ ನಾದಕ್ಕೆ ಪ್ರೇಕ್ಷಕರು ಭಾವಪರವಶರಾದರು. ತಬಲಾದಲ್ಲಿ ಆದರ್ಶ ಶೆಣೈ, ಡೋಲಾಕ್‌ನಲ್ಲಿ ಅನುಷ್ ಶೆಟ್ಟಿ ಸಾಥ್ ನೀಡಿದರು.

ಕೊನೆಯಲ್ಲಿ ಬಂಕಿಮ್ ಚಂದ್ರ ಚಟರ್ಜಿ ರಚಿಸಿರುವ 'ವಂದೇ ಮಾತರಂ' 150 ವರ್ಷಾಚರಣೆ ಸಂದರ್ಭದಲ್ಲಿ 'ದೇಶ್' ರಾಗ, 'ಆದಿ ತಾಳ'ದಲ್ಲಿ 'ವಂದೇ ಮಾತರಂ' ಗೀತೆಯನ್ನು ನುಡಿಸಿದಾಗ, ಪ್ರೇಕ್ಷಕರ ಹೃದಯದಾಳದಲ್ಲಿನ ದೇಶಪ್ರೇಮವು ಇಮ್ಮಡಿಗೊಂಡು ಸತತ ಚಪ್ಪಾಳೆ ತಟ್ಟಿ ಕಲಾವಿದರನ್ನು ಪ್ರೋತ್ಸಾಹಿಸಿದರು.

ವಿದುಷಿ ಡಾ.ಸಹನಾ ಜಾದೂ: ಕೇಂದ್ರ ಸಂಗೀತ ನಾಟಕ ಅಕಾಡೆಮಿಯ 'ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ' ಪಡೆದಿರುವ ವಿದುಷಿ ಡಾ.ಎಸ್.ವಿ.ಸಹನಾ ಅವರ ವೀಣಾ ವಾದನ ಪ್ರೇಕ್ಷಕರಿಗೆ ಇಂಪು ನೀಡಿತು. 'ಖಮಾಜ್' ರಾಗದ ಮುತ್ತಯ್ಯ ಭಾಗವತಾರ್ ಕೃತಿ 'ಮಾತೇ ಮಲಯಧ್ವಜ ಪಾಂಡ್ಯ ಸಂಜಾತೆ' ಮೂಲಕ ಕಛೇರಿ ಆರಂಭಿಸಿದರು.

ಕರ್ನಾಟಕ ಸಂಗೀತದ ವಾಗ್ಗೇಯಕಾರ ತ್ಯಾಗರಾಜರ 'ಅಮೃತವರ್ಷಿಣಿ' ರಾಗದ 'ಸರಸಿರುಹ ನಯನೆ' ಕೃತಿಯನ್ನು ನುಡಿಸಿ ಮಂತ್ರಮುಗ್ಧಗೊಳಿಸಿದರು. ಅವರಿಗೆ ಮೃದಂಗದಲ್ಲಿ ಅರ್ಜುನ್ ಕುಮಾರ್, ಘಟಂನಲ್ಲಿ ಜಿ.ಎಸ್.ರಾಮಾನುಜನ್ ಸಾಥ್ ನೀಡಿದರು.



ವಿದುಷಿ ಎಸ್.ವಿ.ಸಹನಾ ವೀಣಾ ವಾದನ

ರಾಜ್ಯ ಒಕ್ಕಲಿಗರ ಸಂಘದ ಪದಾಧಿಕಾರಿಗಳ ಅವಿರೋಧ ಆಯ್ಕೆ

ಎಲ್. ಶ್ರೀನಿವಾಸ್ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿಯಾಗಿ ಮೈಸೂರಿನ ಸಿ.ಜಿ.ಗಂಗಾಧರ್, ಕೆ.ವಿ.ಶ್ರೀಧರ್ ಖಜಾಂಚಿ



ಕೆ.ವಿ.ಶ್ರೀಧರ್



ಸಿ.ಜಿ.ಗಂಗಾಧರ್

ಮೈಸೂರು, ನ.23– ಪ್ರತಿಷ್ಠಿತ ರಾಜ್ಯ ಒಕ್ಕಲಿಗರ ಸಂಘಕ್ಕೆ ಇದೇ ಮೊದಲ ಬಾರಿಗೆ ಅವಿರೋಧವಾಗಿ ಪದಾಧಿಕಾರಿಗಳ ಆಯ್ಕೆಯಾಗಿದೆ.

ಅಧ್ಯಕ್ಷರಾಗಿ ಬೆಂಗಳೂರಿನ ಎಲ್.ಶ್ರೀನಿವಾಸ್, ಉಪಾಧ್ಯಕ್ಷರಾಗಿ ಸುಳ್ಯದ ಡಾ.ಕೆ.ವಿ.ರೇಣುಕಾಪ್ರಸಾದ್ ಹಾಗೂ ಚನ್ನಪಟ್ಟಣದ ಎಂ.ಪುಟ್ಟಸ್ವಾಮಿ, ಪ್ರಧಾನ ಕಾರ್ಯದರ್ಶಿಯಾಗಿ ಮೈಸೂರಿನ ಸಿ.ಜಿ.ಗಂಗಾಧರ್, ಸಹಾಯಕ ಕಾರ್ಯದರ್ಶಿಯಾಗಿ ಡಾ.ಡಿ.ಕೆ ರಮೇಶ್ ಹಾಗೂ ಖಜಾಂಚಿಯಾಗಿ ಮೈಸೂರಿನ ಕೆ.ವಿ.ಶ್ರೀಧರ್ ಆಯ್ಕೆಯಾಗಿದ್ದಾರೆ.

ಸಂಘದ ಬೆಂಗಳೂರು ಕೇಂದ್ರ ಕಚೇರಿಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಎಲ್ಲಾ 35 ನಿರ್ದೇಶಕರೂ ಮತದಾನ ಇಲ್ಲದೆ ಅವಿರೋಧವಾಗಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲು ಒಮ್ಮತದ ತೀರ್ಮಾನ ಕೈಗೊಂಡರು. ಬಳಿಕ ಚುನಾವಣಾಧಿಕಾರಿಗಳಾದ ಲೋಕೇಶ್ ನಾಗರಾಜು ಹಾಗೂ ಎಂ.ಬಿ.ಮಂಜೇಗೌಡ ಪದಾಧಿಕಾರಿಗಳ ಆಯ್ಕೆ ಪಟ್ಟಿ ಪ್ರಕಟಿಸಿದರು.

ಶತಮಾನ ಪೂರೈಸಿರುವ ರಾಜ್ಯ ಒಕ್ಕಲಿಗರ ಸಂಘದ ಇತಿಹಾಸದಲ್ಲೇ ಮೊದಲ ಬಾರಿಗೆ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಇದಕ್ಕೆ ಕಾರಣರಾದ ಎಲ್ಲಾ ನಿರ್ದೇಶಕರಿಗೂ ಅಭಿನಂದನೆಗಳು ಎಂದು ಖಜಾಂಚಿ ಕೆ.ವಿ.ಶ್ರೀಧರ್ ತಿಳಿಸಿದ್ದಾರೆ.

ವರ್ಷದಿಂದಲೇ ರಾಜ್ಯ ಕಾಂಗ್ರೆಸ್‌ನಲ್ಲಿ ಕುದುರೆ ವ್ಯಾಪಾರ

ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ

ಮೈಸೂರು,ನ.23(ಪಿಎಂ)– ರಾಜ್ಯ ಕಾಂಗ್ರೆಸ್‌ನಲ್ಲಿ ಕುದುರೆ ವ್ಯಾಪಾರ ಶುರುವಾಗಿ ವರ್ಷದ ಮೇಲಾಗಿದ್ದು, ಸಿದ್ದರಾಮಯ್ಯ ಕಂಪನಿಯೂ ಅದೇ ಮಾಡುತ್ತಿದೆ. ಮತ್ತೊಬ್ಬರ ಕಂಪನಿಯೂ ಅದೇ ಮಾಡುತ್ತಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಪ್ರತಿಕ್ರಿಯಿಸಿದರು.

ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲಾ ಆವರಣದಲ್ಲಿ ಭಾನುವಾರ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ಕಾಂಗ್ರೆಸ್‌ನಲ್ಲಿ ಕುದುರೆ ವ್ಯಾಪಾರ ಶುರುವಾಗಿದ್ದು, ದುಡ್ಡು ಕೊಟ್ಟವರಿಗೆ ಸಿಎಂ ಸ್ಥಾನವೆಂಬುದು ಕೇಳಿಬರುತ್ತಿದೆ ಇದೆ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಇವತ್ತಿನ ಕಾಯಿಲೆಯಲ್ಲ. ಇದು ಇಂದಿರಾಗಾಂಧಿ, ರಾಜೀವ್ ಗಾಂಧಿ, ಸೋನಿಯಾ ಗಾಂಧಿ ಕಾಲದಿಂದ ನಡೆದುಕೊಂಡು ಬಂದಿದೆ. ಅವರ ವಂಶಪಾರಂಪರ್ಯದ ವ್ಯವಸ್ಥೆ ಇದು. ಇದನ್ನು ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ಸಿದ್ದರಾಮಯ್ಯನವರ ಸರ್ಕಾರ ವ್ಯವಸ್ಥಿತವಾಗಿ ನಡೆಸುತ್ತಿದೆ. ಭ್ರಷ್ಟಾಚಾರದ ಮತ್ತೊಂದು ಮುಖವಾಗಿ ಈ ದೇಶದಲ್ಲಿ ಯಾವುದಾದರೂ ಸರ್ಕಾರ ಇದ್ದರೆ ಅದು ರಾಜ್ಯ ಕಾಂಗ್ರೆಸ್ ಎಂದು ವಾಗ್ದಾಳಿ ನಡೆಸಿದರು.

ನಮಗೆ ಬಿಜೆಪಿಯವರು 40 ಪರ್ಸೆಂಟ್ ಎನ್ನುತ್ತಿದ್ದರು. ಆದರೆ ಕೇವಲ 4 ಪರ್ಸೆಂಟ್ ಸಹ ನಮ್ಮಲ್ಲಿ ಇರಲಿಲ್ಲ. ಇವರದ್ದು 50ರಿಂದ 70 ಪರ್ಸೆಂಟ್‌ಗೆ ಹೋಗಿ ಇಡೀ ವ್ಯವಸ್ಥೆ ಹಾಳಾಗಿದೆ. ರಾಜ್ಯದ ಜನರೇ ಇವರಿಗೆ ಬುದ್ಧಿ ಕಲಿಸಬೇಕೆ ಹೊರತು ಬೇರೆ ಮಾರ್ಗವಿಲ್ಲ. ಜನರ ನೋವು ಅರ್ಥ ಮಾಡಿಕೊಳ್ಳದ ಲಫಂಗ ಸರ್ಕಾರ ಇದು ಎಂದು ಕಿಡಿಕಾರಿದರು.



ಅಧಿಕಾರ ಬಿಟ್ಟು ಕೊಡುವ ಮನಸ್ಥಿತಿಯಲ್ಲಿ ಸಿದ್ದರಾಮಯ್ಯ ಇದ್ದಾರೆ ಎನ್ನಿಸುತ್ತದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯ ನವರಿಗೆ ಅಧಿಕಾರದ ಹುಚ್ಚು ಹಿಡಿದಿದೆ. ನಾನು ಕಂಡ ಸಿದ್ದರಾಮಯ್ಯ ಕಳೆದು ಹೋಗಿದ್ದಾರೆ. ಈಗ ಇರುವ ಸಿದ್ದರಾಮಯ್ಯ ಭ್ರಷ್ಟಾಚಾರದ ಮತ್ತೊಂದು ಮುಖ ಎಂದು ದೂರಿದರು.

ಏನಾದರೂ ಸಲಹೆ ಕೊಡುತ್ತೀರಾ? ಎಂಬುದಕ್ಕೆ ಉತ್ತರಿಸಿ, ನಾನು ಏನೂ ಹೇಳುವುದಿಲ್ಲ. ಅಧಿಕಾರ ವ್ಯಾಮೋಹಕ್ಕೆ ಸಿಲುಕಿದ್ದು, ಅಧಿಕಾರ ಬಿಟ್ಟರೆ ಯಾವ ಹಗರಣಗಳು ಈಚೆ ಬರುತ್ತವೋ ಎನ್ನುವ ಆತಂಕದಲ್ಲಿ ಸಿದ್ದರಾಮಯ್ಯ ಸರ್ಕಾರ ಇದೆ ಎಂದರು. ಈ ಬೆಳವಣಿಗೆಯಿಂದ ಬಿಜೆಪಿಗೆ ಭವಿಷ್ಯದಲ್ಲಿ ಅನುಕೂಲ ಆಗುತ್ತದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ನಮಗೆ ಅದರ ಅವಶ್ಯಕತೆ ಇಲ್ಲ. ನವೆಂಬರ್ ತಿಂಗಳು ಬಂದರೆ ರಾಜ್ಯ ಕಾಂಗ್ರೆಸ್‌ನವರಿಗೆ ಒಂದು ರೀತಿಯಲ್ಲಿ ವಾಂತಿ, ಭ್ರಾಂತಿ ಶುರುವಾಗುತ್ತದೆ ಎಂದು ಲೇವಡಿ ಮಾಡಿದರು.

ಸಿದ್ದರಾಮಯ್ಯನವರು ಒತ್ತಡಕ್ಕೆ ಸಿಲುಕಿದ್ದಾರಾ? ಎಂಬುದಕ್ಕೆ ಉತ್ತರಿಸಿ, ಯಾರ ಒತ್ತಡವೂ ಇಲ್ಲ. ಅವರಿಗೆ ಅಧಿಕಾರದ ಮದ ಏರಿದೆ. ಸಿದ್ದರಾಮಯ್ಯನವರಿಗೆ ಕುರ್ಚಿ ಬಿಡುವ ಬಗ್ಗೆ ಚಿಂತನೆ ಇಲ್ಲ. ಅವರು ಸಿಎಂ ಸ್ಥಾನದಿಂದ ಇಳಿಯಬೇಕೆಂಬ ಆಸೆ ನಮಗೂ ಇಲ್ಲ. ಆದರೆ ಜನಾದೇಶ ಕೊಟ್ಟಿರೋ ಜನರಿಗೆ 1 ಪರ್ಸೆಂಟ್ ಒಳ್ಳೆಯದು ಮಾಡದ ಮೇಲೆ ಇವರಿಗೆ ಅಧಿಕಾರ ಇದ್ದೂ ಏನೂ ಪ್ರಯೋಜನ ಎಂದು ಕಿಡಿಕಾರಿದರು.

ಬಿಜೆಪಿಯನ್ನು ಒಡೆದ ಮನೆ ಎನ್ನುತ್ತಿದ್ದರು ಎಂಬುದಕ್ಕೆ ಪ್ರತಿಕ್ರಿಯಿಸಿ, ಬಿಜೆಪಿ ಎಂದೂ ಒಡೆದಿಲ್ಲ. ನಮ್ಮ ಮೇಲೆ ಇರುವ ನಾಯಕರು 2 ನಿಮಿಷಕ್ಕೆ ಎಲ್ಲವನ್ನೂ ಸರಿದೂಗಿಸುತ್ತಾರೆ. ವ್ಯಕ್ತಿಗಿಂತ ಪಕ್ಷ ದೊಡ್ಡದು, ಪಕ್ಷಕ್ಕಿಂತ ದೇಶ ದೊಡ್ಡದು ಎಂಬುದರಲ್ಲಿ ನಂಬಿಕೆ ಹೊಂದಿರುವುದು ನಮ್ಮ ಪಕ್ಷ. ದೇಶ ಹಾಗೂ ರಾಷ್ಟ್ರದ ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಕೆಲಸ ಮಾಡುತ್ತಿದ್ದಾರೆ ಎಂದರು.

ಕಾಂಗ್ರೆಸ್ ಒಡೆದ ಮನೆ ಮಾತ್ರವಲ್ಲ, ಎಲ್ಲಿ ಬಾಗಿಲು ಇದೆ, ಎಲ್ಲಿ ಇಲ್ಲ ಎಂಬುದೇ ಅವರಿಗೆ ಗೊತ್ತಿಲ್ಲ. ದಿಕ್ಕು ದೆಸೆ ಇಲ್ಲದ ಯಾವುದಾರೂ ಸರ್ಕಾರ ದೇಶದಲ್ಲಿ ಇದ್ದರೆ ಅದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಎಂದು ಹೇಳಿದರು.

ಬೋಗಸ್ ವಿದ್ಯುತ್ ಬಿಲ್‌ಗೆ ಸೆಸ್ಕ್ ಬ್ರೇಕ್

ನೂತನ ತಂತ್ರಜ್ಞಾನದ ಮೀಟರ್ ರೀಡಿಂಗ್ ಉಪಕರಣ ಬಳಕೆ





ಮೈಸೂರು, ನ.23(ಆರ್‌ಕೆ)– ಬೋಗಸ್ ಬಿಲ್‌ಗೆ ಬ್ರೇಕ್ ಹಾಕುವ ಮೂಲಕ ಆದಾಯ ಸೋರಿಕೆ ತಡೆಗಟ್ಟಿ ಗ್ರಾಹಕರು ಬಳಸಿದ ವಿದ್ಯುತ್‌ಗೆ ನಿಖರ ಬಿಲ್ ನೀಡುವ ನೂತನ ಪದ್ಧತಿಯನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಕಾರ್ಯರೂಪಕ್ಕೆ ತಂದಿದೆ.

ನೂತನ ತಂತ್ರಜ್ಞಾನ ಅಳವಡಿಸಿಕೊಂಡು ಮೀಟರ್‌ಗೆ ಸಂಪರ್ಕ ಕಲ್ಪಿಸಿ ಗ್ರಾಹಕರು ನಿಖರವಾಗಿ ಬಳಸಿದಷ್ಟು ವಿದ್ಯುತ್‌ಗೆ ದರದ ಬಿಲ್ ಅನ್ನು ನೀಡುವುದು ಹೊಸ ಪದ್ಧತಿಯ ಸ್ವರೂಪವಾಗಿದೆ. ಈ ಉಪಕರಣಕ್ಕೆ ಪ್ರೋಬ್ ಮೀಟರ್ ರೀಡಿಂಗ್ ಉಪಕರಣವೆಂದು ಕರೆಯಲಾಗುತ್ತಿದ್ದು ಸೆಸ್ಕ್ ವ್ಯಾಪ್ತಿಯ ಸುಮಾರು 1 ಸಾವಿರ ಮಂದಿ ಮೀಟರ್ ರೀಡರ್‌ಗಳಿಗೆ ಇದನ್ನು ನೀಡಲಾಗಿದೆ.

ಪ್ರತಿ ಮನೆಗಳಿಗೆ ಭೇಟಿ ನೀಡಲಿರುವ ಮೀಟರ್ ರೀಡರ್‌ಗಳು ವಿದ್ಯುತ್ ಮೀಟರ್‌ಗೆ ತಾವು ಕೊಂಡೊಯ್ದ ಪ್ರೋಬ್ ಉಪಕರಣವನ್ನು ಅಳವಡಿಸಿ ತಮ್ಮ ಜೊತೆ ಇರುವ ಡಿವೈಸ್‌ಗೆ ಸಂಪರ್ಕ ಕಲ್ಪಿಸುತ್ತಾರೆ. ತಕ್ಷಣವೇ ಅದರಿಂದ ವಿದ್ಯುತ್ ಬಳಸಿದ ಯೂನಿಟ್‌ಗಳಿಗನುಸಾರವಾಗಿ ದರ ಪಟ್ಟಿ ಬರುತ್ತದೆ.

ಈವರೆಗೆ ಮ್ಯಾನುಯಲ್ ಆಗಿ ಮೀಟರ್ ರೀಡರ್‌ಗಳು ವಿದ್ಯುತ್ ಬಿಲ್ ಕೊಡುತ್ತಿದ್ದರು. ಆ ವ್ಯವಸ್ಥೆಯಲ್ಲಿ ಮೀಟರ್ ರೀಡಿಂಗ್ ಹೆಚ್ಚು ಕಡಿಮೆಯಾಗುವ ಸಾಧ್ಯತೆ ಇತ್ತು. ಪರಿಣಾಮ ವಿದ್ಯುತ್ ಬಿಲ್ ಸಹ ವ್ಯತ್ಯಯವಾಗುತ್ತಿತ್ತು. ಅದರಿಂದ ವಿದ್ಯುತ್ ಸರಬರಾಜು ನಿಗಮಕ್ಕೆ ಆದಾಯ ಸೋರಿಕೆಯಾಗುತ್ತಿತ್ತಲ್ಲದೇ, ಗ್ರಾಹಕರು ನಿಜವಾಗಲೂ ಎಷ್ಟು ಯೂನಿಟ್ ಬಳಸಿದ್ದಾರೆಂಬ ನಿಖರವಾದ ಮಾಹಿತಿ ಸಿಗುತ್ತಿರಲಿಲ್ಲ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ ರಾಜು ಅವರು, ನಾವು ಸರಬರಾಜು ಮಾಡುವ ವಿದ್ಯುತ್ ಗ್ರಾಹಕರಿಗೆ ನಿರಂತರವಾಗಿ ಬಳಕೆಯಾಗಬೇಕು ಹಾಗೂ ಅವರು ಬಳಸಿದ ವಿದ್ಯುತ್ ಎಷ್ಟೆಂಬುದು ನಮಗೆ ಸ್ಪಷ್ಟವಾಗಿ ತಿಳಿಯಬೇಕೆಂಬ ಉದ್ದೇಶದಿಂದ ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ನಿಗಮದ ಎಲ್ಲಾ ಮೀಟರ್ ರೀಡರ್‌ಗಳಿಗೂ ಪ್ರೋಬ್ ಉಪಕರಣವನ್ನು ನೀಡಿದ್ದೇವೆ ಎಂದರು.

ಇದರಿಂದ ವಿದ್ಯುತ್ ಸೋರಿಕೆ ತಡೆಗಟ್ಟಬಹುದಲ್ಲದೇ ಬೋಗಸ್ ಬಿಲ್ ನೀಡಿ ನಿಗಮಕ್ಕೆ ವಂಚಿಸುವುದನ್ನು ತಪ್ಪಿಸಬಹುದು. ಹಾಗೂ ಗ್ರಾಹಕರು ತಾವು ಉಪಯೋಗಿಸಿದ ವಿದ್ಯುತ್‌ಗೆ ಸರಿಯಾದ ಬೆಲೆ ನೀಡಲು ಇದು ಸಹಕಾರಿಯಾಗಿದೆ. ಮುಂದೆಯೂ ಈ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದು ನಿಗಮದ ಆರ್ಥಿಕ ಸಂಪನ್ಮೂಲವನ್ನು ಸದೃಢಗೊಳಿಸಲು ನಾವು ಶ್ರಮಿಸುತ್ತೇವೆ ಎಂದು ಅವರು ತಿಳಿಸಿದರು. ಸಾರ್ವಜನಿಕರು ಈ ವಿನೂತನ ವ್ಯವಸ್ಥೆಗೆ ಸಹಕಾರ ನೀಡಿ ಪಾರದರ್ಶಕವಾಗಿ ವಿದ್ಯುತ್ ಬಿಲ್ ಪಡೆಯಲು ಅವಕಾಶ ನೀಡಬೇಕೆಂದು ಮನವಿ ಮಾಡಿದ ಮುನಿಗೋಪಾಲ ರಾಜು ಅವರು, ನಿರಂತರ ಗುಣಾತ್ಮಕ ವಿದ್ಯುತ್ ಪೂರೈಸಲು ಈ ವ್ಯವಸ್ಥೆ ಪೂರಕವಾಗಿದೆ ಎಂದರು.

ರಾಜ್ಯ ಒಕ್ಕಲಿಗರ ಮಹಿಳಾ ಸಂಘದ ಜಿಲ್ಲಾ ಘಟಕ ಉದ್ಘಾಟನೆ

ಮಹಿಳೆಯರು ಸ್ವಯಂ ಉದ್ಯಮಗಳನ್ನು ಸ್ಥಾಪಿಸಲು ಮುಂದಾಗಬೇಕು

ಮಾಹಿತಿ ಹಕ್ಕು ಆಯೋಗದ ಆಯುಕ್ತೆ ಡಾ.ಬಿ.ಆರ್.ಮಮತ ಸಲಹೆ



ಕಾರ್ಯಕ್ರಮದಲ್ಲಿ 'ಲಾ ಗೈಡ್' ಕನ್ನಡ ಕಾನೂನು ಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ (ಮಧ್ಯದಲ್ಲಿರುವವರು), ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಸುಧೀಂದ್ರ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ನ.23(ಎಂಕೆ)– ಗ್ರಾಮೀಣ ಭಾಗದ ಹೆಣ್ಣು ಮಕ್ಕಳನ್ನು ಸಮಾಜದ ಮುನ್ನಲೆಗೆ ತರುವ, ಅವರ ಬದುಕಿಗೆ ಉತ್ತೇಜನ ನೀಡುವ ಕೆಲಸವಾಗಬೇಕು ಎಂದು ರಾಜ್ಯ ಸರಕಾರದ ಮಾಹಿತಿ ಹಕ್ಕು ಆಯೋಗದ ಆಯುಕ್ತೆ ಡಾ.ಬಿ.ಆರ್.ಮಮತ ಸಲಹೆ ನೀಡಿದರು.

ಮೈಸೂರಿನ ಜಯಲಕ್ಷ್ಮೀಪುರಂನ ಮಹಾಜನ ಕಾಲೇಜಿನ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಒಕ್ಕಲಿಗರ ಮಹಿಳಾ ಸಂಘದ ಮೈಸೂರು ಜಿಲ್ಲಾ ಘಟಕ ಉದ್ಘಾಟನೆ ಮತ್ತು ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಯಂ ಉದ್ಯಮ ಸ್ಥಾಪಿಸುವ ಮೂಲಕ ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಮುಂದಾಗಬೇಕು ಎಂದರು.

ಮಹಿಳೆಯರು ಹೆಚ್ಚೆಚ್ಚು ಶಿಕ್ಷಣವಂತರಾಗುತ್ತಿದ್ದು, ಸಮಾಜದಲ್ಲಿ ಸ್ತ್ರೀಯರ ಸಬಲೀಕರಣವಾಗುತ್ತಿದೆ. ಆದ್ದರಿಂದ ಮಹಿಳೆಯರು ಸ್ವಯಂ ಉದ್ಯಮಗಳನ್ನು ಸ್ಥಾಪಿಸಲು ಮುಂದಾಗಬೇಕಿದೆ ಎಂದು ಸಲಹೆ ನೀಡಿದರಲ್ಲದೆ, ಮೈಸೂರು ಭಾಗದಲ್ಲಿ ಒಂದು ಲೇಡಿಸ್ ಕ್ಲಬ್ ಸ್ಥಾಪನೆಯಾಗಬೇಕು. ಇದರ ಮೂಲಕ ಮಹಿಳೆಯ ಅಭಿವೃದ್ಧಿ ಕೆಲಸಗಳು ನಡೆಯಬೇಕು ಎಂದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಮೈಸೂರಿನಲ್ಲಿ ಮಹಿಳೆಯರೇ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದು, ಅಪಾರ ಕೊಡುಗೆ ನೀಡಿದ್ದಾರೆ. ಹಾಗೆಯೇ ಸಮುದಾಯದಲ್ಲಿ ಹಲವಾರು ಸಂಘಟನೆಗಳನ್ನು ಸ್ಥಾಪಿಸುವ ಮೂಲಕ ಒಗ್ಗಟ್ಟಿನಿಂದ ಮುನ್ನಡೆಯಬೇಕಿದೆ. ಸಂಘ ಸಂಸ್ಥೆಗಳ ಮೂಲಕ ಗ್ರಾಮೀಣ ಭಾಗದ ಹೆಣ್ಣು ಮಕ್ಕಳನ್ನು ಮೇಲೆತ್ತುವ ಕೆಲಸ ಮಾಡಬೇಕಿದ್ದು, ಉನ್ನತ ಶಿಕ್ಷಣದಿಂದ ವಂಚಿತರಾದವರಿಗೆ ಸವಲತ್ತುಗಳನ್ನು ಒದಗಿಸಿ, ಅವರಿಗೂ ಶಿಕ್ಷಣ ಕೊಡಿಸಬೇಕು ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ಕಣ್ವ ಡಯಾಗ್ನೋಸ್ಟಿಕ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ಹೆಚ್.ಎಂ ವೆಂಕಟಪ್ಪ, 'ಲಾ ಗೈಡ್' ಕನ್ನಡ ಕಾನೂನು ಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಎ.ಜೆ.ಸುಧೀರ್, ಕರ್ನಾಟಕ ರಾಜ್ಯ ಒಕ್ಕಲಿಗ ಮಹಿಳಾ ಸಂಘದ ಆರ್.ಗೀತಾ, ಡಾ.ಸಿ.ವಿ ಶೈಲಜ, ಹೆಚ್.ಆರ್.ತನುಜ, ಜಿಲ್ಲಾ ಗೌರವಾಧ್ಯಕ್ಷೆ ಪ್ರೇಮ ಶಂಕರೇಗೌಡ, ಜಿಲ್ಲಾಧ್ಯಕ್ಷೆ ಬಿ.ಎನ್.ಮೀನಾ ಮತ್ತಿತರರಿದ್ದರು.

ದೇವರ ಹಳೆಯ ಫೋಟೋಗಳು ಗೌರವಯುತವಾಗಿ ವಿಸರ್ಜನೆ



ದೇವರ ಹಳೆಯ ಫೋಟೋ ಹಾಗೂ ವಿಗ್ರಹಗಳನ್ನು ಸಂಗ್ರಹಿಸಿ, ವಿಲೇವಾರಿ ಮಾಡಿದ ಟೀಂ ಮೈಸೂರು ಸದಸ್ಯರು.

ಮೈಸೂರು, ನ.23– ಟೀಂ ಮೈಸೂರು ಸಂಘಟನೆ ವತಿಯಿಂದ ದೇವರ ಹಳೆಯ ಫೋಟೋಗಳು ಹಾಗೂ ವಿಗ್ರಹಗಳನ್ನು ಸಂಗ್ರಹಿಸಿ, ಸೂಕ್ತ ರೀತಿಯಲ್ಲಿ ವಿಸರ್ಜಿಸುವ ಮೂರನೇ ವಾರದ ಕಾರ್ಯಕ್ರಮ ನಡೆಸಲಾಯಿತು.

ಅರಳಿಕಟ್ಟೆ ಸೇರಿದಂತೆ ಎಲ್ಲೆಂದರಲ್ಲಿ ದೇವರ ಹಳೆಯ ಫೋಟೋ ಹಾಗೂ ವಿಗ್ರಹಗಳನ್ನು ಇಡುವುದನ್ನು ತಪ್ಪಿಸುವ ಸದುದ್ದೇಶದಿಂದ ಇಂದು ಎನ್.ಆರ್.ಮೊಹಲ್ಲಾ ಶಿವಾಜಿ ಪಾರ್ಕ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ಬೆಳಗ್ಗೆ 7ರಿಂದ 10 ಗಂಟೆವರೆಗೆ ಸಂಗ್ರಹವಾದ 200ಕ್ಕೂ ಹೆಚ್ಚು ಹಳೆಯ ದೇವರ ಫೋಟೋಗಳನ್ನು ಪರಿಶೀಲಿಸಿ, ಅವುಗಳಲ್ಲಿ ಮರುಬಳಕೆ ಮಾಡಬಲ್ಲ ಫೋಟೋ ಹಾಗೂ ಫ್ರೇಂಗಳನ್ನು ಬೇರ್ಪಡಿಸಿ, ಅಗತ್ಯವುಳ್ಳವರಿಗೆ ನೀಡಲಾಯಿತು. ತುಂಬಾ ಹಳೆಯದಾದ ಹಾಗೂ ವಿಘ್ನಗೊಂಡ ಫೋಟೋ ಹಾಗೂ ವಿಗ್ರಹಗಳನ್ನು ಗೌರವಯುತವಾಗಿ ಮಣ್ಣಿನಲ್ಲಿ ವಿಲೇವಾರಿ ಮಾಡಿ, ಆ ಜಾಗದಲ್ಲಿ ಗಿಡಗಳನ್ನು ನೆಡಲಾಯಿತು. ಟೀಂ ಮೈಸೂರು ಸಂಘಟನೆಯ ಈ ಸತ್ಕಾರ್ಯವನ್ನು ಸಾರ್ವಜನಿಕರು ಶ್ಲಾಘಿಸಿದರು.

ಈ ಕಾರ್ಯಕ್ರಮದಲ್ಲಿ ಟೀಂ ಮೈಸೂರು ತಂಡದ ಗೋಕುಲ್ ಗೋವರ್ಧನ್, ಕಿರಣ್ ಜೈರಾಮ್ ಗೌಡ, ಅನಿಲ್ ಜೈನ್, ಹಿರಿಯಣ್ಣ, ಶಿವಪ್ರಸಾದ್, ಮನೋಹರ್, ತ್ರಿಮೂರ್ತಿ, ರಾಮಪ್ರಸಾದ್, ಮುರಳಿ, ಯತೀಶ್, ಬಾಲಕೃಷ್ಣ, ಹೇಮಂತ್ ಸಿ.ಗೌಡ, ಬಸವರಾಜ್ ಬಳ್ಳಾರಿ, ಸುನಿಲ್, ಮಂಜುನಾಥ್ ಹುಣಸೂರು, ಶ್ರೀನಿಧಿ, ಮನೋಜ್, ಧರ್ಮೇಂದ್ರ, ಶ್ರೀನಿವಾಸ್, ರಮೇಶ್, ಚಂದನ್, ಭುವನೇಶ್, ಹರ್ಷವರ್ಧನ್, ಶ್ರೀಮತಿ ಉಮಾ, ಶ್ರೀಮತಿ ಸಹನಾ, ಕುಮಾರಿ ಸುಕೃತ, ವರ್ಷಿಣಿ, ಪುಟಾಣಿ ಮಿನುಗು ಮತ್ತಿತರರು ಭಾಗಿಯಾಗಿದ್ದರು.

ಬ್ರಾಹ್ಮಣ ಮಹಾಸಭಾಗೆ ಮೈಸೂರಿನ ಎಸ್.ರಂಗನಾಥ ನೇಮಕ

ಮೈಸೂರು, ನ.23– ಅಖಿಲ ಕರ್ನಾಟಕ ಬ್ರಾಹ್ಮಣ



ಮಹಾಸಭಾದ ರಾಜ್ಯಾಧ್ಯಕ್ಷ ಎಸ್.ರಘುನಾಥ್ ಅವರು ಮೈಸೂರಿನ ಹೊಯ್ಸಳ ಕರ್ನಾಟಕ ಸಂಘದ ನಿರ್ದೇಶಕ ಎಸ್.ರಂಗನಾಥ್ ಅವರನ್ನು ಮಹಾಸಭಾದ ರಾಜ್ಯ ಜಂಟಿ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿ, ಆದೇಶಿಸಿದ್ದಾರೆ. ಸಮಾಜ ಸೇವಕರಾಗಿರುವ ಇವರು, 2024ರ ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಪತ್ರಿಕಾ ಪ್ರಕಟಣೆ

ನಮ್ಮ ಕಕ್ಷಿದಾರರಾದ **ವೆಂಕಟೇಶ್.ಎಸ್.,** ಬಿನ್ ಲೇಟ್ ಶ್ರೀನಿವಾಸನ್, ವಾಸ #196/ಎ, 5ನೇ ಕ್ರಾಸ್, 1ನೇ ಹಂತ, ಗಾಯಿತ್ರಿಪುರಂ, ನಜರ್‌ಬಾದ್ ಮೊಹಲ್ಲಾ, ಮೈಸೂರು ಸಿಟಿ, ರವರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರುಗಳಾದ ನೀಲಮ್ಮ, ನಾರಾಯಣ, ಜಯಲಕ್ಷ್ಮಿ, ಪುಟ್ಟಸ್ವಾಮಿ, ಗೌರಮ್ಮ, ಪುಷ್ಪರವರುಗಳ ವಾಸ #103, 7ನೇ ಕ್ರಾಸ್, 1ನೇ ಹಂತ, ಗಾಯಿತ್ರಿಪುರಂ, ನಜರ್‌ಬಾದ್ ಮೊಹಲ್ಲಾ, ಮೈಸೂರು ಸಿಟಿರವರುಗಳಿಂದ ಖರೀದಿಸಲು ಇಚ್ಛಿಸಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ಹಕ್ಕು ಹಿತಾಸಕ್ತಿ ಇದ್ದಲ್ಲಿ ಹಕ್ಕು ಮತ್ತು ಹಿತಾಸಕ್ತಿಗೆ ಪೂರಕವಾದ ಅಗತ್ಯ ದಾಖಲೆಗಳೊಂದಿಗೆ ಈ ಪತ್ರಿಕಾ ಪ್ರಕಟಣೆಯ ದಿನದಿಂದ **7 ದಿನಗಳ** ಒಳಗಾಗಿ ವಕೀಲರಿಗೆ ಸಲ್ಲಿಸ ತಕ್ಕದ್ದು. ತಪ್ಪಿದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ತಕರಾರು ಇಲ್ಲವೆಂದು ಪರಿಗಣಿಸಿ ಸದರಿ ಸ್ವತ್ತನ್ನು ಖರೀದಿಸಲು ಹಕ್ಕುಳ್ಳವರಾಗಿರುತ್ತಾರೆ. ನಂತರ ಬಂದಂತಹ ಯಾವುದೇ ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ನಜರ್‌ಬಾದ್ ಮೊಹಲ್ಲಾ, ಗಾಯಿತ್ರಿಪುರಂ, 1ನೇ ಹಂತ, 7ನೇ ಕ್ರಾಸ್, ಮನೆ ನಂ. 103 (ನಿವೇಶನ ಸಂಖ್ಯೆ 225) ಸ್ವತ್ತಿನ ಸಂಖ್ಯೆ 60–2–535–36 ಆಗಿದ್ದು, ಇದರ ವಿಸ್ತೀರ್ಣ ಪೂರ್ವ ಪಶ್ಚಿಮ 40 ಅಡಿ ಉತ್ತರ ದಕ್ಷಿಣ 15 ಅಡಿಗಳುಳ್ಳ ಮನೆಗೆ ಚೆಕ್ಕುಬಂದಿ:
ಪೂರ್ವಕ್ಕೆ: ರಸ್ತೆ; ಪಶ್ಚಿಮಕ್ಕೆ: ಮನೆ ನಂ. 222 & 223; ಉತ್ತರಕ್ಕೆ: ಮನೆ ನಂ. 226; ದಕ್ಷಿಣಕ್ಕೆ: ಮನೆ ನಂ: 224.

ಸಹಿ/– ಗೋವಿಂದರಾಜ್, ಬಿ.ಎ. ಎಲ್.ಎಲ್.ಬಿ.
#729/1, 1st Floor, Opp. Sai Sibaba Temple,
Thyagaraja Road, K.R. Mohalla, Mysore.
9448065954, 9880956355

